# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2025




ಬಿಡಿ ಪ್ರತಿ: ರೂ. 10/–

# BSS Construction services

*Building Excellence, Delivered On Time !*

ಪ್ರತಿಯೊಬ್ಬ ಗಂಡಸಿಗೂ ಮನೆ ಮತ್ತು ಹೆಂಡತಿ
ಇರಲೇ ಬೇಕು ... ಸ್ವಂತದ್ದಾದಷ್ಟೂ ಒಳ್ಳೇದು! –© ಬೀchi

---

At BSS, we specialize in delivering top-notch construction services with a focus on quality, reliability, and timely delivery. Whether you're building your dream home or commercial project, we ensure exceptional craftsmanship and seamless execution from start to finish.


## Why Choose Us?

- On-time project completion
- Tailored solutions for every need
- Premium materials & expert craftsmanship
- Affordable pricing with transparent quotes

Contact us today for a consultation and see why we're the trusted choice for all your construction services.

---

**Ph : 080-29731414 Mobile : 9035007003**
**Email: bss1constructions@gmail.com**


ಬೆಂಗಳೂರು
ಗ್ರೇಟರ್ ಬೆಂಗಳೂರು
ಇನ್ನೂ ಏನಿದು... ಗ್ರೇಟ್ , ಗ್ರೇಟರ್ ಅಂದ್ಕೊಂಡು ... ನಮಗೆಲ್ಲ ಯಾವಾಗಿಂದಲೋ ಗೊತ್ತು.. ಬೆಂಗಳೂರೇ 'ಗ್ರೇಟೆಸ್ಟ್' ಅಂತ !

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

NABH ACCREDITED
PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

Mallige Medical Centre Pvt. Ltd.
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 42
ಸಂಚಿಕೆ – 09
ಜೂನ್ – 2025


## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಉಪ್ಪಿನಕಾಯಿ ಎಂಬ ಸೊಗಸು | ಸುಮನಾ | 5 |
| ಉಪ್ಪಿನಕಾಯಿ ನಮಃ | ಇ.ಆರ್. ರಾಮಚಂದ್ರನ್ | 9 |
| ಅಮೋಘ ಉಪ್ಪಿನಕಾಯಿ | ಕವಿತಾ ಹೆಗಡೆ ಅಭಯಂ | 12 |
| ಗಂಜಿಯ ಗಮ್ಮತ್ತು ಗೊತ್ತುಂಟಾ..? | ನಳಿನಿ ಸೂರ್ಯಪ್ರಕಾಶ್ | 14 |
| ಮೂರಕ್ ಬಂದಿದ್ದು ಮೂವತ್ತಕ್ಕೂ.. | ವಾಣಿ ಸುರೇಶ್ | 16 |
| ಬಟರ್ ಬಸಪ್ಪನ ಚಾಣಾಕ್ಷತೆ....! | ವಿ.ವಿಜಯೇಂದ್ರ ರಾವ್ | 19 |
| ತುಂತುರು | ದಂನಆ | 22 |
| ಜನ್ಮ ದಿನಾಂಕದ ಜನ್ಮಾಂತರದ....... | ಗೀತ ಕುಂದಾಪುರ | 23 |
| ಸ್ನೋಯಿ ಎಂಬ ಮುದ್ದು | ಧಾರಿಣಿ ಮಾಯಾ | 26 |
| ಬರ್ತಾವೇನ, ಅ ದಿವಸಾ ತಿರಗಿ? | ಸಿ.ಎ.ವಿಲಾಸ ನಾ ಹುದ್ದಾರ | 28 |
| ವಾಕ್ ಸ್ವಾತಂತ್ರ್ಯ | ಕೆ.ಎಸ್.ಸೋಮೇಶ್ವರ | 31 |
| ಟಿ ವಿ ಆಂಟೆನಾ ಮತ್ತು ಡಿಶ್..... | ರಾಂಕಿ ಬೆಳ್ಳೂರ್ | 36 |
| ಗೊರಕೆ ಪುರಾಣ | ಸಿಂಧು ಹರಿಥಸ್ | 38 |


ವ್ಯಂಗ್ಯ ಚಿತ್ರಗಳು : ಹೊರಪುಟ : ಜೆ. ಬಾಲಕೃಷ್ಣ
ಒಳಪುಟಗಳು : ರಾಂಕಿ ಬೆಳ್ಳೂರ್


**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್



ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ಟ್ರಂಪ್ ಮಧ್ಯಸ್ಥಿಕೆ ಖಂಡಿಸಿ ಪ್ರತಿಭಟನೆ

ಪತ್ರಿಕೆ

ಅರಣ್ಯರೋದನ ಅಂದರೆ ಇದೇ !!

* * *

ಏಳು ಕುಬೇರರ ಅಕ್ರಮ ಆಸ್ತಿ 22 ಕೋಟಿ

ಪತ್ರಿಕೆ

ಕುಬೇರ ಬೆಚ್ಚಿ ಬಿದ್ದನಂತೆ !!

* * *

ಸಚಿವರಿಗೆ ಜವಾಬ್ದಾರಿ ಇರಬೇಕು–ಸುಪ್ರೀಂ ನ್ಯಾಯಾಲಯ

ಸುದ್ದಿ

ಒಪ್ಪಬೇಕಾದ ಮಾತು !!

* * *

150 ವರ್ಷ ಸೇವೆ ಸಲ್ಲಿಸಿರುವ ಭಾರತೀಯ ಹವಾಮಾನ ಸಂಸ್ಥೆಗೆ ಅಪರಂಜಿಯ ಅಭಿನಂದನೆಗಳು !!

* * *

'ಮಾತಿಗೆ ಬದ್ಧ ; ಪ್ರಗತಿಗೆ ಸಿದ್ಧ'

ಮಾನ್ಯ ಮುಖ್ಯಮಂತ್ರಿಗಳು

ರಾಜ್ಯದ ಬೊಕ್ಕಸಕ್ಕೆ....?!?

* * *

ವಿಶ್ವ ಟೆಸ್ಟ್ ಕ್ರಿಕೆಟ್‌ನಲ್ಲಿ ಗೆಲ್ಲುವ ತಂಡಕ್ಕೆ 3.6 ಮಿಲಿಯನ್ ಡಾಲರ್ ಬಹುಮಾನ

ಕ್ರೀಡಾ ಸುದ್ದಿ

ವಿಕೆಟ್‌ಗಳು, ರನ್‌ಗಳು ಹಾಗೂ ಸೆಂಚುರಿಗಳ ಮಹಾಪೂರ ಹರಿಯಲಿದೆ !

* * *

●

# “ನಮ್ಮ ನಿಮ್ಮಲ್ಲಿ ”

**ಶಿವಕುಮಾರ್**

ಅಪರಂಜಿಯ ಮೇ ತಿಂಗಳ ಸಂಚಿಕೆಯನ್ನು ಸಿದ್ಧಪಡಿಸಿ ಅಚ್ಚಿಗೆ ಕಳಿಸಿದ ನಂತರ ಕಾಶ್ಮೀರದ ಭೀಕರ ಹತ್ಯಾಕಾಂಡ ನಡೆದುದರಿಂದ ಆ ಕುರಿತು ಮೇ ಸಂಚಿಕೆಯಲ್ಲಿ ಪ್ರಸ್ತಾಪವಿರಲಿಲ್ಲ. ಈಗಿನ ಈ ಹಂತದಲ್ಲಿ ಆಪರೇಷನ್ ಸಿಂಧೂರ್ ನಡೆದು, ಭಾರತವು ಪಾಕಿಸ್ಥಾನದಲ್ಲಿ ಅಡಗಿರುವ ಉಗ್ರಗಾಮಿಗಳಿಗೆ ತಕ್ಕ ಎಚ್ಚರಿಕೆ ನೀಡಿ,  ಮೂರುದಿನಗಳ ತೀವ್ರ ದಾಳಿಯನಂತರ ಈಗ ತಾತ್ಕಾಲಿಕವಾಗಾದರೂ ಸಂಗ್ರಾಮದ ನಿಲುಗಡೆಯಾಗಿದೆ. ಪಹಲ್ಗಾಮಿನ ಹುಲ್ಲುಗಾವಲಿನಲ್ಲಿ ಹತ್ಯೆಗೆ ಒಳಗಾದ ಎಲ್ಲ ಅಮಾಯಕ ನಾಗರಿಕರು ಹಾಗೂ ನಂತರ ಕಾಶ್ಮೀರದ ಗಡಿ ಪ್ರದೇಶದಲ್ಲಿ ನಡೆದ ಕದನದಲ್ಲಿ ಅಸುನೀಗಿದ ಎಲ್ಲ ಬಂಧುಗಳಿಗೂ  ಅಪರಂಜಿಯ ಹೃದಯಪೂರ್ವಕ ಸಂತಾಪಗಳು.

ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗೆ ಈಗಿನ ಕದನ ವಿರಾಮದ ಪರಿಸ್ಥಿತಿ ಯಾವ ರೂಪ ತಳೆದಿರುತ್ತದೋ ಹೇಳಲಾಗದು. ಕಳವಳ ಆತಂಕ ತುಂಬಿರುವ ಇಂತಹ ಪ್ರಕ್ಷುಬ್ಧ ದಿನಗಳಲ್ಲಿ, ನಮ್ಮ ಮನಸ್ಸಿನ ಸ್ಥಿಮಿತವನ್ನು ನಿಯಂತ್ರಣದಲ್ಲಿಟ್ಟು, ದಿನ ನಿತ್ಯದ ಚಟುವಟಿಕೆಗಳನ್ನು ದಕ್ಷತೆಯಿಂದ ನಿರ್ವಹಿಸುವ ಮನೋನಿಶ್ಚಯವನ್ನು ಗಳಿಸುವ ನಿಟ್ಟಿನಲ್ಲಿ ಹಾಸ್ಯ ಮನೋಭಾವ ಬಹುಮಟ್ಟಿಗೆ ಸಹಾಯಕವಾಗಬಲ್ಲುದು. ಅಪರಂಜಿಯ ಧ್ಯೇಯವೇ ಇದು.

ಉಪ್ಪಿನ ಕಾಯಿಯ ವೈಭವವನ್ನು ದಾಖಲಿಸಿದ ಮೇ ಸಂಚಿಕೆಗೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ಬಂದಿರುವುದು ಸಂತಸದ ಸಂಗತಿ. ಇದೇ ವಿಷಯದ ಮೇಲೆ ಆ ಸಂಚಿಕೆಗೆ ಬಂದ ಹಲವು ಹೆಚ್ಚುವರಿ ಲೇಖನಗಳನ್ನು ಈ ಸಂಚಿಕೆಯಲ್ಲಿ ಅಚ್ಚಿಸಿದ್ದೇವೆ. ಶ್ರೀಮತಿ ಸುಮನಾ, ಶ್ರೀಮತಿ ಕವಿತಾ ಹೆಗಡೆ ಅಭಯಂ, ಶ್ರೀಮತಿ ನಳಿನಿ ಸೂರ್ಯಪ್ರಕಾಶ್, ಶ್ರೀ ಇ.ಆರ್ ರಾಮಚಂದ್ರನ್ ಇವರುಗಳು ಉಪ್ಪಿನಕಾಯಿಯ ಮೇಲೆ ತಮ್ಮದೇ ಆದ ವ್ಯಾಖ್ಯಾನವನ್ನು ಬಹು ಸ್ವಾರಸ್ಯವಾಗಿ ಮೂಡಿಸಿದ್ದಾರೆ. ಶ್ರೀಮತಿ ವಾಣೀ ಸುರೇಶ್ ರವರು ಅಪರಂಜಿಯ ಓದುಗರಿಗೆ ಬಹುಕಾಲದಿಂದ ಪರಿಚಿತರಾಗಿರುವ ನಗೆಗಾರ್ತಿ. ಅವರ ಬರಹದ ಶೈಲಿ ಹಳೆಯ ಮೈಸೂರಿನ ಸಿರಿಗನ್ನಡದ ಆಪ್ತತೆಯನ್ನು ನೆನಪಿಗೆ ತರುತ್ತದೆ. ಈಗಿನ ಜನಾಂಗದವರು ಸೀನಿಯರ್ ಮೊಮೆಂಟ್ಸ್ ಎಂದು ಗೇಲಿಮಾಡುವ ಮರೆವಿನಿಂದ ಉಂಟಾಗುವ ಅವಾಂತರಗಳನ್ನು ಲೇಖಕಿ ಬಹು ಚೆನ್ನಾಗಿ ದಾಖಲಿಸಿದ್ದಾರೆ. ಶ್ರೀಮತಿ ಸಿಂಧುರವರು ಗೊರಕೆಯ ಮೇಲೆ ತಮ್ಮ ಕಲ್ಪನಾ ಲಹರಿಯನ್ನು ಸ್ವಚ್ಛಂದವಾಗಿ ಹರಿಸಿದ್ದಾರೆ. ಮುದ್ದು ಪ್ರಾಣಿಗಳ ಬಗ್ಗೆ ಪ್ರೇಮದ ಸೆಲೆ ಉಕ್ಕುವ ಬಗೆಯ ಕುರಿತು ತಿಳಿಯಬೇಕಾದರೆ ಧಾರಿಣಿ ಮಾಯಾ ಅವರ ಬರಹವನ್ನು ನೀವು ಓದಲೇ ಬೇಕು. ಪ್ರಾಣಿಪ್ರಿಯರೆಲ್ಲರಿಗೂ ಈ ಲೇಖನ ಮುದ ನೀಡುವುದು ಖಂಡಿತ. ಶ್ರೀ ವಿಜಯೇಂದ್ರರಾವ್ ಅವರ ಬಸಪ್ಪನ ಕಥೆ ಕೇಳಿದರೆ ನೀವೇ ಮೂಗಿನ ಮೇಲೆ ಬೆಳಳಿಟ್ಟುಕೊಳ್ಳುವಂತಾಗುತ್ತದೆ. ನಮ್ಮ ಜೀವಯಾತ್ರೆಯಲ್ಲಿ ಈ ಸರ್ಟಿಫಿಕೇಟುಗಳ ಪಾತ್ರ ಎಷ್ಟು ಹಿರಿದು ಎಂಬುದನ್ನು ತಿಳಿಯಬೇಕಾದರೆ ನೀವು ಗೀತಾ ಕುಂದಾಪುರ ಅವರನ್ನೇ ಕೇಳಬೇಕು. ಅಂದಹಾಗೆ ಅಪರಂಜಿಗೆ ಮೊದಲ ಬಾರಿಗೆ ಧಾರವಾಡ ಕನ್ನಡದ ಸೊಗಡನ್ನು ಪರಿಚಯಿಸಿದವರು ನನ್ನ ಸನ್ಮಿತ್ರರಾಗಿದ್ದ  ದಿವಂಗತ ಶ್ರೀನಿವಾಸ ವೈದ್ಯ ಅವರು. ಈಗ ಆ ಪರಂಪರೆಯನ್ನು ನಮ್ಮ ಪತ್ರಿಕೆಯಲ್ಲಿ ಎತ್ತಿ ಹಿಡಿಯುತ್ತಿರುವವರು ಶ್ರೀ ವಿಲಾಸ ಹುದ್ದಾರರು. "ಬರ್ತಾವೇನ

ಆ ದಿವಸ ತಿರುಗಿ" ಲೇಖನದಲ್ಲಿ ಇಂದಿಗೆ ಮುಕ್ಕಾಲು ಶತಮಾನ ಹಿಂದಿನ ಜೀವನ ಶೈಲಿಯನ್ನು ವಿಲಾಸ ಹುದ್ದಾರರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದನ್ನು ನೋಡಬಹುದು. ನಡೆಯುವುದು ಯಾರಿಗೆ ತಿಳಿದಿಲ್ಲ? ಅಂತಹ ತೀರ ಸರಳ ವಿಷಯವನ್ನು ಆರಿಸಿಕೊಂಡು ಅದರಲ್ಲಿನ ವೈವಿಧ್ಯಮಯ ಆಯಾಮಗಳನ್ನು ಪರಿಚಯಿಸುವುದು ಸೋಮೇಶ್ವರರಿಗೆ ಮಾತ್ರ ಸಾಧ್ಯ ಒಟ್ಟಿನಲ್ಲಿ ಓದಿನ ಭೂರಿ ಭೋಜನ ನಿಮಗಾಗಿ ಕಾಯುತ್ತಿದೆ. ಇನ್ನೇಕೆ ತಡ?

■



# ಉಪ್ಪಿನಕಾಯಿ ಎಂಬ ಸೊಗಸು

ಸುಮನಾ

"..ಅದೇನೋ ಅಂತಾನೋರ್ಡು ಉಗಿದು ಉಪ್ಪಿನಕಾಯಿ ಹಾಕಿದ್ರು ಅಂತ ಹಂಗಾಯ್ತು ನಿನ್ನ ಉಪ್ಪಿನಕಾಯಿ ಅಂತ ಅಂತ ಅಮ್ಮ ಹಿಗ್ಗಾ ಮುಗ್ಗಾ ಬೈದು..ಒಂದು ರೀತಿ ಉಗಿದುಪ್ಪಿನ್ಕಾಯಿ ಸ್ಕಿಟ್ ರೆಪ್ರೆಸೆಂಟ್ ಮಾಡ್ತಿದ್ದಂತೆ ಅನಿಸಿತು.

ಉಪ್ಪಿನ ಕಾಯಿ ಹಾಕೋದು ಅಂದ್ರೆ..ಅಷ್ಟು ಸುಲಭಾನಾ??

ಆಗತಾನೇ ಹುಟ್ಟಿದ ಒಂದು ಪುಟ್ಟ ಮಗುವನ್ನು ಜೋಪಾನ ಮಾಡಿದಂತೆ ಮಾಡ್ಬೇಕು ಕಣೇ..ಬಂಗಾರ, ಬಂಗಾರದ ಹಾಗೆ ಕಾಪಾಡ್ಕೋಬೇಕು ಆಹಾ. ಅದ್ಹೇಗೆ ಮಾಡಿದ್ಯೋ?? ಹೇಗ್ಬೇಕೋ, ಯದ್ವಾ ತದ್ವಾ ಹಾಗೆಲ್ಲಾ ಮಾಡಿದ್ರೆ ನೇಲ್ ಪಾಲಿಶ್ ವಾಸನೇನೇ ಬರೋದು, ನೋಡಿಲ್ಲಿ ನಿನ್ನ ಮಹಾ ಸಾಧನೆ ಅಂತ ಅಮ್ಮ ಮಗಳ ಮುಖಕ್ಕೆ ಹಿಡಿದ ಬಾಟಲಿನಿಂದ ಪರ್ಫೆಕ್ಟ್ ನೇಲ್ ಪಾಲಿಶ್ ವಾಸನೇನೇ ಬರ್ತಿತ್ತು. ಅಯ್ಯೋ, ಅಮ್ಮಾ ನೀನು ಹೇಳಿದ ಹಾಗೇನೇ ಮಾಡಿ ಫ್ರಿಡ್ಜ್ ನಲ್ಲಿಟ್ಟಿದ್ದೆ ಆದ್ರೂ ಹೀಗೇಕೆ ನೇಲ್ ಪಾಲಿಶ್ ವಾಸ್ನೆ ಬರ್ತಿದ್ಯಮ್ಮ. ನಂಗಂತೂ ಗೊತ್ತಾಗ್ತಿಲ್ಲ. ಅದಕ್ಕೇ ಏನೋ ಮೊನ್ನೆ ನನ್ನ ನಾದಿನಿ, ಫ್ಯಾಮಿಲಿ ಬಂದಾಗ. ಊಟಕ್ಕೆ ಅಂತ ಬಡಿಸಿದ್ದಾಗ. ತುಂಬಾ ಚೆನ್ನಾಗಿದೆ ಅಂತ ಹೇಳ್ತಾರೇನೋ ಅಂತ ಕಾದು ಕಾದು ಸಾಕಾಯ್ತು. ಅವರವರೇ ಮುಸಿ, ಮುಸಿ ನಗ್ತಿದ್ರು.

ಆಮೇಲೆ ಹೇಳೂ ಬಿಟ್ರು. ಅತ್ತಿಗೆ, ನೀವು ಕೈ, ಬೆರಳು ಕಾಲ್ಬೆರಳ ಉಗುರಿಗೆ ಮಾತ್ರ ನೇಲ್ ಪಾಲಿಶ್ ಹಾಕಿದ್ರೆ ಸಾಕು ಅಂತ. ಈಗ ಗೊತ್ತಾಯ್ತು. ಅದೂ ಅಲ್ದೆ ಕೆಲಸದವಳಿಗೂ ಕೊಟ್ಟಿದ್ದೆ, ಅವಳೂ ಏನೂ ಹೇಳಲಿಲ್ಲ.

ಆದ್ರೆ ಈಗ ಜ್ಞಾಪಕ ಬರ್ತಿದೆ, ನಾನು ಕೊಟ್ಟ ಉಪ್ಪಿನಕಾಯಿಯ ಡಬ್ಬಿ, ಅದನ್ನಿಟ್ಟಿದ್ದ ಪ್ಲಾಸ್ಟಿಕ್ ಕವರ್ ಸಮೇತ. ಮತ್ಯಾವುದೋ ದೊಡ್ಡ ಕವರ್ನಲ್ಲಿ ಆ ತಿಪ್ಪೆ ಗುಂಡಿಗೆ ಎಸೆದಿದ್ಲು, ಎಸೀ ಬೇಕಾದ್ರೆ ಆ ಕಡೆ ಈ ಕಡೆ ನೋಡಿದ್ದೂ ನಾನು ಕಿಟಕಿಯಿಂದ ನೋಡಿದ್ದೆ..

ಏನು ಮಾಡಿದ್ಲೋ ಅನಿಸ್ತಿತ್ತು. ಈಗ ಗೊತ್ತಾಗ್ತಿದೆ. ಆಫೀಸ್ನಲ್ಲಿ ಇವರ ಲೇಡೀಸ್ ಕೊಲೀಗ್ಸ್. ಕೇಳಿದ್ರಂತೆ ನಿಮ್ಮನೇವ್ರು ಯಾವ ಬ್ರಾಂಡ್ ನೇಲ್ ಪಾಲಿಶ್ ಹಾಕ್ತಾರೆ ಅಂತ. ಪಾಪ, ಇವ್ರು ತಬ್ಬಿಬ್ಬಾಗಿ. ಯಾಕೆ. ಅಂದರಂತೆ..

ಏನಿಲ್ಲ ಬಿಡಿ ಸಾರ್, ಉಪ್ಪಿನ ಕಾಯಿಗೂ ಹುಳಿ, ಖಾರ, ಉಪ್ಪು ಜೊತೆ ಸ್ವಲ್ಪ ನೇಲ್ ಪಾಲೀಶ್ ಸೇರ್ಸಿದಾರೇನೊ ಅಂತ ಡೌಟು ಬಂತು ಸರ್, ಅಂತ ಆ ಹೆಂಗೆಳೆಯರೆಲ್ಲಾ ಕಿಸಿ ಕಿಸಿ ನಕ್ಕಿದ್ರು ಅಂತ ಇವ್ರು ಹೇಳಿದ್ದೂ ಜ್ಞಾಪಕ, ಅಂದ್ಲು ಮಗಳು. ಅದೇನೇ ಅಳೀಮಯ್ಯ ನಿಗಾದ್ರೂ ಗೊತ್ತಾಗ್ಬೇಡ್ವೇನೇ? ಅಂತ ಅಮ್ಮ ಅಂದಾಗ ಅಯ್ಯೋ, ನನ್ನ ಕೈನ ಅಡುಗೆ, ಉಪ್ಪಿನ ಕಾಯಿ ಬಗ್ಗೆ ಏನಾದ್ರೂ ಮಾತಾಡೋಕೆ ಅವ್ರಿಗೆ ಫ್ಯೂಸ್ ಎಲ್ಲಿದ್ಯಮ್ಮ? ನಾನೇನೇ ಮಾಡಿದ್ರೂ, ಹೇಗೇ ಮಾಡಿದ್ರೂ ಅಮೃತ, ಆಮೃತ ಅಂತ ಹೇಳ್ತಾರೆ, ಹೇಳ್ಬೇಬೇಕು. ಏನನ್ಕೊಂಡಿದೀಯನಿನ್ಮಗಳನ್ನ ಅಂತ ಜಂಭ ಕೊಚ್ಕೊಂಡ್ಲು..

ಆದ್ರೂ ಅಮ್ಮ ಬೈಯ್ಯೋದು ಬಿಡ್ಲಿಲ್ಲ. ಉಪ್ಪಿನ ಕಾಯಿ ಯಾವುದು ಮಾಡಿದ್ರೂ ದಿನ, ತಿಥಿ, ವಾರ, ಘಳಿಗೆ ನೋಡಿ ಮಾಡ್ಬೇಕು ಕಣೇ, ಯಾವ ರಾಹುಕಾಲ್ದಲ್ಲಿ ಶುರು ಮಾಡಿದ್ಯೋ, ನೋಡು ಈಗ ಕೆಟ್ಟು ಕೂತಿದೆ. ಮಡಿ, ಮೈಲಿಗೆ ಇಲ್ದೆ, ಯಾವ್ಯಾವ್ದೋ

ಚಮಚ ನೀರಿನ ಪಸೆ ಇರೋದು,ಹಾಗೆಲ್ಲಾ ಮುಟ್ಟಿಸಿದ್ರೆ ಹಾಳಾಗಿ ಹೋಗುತ್ತೆ.. ಕರ್ಮ..ಬಡ್ಕೋಬೇಕು..ನಮ್ಮ ಕಾಲ್ದಲ್ಲಿ ಹೊರಗಾಗಿ ಮೂರುದಿನ ಕೂತುಬಿಟ್ರಂತೂ ಸರಿಯೇ ಸರಿ, ನಮ್ಮ ನೆರಳು ಉಪ್ಪಿನ ಕಾಯಿಗೂ ತಗಲದಂತೆ ಇರಬೇಕಿತ್ತು ಕಣೇ, ಏನು ಬಡ್ಕೊಳ್ಳೋ ಅಂತ ಅಮ್ಮ ಒಂದೇ ಸಮ ಬೈಗುಳ ಮುಂದುವರಿಸಿದಾಗ, ಹೋಗ್ಲಿ ಬಿಡು, ಈಗ ಏನಾಯ್ತಮ್ಮಾ, ಅದ್ಯಾಕೆ ಹಾಗೆ ಕೂಗಾಡಿ ಬಿ.ಪಿ.ರೇಸ್ ಮಾಡ್ಕೊತಿದೀಯ..ಆ ಉಪ್ಪಿನಕಾಯಿ ತಿಂದು, ತಿಂದೇ ನಿಂಗೆ ಹಿಂಗೆ ಬಿ.ಪಿ.ರೇಸ್ ಆಗಿರೋದು ಅಂತ ಮಗಳೂ ಅಂದು, ಮುಂದುವರಿಸಿದ್ಲು.

"..ಪಾಪ, ಆ ಡಾಕ್ಟರು ಬೇಡಾ ಬೇಡಾ ಅಂತ ಹೇಳ್ತಾನೇ ಇರ್ತಾರೆ..ನೀನು ಮಾತ್ರ ಕೇಳೋದೇ ಇಲ್ಲ. ಆ ಎದ್ರು ಮನೆ ರಾಮಯ್ಯನ ಕಥೆ ಕೇಳಿಲ್ಲಿ.. ಅವರಿಗೆ ಉಪ್ಪಿನಕಾಯಿ ಅಂದ್ರೆ ಪಂಚಪ್ರಾಣ. ಅವರ ಕಡೆಗಳಿಗೇಲಿ ತುಂಬಾ. ಒದ್ದಾಡಿದ್ರಂತೆ..ಪಾಪ, ಅವರ ಒದ್ದಾಟ ನೋಡೋಕಾಗ್ದೆ ಅಲ್ಲಿಗೆ ಬಂದಿದ್ದ ಕೆಲವರು ಹಿರಿಯರು ಅಂದ್ರು..ಯಾಕೋ ಜೀವ ತುಂಬಾ ಒದ್ದಾಡ್ತಿದೆ ..ಇನ್ನೇನು ಈಗ್ಲೋ ಆಗ್ಲೋ. ಅಂತಿರೋ ಹಾಗಿದೆ, ತುಳಸಿ ನೀರೋ, ಗಂಗೆ ನೀರೋ ಬಾಯಿಗೆ ಬಿಡಿ ಅಂದಾಗ ಅವ್ರು ಕಂಗಾಲಾಗಿ ಬೇಡ, ಬೇಡ ಅಂತ ಕೈ ಸನ್ನೆ ಮಾಡಿದ್ದು ನೋಡಿ ಅಲ್ಲಿದ್ದ ಕೆಲವರು ಹಿರೀರು ಅವರ ಕಡೇ ಆಸೆ ಏನು ಅಂತ ಕೇಳಿ,ಆಮೇಲೆ




ಇಹ,ಪರ ಇಲ್ದೆ ತ್ರಿಶಂಕು ಸ್ವರ್ಗ ದಲ್ಲಿ ನರಳೋ ಹಾಗಾಗ್ಬಾರ್ದು ಅಂತ ಮನೇವ್ರಿಗೆ ಹೇಳಿದ್ರು..ಮಗನೇ ನೀನೇ ಕೇಳಪ್ಪಾ, ನೀನೂ ಅಂದ್ರೆ ಪ್ರಾಣ ಅಂದಾಗ ಹಿರೀ ಮಗ ನಿಧಾನವಾಗಿ ಪ್ರೀತಿಯಿಂದ "..ಅಪ್ಪ, ನಿಮ್ಮ ಕಡೆ ಆಸೆ ಏನು ಅಂತ ಕೇಳಿದ, ಅಷ್ಟರವರೆಗೂ ವಿಲವಿಲ ಒದ್ದಾಡ್ತಿದ್ದ ಆ ಜೀವಕ್ಕೆ ಅದೆಲ್ಲಿತ್ತೋ ಶಕ್ತಿ ಬಂದಂತಾಗಿ..ಮಗನೇ ವಾಸು, ಆ ಎದುರು ಮನೆ ಪಾತಜ್ಜಿ ಬಲು ರುಚಿಯಾಗಿ ಬೆಲ್ಲದ ಮಾವಿನಕಾಯಿ ಉಪ್ಪಿನ ಕಾಯಿ ಮಾಡ್ತಾರಲ್ಲ, ಅದನ್ನು ತಂದು ತಿನ್ಸಪ್ಪಾ..ಆ ರುಚಿ ಇನ್ನೆಲ್ಲೂ ಸಿಗೋಲ್ಲ. ಆಹಾ..ಆಹಾ..ಅಧ್ಭುತ..ಮಹದಧ್ಭುತ..ಅಂತ.. ಹೇಳಿದ ಆ ಕಡೆ ಗಳಿಗೆ ಯಲ್ಲೂ ಅವರ ಬಾಯಿಂದ ನೀರು ಸುರಿದಿದ್ದು ..ಎಲ್ರೂ ಗಮನಿಸಿದ್ರು. ಅವರ ಕಡೆಯಾಸೆಯನ್ನು ಕ್ಷೀಣವಾದ ದನಿಯಲ್ಲಿ ತಡೆ ತಡೆದು ಹೇಳಿದ್ದು ಕೇಳಿ, ಅಲ್ಲಿದ್ದವರಿಗೆಲ್ಲಾ ನಗಬೇಕೋ, ಅಳಬೇಕೋ ಗೊತ್ತಾಗದೆ ಕನ್ಫ್ಯೂಸ್ ಆದ್ರು..ಕೆಲವ್ರು ಶಾಕ್ ಆದ್ರು ಹೀಗೂ ಉಂಟೇ ಅನಿಸಿತ್ತು.

ಅಲ್ಲದೇ ಎದುರು ಮನೇವ್ರು ಕಳೆದ ವಾರ ತೀರ್ಥ ಯಾತ್ರೆಗೆ ಮಕ್ಕಳ ಜೊತೆ ಹೋಗಿದ್ರು, ಇವ್ರಿಗೆ ಹುಷಾರಿಲ್ಲದ್ದು ಗೊತ್ತಿಲ್ಲ ಹಾಗಾಗಿ ನೋಡೋಕೂ ಬಂದಿಲ್ಲ,ಹೋಗಪ್ಪಾ ನೋಡಿ,ಆ ಪಾತಜ್ಜಿನ ಕೇಳಿ ಬೆಲ್ಲದ ಮಾವಿನ ಉಪ್ಪಿನ ಕಾಯಿ ತಂದು ತಿನ್ನಿಸು, ಕಡೇ ಆಸೆ ಪೂರೈಸಲಿಲ್ಲ ಅಂತ ಕೆಟ್ಟ ಹೆಸ್ರು ಬರೋದು ಬೇಡ ಅಂತ ಚಿಕ್ಕಪ್ಪ ಅಂದ್ರು.

ಎದ್ನೋ, ಬಿದ್ನೋ ಅಂತ ಓಡಿದ..ವಾಸು. ಪುಣ್ಯಕ್ಕೆ ಹಿಂದಿನ ದಿನ ರಾತ್ರಿ ಪಾತಜ್ಜಿ, ಮಗ, ಸೊಸೆ ಮಕ್ಕಳು ಎಲ್ಲಾ ಬಂದಿದ್ರು.. ಮಗ ವಾಸು ಹೋಗಿ..ವಿಷಯ ತಿಳಿಸಿದಾಗ.. ಓ.. ಹೌದಾ.. ಪಾಪ, ನಮ್ಗೆ ವಿಷಯಾನೇ ಗೊತ್ತಿರ್ಲಿಲ್ಲ..ನಾವೂ ಬರ್ತೀವಿ ಅಂತ ಪಾತಜ್ಜಿ ದಿನ, ವಾರ, ಘಳಿಗೆ  ನೋಡಿ, ಈಗ ಸಮಯ ಸರಿ ಇದೆ ಸಧ್ಯ, ಅಂತ ಮಡಿಯಾಗಿ ಮರದ ಸೌಟು ಬೆಚ್ಚಗೆ ಮಾಡಿ ದೊಡ್ಡ ಉಪ್ಪಿನ ಕಾಯಿ ಜಾಡಿ ಬಿಸಿಲಿಗೆ ಹಿಡಿದು ಒಂದು ಗಾಜಿನ ಭರಣಿಯಲ್ಲಿ ಹಾಕಿ ಕೊಟ್ರು.ಜೊತೆಗೆ ನೋಡು,ವಾಸು..ಅವ್ರೇನಾದ್ರೂ ಅನ್ನದ ಜೊತೆ ಕಲೆಸಿ ತಿನ್ನಬೇಕು ಅಂದ್ರೆ ಬಿಸಿ, ಬಿಸಿ ಅನ್ನಕ್ಕೆ, ಮನೇಲಿ ಕಾಸಿದ ತುಪ್ಪ ಹಾಕಿ ಕಲೆಸಿ ತಿನ್ಸು ಅಂದಾಗ ಆತಂಕ, ಸಂತೋಷ ಎರಡೂ ತುಂಬಿದ ವಾಸು ಓಡೋಡಿ ಬಂದು..ಅಮ್ಮನಿಗೆ ಪಾತಜ್ಜಿ ಹೇಳಿದ ವಿಷಯ ತಿಳಿಸಿದಾಗ, ಅಮ್ಮ ದುಃಖಿಸುತ್ತಾ ಅಳುತ್ತಲೇ ಬಿಸಿ ಅನ್ನಕ್ಕೆ ತುಪ್ಪ ಹಾಕಿ ಕಲೆಸಿ, ತಿನ್ನಿಸಲು ಮಗನಿಗೆ ಕೊಟ್ರು..

ಮಗ ದುಃಖಿತನಾಗಿ ಅಪ್ಪಾ, ಅಪ್ಪಾ ಪಾತಜ್ಜಿ ಮಾಡಿರೋ ಬೆಲ್ಲದುಪ್ಪಿನ್ಕಾಯಿ ತಿನ್ನಿ ಅಂದಾಕ್ಷಣ..ಅಗಾಧ ಚೈತನ್ಯ ತುಂಬಿದಂತೆ ಅಪ್ಪ, ಹ್ಞೂ.ಹ್ಞೂ..ಕೊಡು ಅನ್ನುವಂತೆ ಸನ್ನೆ ಮಾಡಿದರು..ಬಾಯಿ ಸರಿ ಮಾಡಿಕೊಂಡ್ರು..

ಒಂದು ಉಪ್ಪಿನ ಕಾಯಿಯ ಚೂರು, ರಸ ವನ್ನು ಮಗ ತಿನ್ನಿಸಿದಾಕ್ಷಣ..ರಾಮಯ್ಯನಿಗೆ ಅದೆಷ್ಟು ಖುಷಿ ಆಯ್ತು ಅಂದ್ರೆ..ವಾಹ್..ಈ ಕ್ಷಣಕ್ಕಿಂತ ಮತ್ಯಾವುದೂ ದೊಡ್ಡದಲ್ಲ," ಬ್ರಹ್ಮಾನಂದವಾದ ಮೋಕ್ಷ "ಅಂದ್ರೆ ಇದೇ ಏನೋ ಅನಿಸಿತು..ಸಹಸ್ರ ಬ್ರಹ್ಮ ಕಮಲಗಳ ಆತ್ಮ ಸಾಕ್ಷಾತ್ಕಾರ ಹೊಂದಿದಂತೆ ಆಯ್ತು. ಟ್ಲಾ..ಟ್ಚೊ.ಟ್ಚೊ... ಅಂತ ಅವರಿಗರಿವಿಲ್ಲದೇನೇ ಹೊರಟ ಲೊಟ್ಟೆ ಮನೆಯಿಂದಾಚೆಗೂ ಕೇಳಿಸಿತ್ತು..

ಕಣ್ಣುಗಳಲ್ಲಿ ..ಅದೇನೋ ಆನಂದಭಾಷ್ಪ..ರಾಯರಿಗೆ..ಅಬ್ಬಾ..ಇದಕ್ಕಿಂತ ದೊಡ್ಡ ಸಂಭ್ರಮ, ಸಡಗರ ಯಾವುದೂ ಇರಲಾರದು ಅನ್ನಿಸ್ತು..ಪಾಪ,ಮಗನಿಗೆ ಅವರ ಅಗಾಧ ಚೈತನ್ಯ ನೋಡಿ ಅಪ್ಪ ಬದುಕುತ್ತಾರೇನೋ ಅಂತ ಮತ್ತೆ ಬಿಸಿ, ಬಿಸಿ ಅನ್ನಕ್ಕೆ ತುಪ್ಪ ಹಾಕಿ, ಬೆಲ್ಲದ ಮಾವಿನ ಕಾಯಿ ಉಪ್ಪಿನ ಕಾಯಿ ಕಲೆಸಿ ತಿನ್ನಿಸಿದಾಕ್ಷಣ.. ಆಹಾ. ವಾಹ್. ಸ್ವರ್ಗ ಸ್ವರ್ಗ..ಅಮೃತ,ಅಮೃತ ಕಣೋ ಅಂತ ಚೆನ್ನಾಗೇ ಮಾತಾಡಿದ್ದು. ಎಲ್ರಿಗೂ ಆಶ್ಚರ್ಯವಾಗಿತ್ತು..

ಓ..ಹೋ..ಇದು ಉಪ್ಪಿನಕಾಯಿಯ ಪವಾಡ ಲೋ.ಬಿ.ಪಿ. ಆಗಿದ್ದು..ಸರಿ ಹೋಯ್ತೇನೋ ಅಂದುಕೊಂಡ್ರು ಮನೇವ್ರೆಲ್ಲ..ಅದಕ್ಕೆ ತಕ್ಕಂತೆ ರಾಯರು ಮತ್ತೆ ಕೆಲವು ದಿನ ಬದುಕಿದ್ರು.

ಆದ್ರೆ ಅವರ ಕಡೆಯಾಸೆ ಯಂತೆ ಅವರ ಕಡೆ ಯಾತ್ರೆಗೆ ಅವರ ಪಕ್ಕದಲ್ಲಿ ಉಪ್ಪಿನ ಕಾಯಿ ಜಾಡಿ ಇದ್ದಿದ್ದು..ಊರಿನೆಲ್ಲರ ಮನೆ ಮಾತಾಗಿತ್ತು..ತಮಾಷೆ ಎನಿಸಿದ್ರೂ ನಿಜ ಕಣಮ್ಮ..ಅಂದ್ಲು ಮಗಳು..

ಇಷ್ಟು ಕಥೆ ಕೇಳಿದ ಅಮ್ಮ, ಹೌದು, ಪುಣ್ಯಾತ್ಮ.. ಅವರ ಜೊತೆ ಉಪ್ಪಿನ ಕಾಯೀನೂ ತೊಗೊಂಡು ಹೋದ್ರು  ನೋಡು.

ಆ ಪಾತಜ್ಜಿ ಮಾಡೋ ಉಪ್ಪಿನ ಕಾಯಿಗಳು ಬೇಕಾದಷ್ಟು ವೆರೈಟಿ ಕಣೇ ಆವಕಾಯಿ ಉಪ್ಪಿನ ಕಾಯಿ, ಹೆಸರುಬೇಳೆ ಮಾವಿನ ಕಾಯಿ, ಧಿಡೀರ್ ಉಪ್ಪಿನ ಕಾಯಿ, ಮಾವಿನ ತೊಕ್ಕು, ಗೊಜ್ಜು, ನಿಂಬೆಯ ಉಪ್ಪುಂಗಾಯಿ, ಹೆರಳೇಕಾಯಿ ಉಪ್ಪಿನಕಾಯಿ ಬಾಣಂತಿರ್ಗೆ ಅಂತಾನೇ ಮಾಡಿಡ್ತಾರೆ ಅಮಟೆಕಾಯಿ, ನಲ್ಲಿಕಾಯಿ ಉಪ್ಪಿನಕಾಯಿ. ನಾನೂ ತಿಂದಿದೀನಿ. ಚಿಕ್ಕವರಿದ್ದಾಗ ನಮ್ಮಮ್ಮ ಮಾಡೋ ಮಾವಿನ ಕಾಯಿ ಉಪ್ಪಿನಕಾಯೀನ ಸಂಜೆ ಹೊತ್ತು

ಸ್ನಾಕ್ಸ್ ತರ ಬಟ್ಟಲಿಗೆ ಹಾಕಿಕೊಂಡು ತಿನ್ತಿದ್ವಿ. ಹಾಗೇ ಪಾತಜ್ಜಿ ನಂಗೆ ಮತ್ತಷ್ಟು ವೆರೈಟಿ ಹೇಳಿಕೊಟ್ಟಿದ್ದು.

ಅದ್ಯಾವ್ದಮ್ಮ ಆವಕಾಯಿ ಅಂದ್ರೆ ಯಾವಕಾಯಿ ಅಂದ್ಲು ಮಗಳು. ಅಯ್ಯೋ, ಆವಗಾಯಿ ಉಪ್ಪಿನ ಕಾಯಿ ಅಂದ್ರೆ ಸಾಸಿವೆ ಎಣ್ಣೆ ಹಾಕಿ ಮಾಡೋದು ಕಣೇ. ಬಲೇ ರುಚಿ. ಅದ್ರಲ್ಲೆ "ಆವಗಾಯಿ ಪಲಾವು" ಅಂತ ಬೇರೆ ಈಚೆಗೆ ಯಾರೋ ಮಾಡಿದ ಹೊಸರುಚಿಗೆ ಕುಕಿಂಗ್ ಕಾಂಪಿಟೇಷನ್ ನಲ್ಲಿ ಫಸ್ಟ್ ಪ್ರೈಸ್ ಬಂತಂತೆ. ಆ ತೋತಾಪುರಿ ಯ ಧಿಡೀರ್ ಉಪ್ಪಿನಕಾಯಿಯಂತೂ ಅಧ್ಬುತ. ಕಣೇ.

ಹೇಳ್ತಾ ಹೋದ್ರೇ..ಉಪ್ಪಿನಕಾಯಿಯ ಬಗ್ಗೆ ಮಹಾ ಗ್ರಂಥವನ್ನೇ ಬರೀಬಹುದು ನೋಡು. ಈಗ ಹೊಸರುಚಿ ಯೊಂದು ಮಾಡಿದೀನಿ ನೋಡು. ಹೇಗೂ ಬೇಸಿಗೆ. ಒಳ್ಳೆಯ ತಾಜಾ, ಮಾವಿನಕಾಯಿ ಸಿಕ್ಕಿತ್ತು ಕಣೇ, ತಾಳು ತರ್ತೀನಿ ಅಂತ ಮೊದ್ಲೇ ಬಟ್ಟಲಿನಲ್ಲಿ ತೆಗೆದಿಟ್ಟಿದ್ದ. ಫಳ ಫಳ ಹೊಳೀತಿದ್ದ ಮಾವಿನ ಹೋಳುಗಳ ಉಪ್ಪಿನ ಕಾಯಿ ತಂದು ಕೊಟ್ಟಾಗ ಮಗಳು ರುಚಿನೋಡಿ. ಅಧ್ಬುತ, ಅಧ್ಬುತ ಅಮ್ಮ ಹೇಗೆ ಮಾಡಿದೆ? ಇದರ ಹೆಸರೇನಿಟ್ಟಿದೀಯ ಅಂದ್ಲು.

ಗೊತ್ತು ಕಣೇ.ಎಲ್ರಿಗೂ ಇದು ಇಷ್ಟವಾಗುತ್ತೆ. ತಾಳು ನಿಂಗೂ ಗಾಜಿನ ಭರಣಿಯಲ್ಲಿ ಹಾಕಿ ಕೊಡ್ತೀನಿ.ಇದರ ರೆಸಿಪಿ ಭಾರೀ ಸೀಕ್ರೆಟ್ಟು. ಇದ್ರಲ್ಲಿ ನಿಂಬೇನೂ ಇದೆ, ನೀನು ಯಾರ್ಗೂ ಹೇಳಬೇಡ, ಇನ್ನೂ ಭಾರೀ ಭಾರೀ ಗುಟ್ಟು ಇದೆ.

ಮದ್ವೆ ಆಗಿಲ್ಲ ಅನ್ನೋ ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಿಗೆ ಇದೊಂದು ವರದಾನ. ವಧು, ವರ ಪರೀಕ್ಷೆಗೆ ಅಂತ ಬಂದಾಗ ಇದೊಂಚೂರು ಕೊಟ್ರೆ ಸಾಕು..

ಜೀವಮಾನ ಪರ್ಯಂತ ಸಂಗಾತಿಯಾಗಿರ್ತಾರೆ, ಅಂತ ಕಣ್ಣು ಮಿಟುಕಿಸಿದ್ರು ಅಮ್ಮ.

ಇದರ ಹೆಸರು "ಅಪರಂಜಿ" ಉಪ್ಪಿನಕಾಯಿ ಅಂತ ಕಣೇ 24 ಕ್ಯಾರೆಟ್ ಬಂಗಾರದಷ್ಟೇ ಒರಿಜಿನಲ್. ಅಂತ ಅಪರಂಜಿ ನಗೆ ಬೀರುತ್ತಾ ಅಮ್ಮ ಒಳಹೋದರು. ■

**ಉಪ್ಪಿನಕಾಯಿ ಪ್ರತಿಕ್ರಿಯೆ**

ಉಪ್ಪಿನಕಾಯಿ ಅಪರಂಜಿಯನ್ನು ಓದಿ ಬಗೆಬಗೆಯ ಉಪ್ಪಿನಕಾಯಿಗಳನ್ನೇ ಸವಿದಂತೆ ಆಯಿತು. ಅವುಗಳ ರುಚಿ ಬಾಯಿಗೆ ಇಳಿಯಿತು. ಭೂತಯ್ಯನ ಮಗ ಅಯ್ಯುವಿನ ಲೋಕನಾಥ್ ನೆನಪಾಯಿತು. ಮೊನ್ನೆ ನನ್ನ ಚಡ್ಡಿ ದೋಸ್ತ್ ರಾಮಣ್ಣ ಬಂದು ಏನೋ ಮಾಡುತ್ತಿದ್ದೀಯ ಅಂತ ಕೇಳಿದಾಗ ತರಹೇವಾರಿ ಉಪ್ಪಿನಕಾಯಿ ಸವಿಯುತ್ತಿದ್ದೇನೆ ಎಂದು ಅವುಗಳ ಹೆಸರುಗಳನ್ನು ಹೇಳತೊಡಗಿದೆ. ಮಾವಿನಕಾಯಿ (ಪುಟ 10) ಹೇರಳೇಕಾಯಿ (ಪುಟ 13) ನೆಲ್ಲಿಕಾಯಿ (ಪುಟ 16) ಹಾಗಲಕಾಯಿ (ಪುಟ 18) ಮಿಡಿ ಉಪ್ಪಿನಕಾಯಿ (ಪುಟ 24) ಅಮಟೆಕಾಯಿ (ಪುಟ 32) ನಿಂಬೆಕಾಯಿ (ಪುಟ 1 40) ಸವಿಯುತ್ತಿದ್ದೇನೆ ಎಂದೆ. ಅವನು ಕಕ್ಕಾಬಿಕ್ಕಿಯಾಗಿ ಎಲ್ಲಯ್ಯಾ ಒಂದೂ ಉಪ್ಪಿನಕಾಯಿ ಕಾಣಿಸುತ್ತಿಲ್ಲ ಅಂದಾಗ ಮೇ ತಿಂಗಳ ಅಪರಂಜಿಯನ್ನು ಅವನ ಮುಂದೆ ಹಿಡಿದೆ. ಅವನು ಅಪರಂಜಿ ಪುಟಗಳನ್ನು ತಿರುವುತ್ತಾ ಉಪ್ಪಿನಕಾಯಿ (ಲೇಖನಗಳನ್ನು) ಸವಿಯುತ್ತಾ ನನ್ನನ್ನೇ ಮರೆತ. ಹೀಗಿದೆ ಅಪರಂಜಿ ಮೇ ಸಂಚಿಕೆ ವಿಶೇಷ.

**–ಪ್ರೊ. ಜಿ. ಅಶ್ವಥ್‌ನಾರಾಯಣ್**
ಹಿರಿಯ ವಿದ್ವಾಂಸರು

## ಉಪ್ಪಿನಕಾಯಿ ನಮಃ

✍ಇ.ಆರ್. ರಾಮಚಂದ್ರನ್, ಮೈಸೂರು

'ಅಜ್ಜಿ! ನಿನ್ನನ್ನು ಉಪ್ಪಿನಕಾಯಿ ಹಾಕುವುದರಲ್ಲಿ 'ಎತ್ತಿದ ಕೈ' ಅಂತ ಎಲ್ಲಾರೂ ಹೊಗಳಿ ಅಟ್ಟಕ್ಕೇರಿಸಿದಾರೆ.. ಫೇಮಸ್ ಆಗಿದೀಯ..ಇದೆಲ್ಲಾ ಹೇಗೆ ಕಲ್ತೆ ಅಜ್ಜಿ'.

'ಅದು ನನ್ನಮ್ಮ ಕಲಿಸಿದ್ರೊ......ಉಪ್ಪಿನಕಾಯಿ ಆಮೇಲೆ ಬಂತು...ಮುಂಚೆ ನನಗೆ ಗೊತ್ತಾಗಿದ್ದು ಗಿಣಿ ಮೂತಿ ಮಾವಿನಕಾಯಿ.'

'ಹ್ಯಾಗಜ್ಜಿ?'

'ನಾನು ಸ್ಕೂಲಿಗೆ ಹೋಗುವಾಗ ಸ್ಕೂಲಿನ ಹತ್ತಿರ ಗಿಣಿಮೂತಿ ಮಾವಿನ ಕಾಯಿ ಮಾರೋವ್ರು. 3 ಕಾಸಿಗೆ 1. 6 ಕಾಸಿಗೆ 3 ಕೊಡೋವ್ರು'

'ಆಗ ನಿನಗೆ ದುಡ್ಡು ಕೊಡ್ತಿದ್ರಾ?'

'ಊಹುಂ! ಅಂಗಡಿಗೆ ಹೋಗಿ ಕೊತ್ತಮಿರಿ ಸೊಪ್ಪು, ಸಾಸುವೆ ಏನಾದ್ರೂ ತರಕ್ಕೆ ಹೇಳೋವ್ರು. ತಂದ ಮೇಲೆ 3 ಕಾಸು ಸಿಗೋದು. ಟಿಪ್ಪೊ ಎನೋ ಹೇಳ್ತಾರಲ್ಲ..'

'ಟಿಪ್ಸ್. ಪರವಾಗಿಲ್ಲ ನೀನು ಆಜ್ಜಿ!'

'ಸ್ಕೂಲ್ ಬಿಟ್ಮೇಲೆ ನಾನು ಒಂದು ಇಬ್ಬರ ಹುಡುಗೀರ ಜೊತೆ ಗಿಣಿ ಮೂತಿ ಮಾವಿನಕಾಯಿ ತೊಗೊಂಡು ಅದರೊಳಗೆ ಉಪ್ಪು ಖಾರ ಹಾಕ್ಸಿ ನಿಧಾನವಾಗಿ ನಡ್ಕೊಂಡು ತಿನ್ತಾಬರ್ತಾ ಇದ್ವಿ. ಅದರ ಮುಂದೆ ಬೇರೆ ಯಾವ್ದು ಇಲ್ಲಾ ಕಣೋ! ಹಲ್ಲು ಜುಂ ಅನ್ನೋದು ಕಚ್ಚಿದ ತಕ್ಷಣ. ಆಮೇಲೆ ಅದರ ಮಜಾನೇ ಬೇರೆ. ಗಿಣಿ ಮೂತಿ ಮಾವಿನಕಾಯಿ ಮುಂದೆ ಯಾವ ಪೆಪ್ಪರಮಿಂಟೂ ಚಾಕ್ಲೇಟು ಇಲ್ಲ ನೋಡು.'

'ಹೌದು ಅಜ್ಜಿ".

'ನಿಮ್ಮ ಅಜ್ಜ ಏನ್ ಮಾಡೋವ್ರು ಗೊತ್ತಾ?'

'ಆಜ್ಜ! ನಿನಗೆ ಆವಾಗ್ಲೇ ಅಜ್ಜ ಗೊತ್ತಾ? ಬಾಯ್ ಫ್ರೆಂಡಾ?'

'ನಿನ್ನ ತಲೆ! ನಮ್ಮ ಹಳ್ಳಿ ಎಲ್ಲಾ ಸೇರಿ ಮೂರು ರಸ್ತೆ ಇದ್ರೆ ಹೆಚ್ಚು. ಎಲ್ಲಗ್ರೂ ಎಲ್ಲಾರೂ ಗುರ್ತಿತ್ತು.'

'ಅಜ್ಜ ಏನು ಮಾಡೋವ್ರು ಆ ವಯಸ್ನಲ್ಲೇ?'

'ಊರ ಹೊರಗೆ ಮಾವಿನ ಕಾಯಿ ತೋಪು ಇತ್ತು. ಯಾರೋ ಪಾಳೇಗಾರ ಅಂತೆ. ಅದು ಅವನ್ದು. ಅದನ್ನ ನೋಡ್ಕೊಳ್ಳೊಕ್ಕೆ ಮಾಲಿ ಹಾಕಿದ್ದ. ನಿಮ್ಮ ಅಜ್ಜ ಕಲ್ಲಿಂದ ಗುರಿ ಇಟ್ಟು ಹೊಡೆದು ಮಾವಿನ ಕಾಯಿ ಉದರ್ಸ್ತಿದ್ರು ! ಆಮೇಲೆ ಯಾರದೋ ಕ್ಯಾರ್ಪಿಲ್ಲರ್ ಅಂತೆ....ಅದನ್ನು ಕೊಟ್ರು. ಅದರಿಂದ ಹೊಡೆದು ಕಾಯಿ ನೆಲಕ್ಕೆ ಬೀಳ್ಸೋವ್ರು'.

'ಪರವಾಗಿಲ್ವೆ ಅಜ್ಜ'.

'ಒಂದು ಸರ್ತಿ ಹೊಡೆದು ಕೆಳಗೆ ಬಿದ್ದ ಕಾಯಿಗಳನ್ನು ತೊಗೊಂಡು ಹೋಗೋಷ್ಟರಲ್ಲಿ ಮಾಲಿ ಬಂದು ಅಜ್ಜನ್ನ ಹಿಡ್ಕೊಂಡು ಮರಕ್ಕೆ ಕಟ್ಟಿ ಹಾಕ್ದ!'

'ಅಯ್ಯೊ!'

'ಅವ್ನು ಕೊಡೋ ಏಟ್ಗೆ ಅಜ್ಜು ಕುಯ್ಯೋ ಮರ್ರೋ! ಯಾರೋ ಬಂದು ಬಿಡ್ಸಿದ್ರು'.

'ಮನೇಲಿ ಗೊತ್ತಾಯ್ತಾ?'



'ಮತ್ತೆ! ಎಲ್ಲಾನೂ ಎಲ್ಲರ್ಗೂ ಗೊತ್ತಾಗೋದು. ಮನೇಲಿ ಬಿತ್ತು ಇನ್ನೂ ನಾಲ್ಕು ಬಿಸಿ ಬಿಸಿ ಏಟು".

'ಆದಾದಮೇಲೆ ಬುದ್ಧಿ ಬಂತಾ?'

'ಬುದ್ಧಿನಾ? ಅವರಿಗೆ ಬುದ್ಧಿ ಎಲ್ಲಿ ಇತ್ತೊ! ಸಾಯೋ ತನಕ ಬುದ್ಧಿ ಬಂದರ್ಲಿಲ್ಲ! ಮತ್ತೆ ಕಲ್ಲು ಹೊಡೆದು ಕಾಯಿ ಬೀಳಿಸ್ತಿದ್ರು. ನಮ್ ದಿನಸಿ ಅಂಗಡಿ ರಾಮಣ್ಣನ ಮಗ ಉಪ್ಪು, ಖಾರ ಪೊಟ್ಣ ತರೋವ್ನು. ಶಿವನ ದೇವಸ್ಥಾನದ ಜಗಲಿ ಮೇಲೆ ಕೂತ್ಕೊಂಡು ಎಲ್ಲಾ ಹುಡುಗ್ರೂ ತಿನ್ನೋವ್ರು'.

'ಚೆನ್ನಾಗಿ ಮಜ ಮಾಡೋವ್ರು ಅಜ್ಜ ಅನ್ನು....ನೀನು ಉಪ್ಪಿನ ಕಾಯಿ ಹಾಕ್ತಿದ್ಯ ಅಜ್ಜಿ?'

'ದಂಡಿಯಾಗಿ ಹಾಕ್ತಿದ್ದೆ. ಮಾವಿನಕಾಯಿ, ನಿಂಬೇ ಹಣ್ಣು, ಮಾಕಳಿ ಬೇರು.... ಒಂದು ಸಲ..'

'ಏನಾಯ್ತು ಅಜ್ಜಿ'

'ಒಂದು ಸಲ ಏನಾಯ್ತು ಗೊತ್ತಾ... ನಾವೆಲ್ಲಾ ಹುಡುಗೀರು ದಸರಾ ಹಬ್ಬದಲ್ಲಿ ಗೊಂಬೆ ಕೂಡ್ಸಿದಾರೇಂತ ಒಬ್ಬರ ಮನೆಗೆ ಹೋಗಿದ್ವಿ... ಚಪ್ರುಗೆ ಕಾಯ್ತಾ ಇದ್ವಿ. ಬಹಳ ಹೊತ್ತಾದ್ರೂ ಯಾರೂ ಬರ್ಲಿಲ್ಲ. ಒಳಗಡೆ ಗುಸುಗುಸು ಮಾತು ಕೇಳಿಸ್ತು. ಕೊನೆಗೆ ಯಾರೋ ಅಡುಗೆ ಮನೆಯಿಂದ ಓಡಿ ಬಂದು, ಕೈ ಹಿಡಿರಿ ಅಂದ್ರು.. ಕೈಗೆ ನಿಂಬೆಹಣ್ಣಿನ ಉಪ್ಪಿನಕಾಯಿ ಹಾಕಿದ್ರು'!

'ಉಪ್ಪಿನಕಾಯ್ನ?'

'ಎಂಥ ಘಮೆ ಗೊತ್ತಾ? ಅದನ್ನ ನೆಕ್ತಾ ಯಾರೂ ಏಳ್ಲಿಲ್ಲ! ನಮ್ ಗೀತ ಇನ್ನೊಂದು ಕೊಡಿ ಅಂತ ಕೇಳಿದ್ಲು! ಅದನ್ನೂ ತಿಂದು ಒಂದು ಕೊಡದಷ್ಟು ನೀರು ಕುಡಿದು ಕೈ ವಾಸ್ನೇ ಮೂಸ್ತಾ ಎದ್ವಿ! ಆವಾಗ್ನಿಂದ ಆ ಮನೇನ ಉಪ್ಪಿನಕಾಯಿ ಮನೆ ಅಂತ ಕರಿಯೋಕೆ ಶುರು ಮಾಡಿದ್ವಿ! ಅವರು ಎಲ್ಲಾ ತರಹದ ಉಪ್ಪಿನಕಾಯಿ, ಸಂಡಿಗೆ ಮಾಡಿ ಮಾರೋವ್ರು'.

' ಅಜ್ಜಿ! ನೀನು ಈಗ್ಲೂ ಬಾಯಿ ಚಪ್ಪರಿಸಿಕೊಳ್ತಾ ಇದೀಯ ಅದನ್ನ ನೆನೆಸ್ಕೊಂಡು!'

'ಅಷ್ಟು ಚೆನ್ನಾಗಿರೋದು.

ಆವಾಗ್ಗೇ ಈ ಪದ್ಯ ಸ್ಕೂಲ್ನಲ್ಲಿ ಹಾಡ್ತಿದ್ವಿ.

**ಉಪ್ಪಿನಕಾಯಿ ಹಾಡು ಕೇಳಿ ಬಲು ರುಚಿ**

**ಸ್ವಲ್ಪ ನೀವು ತಿಂದು ನೋಡ್ರಿ ಅದ್ರ ರುಚಿ**

**ಮಾವಿನಕಾಯಿ ನಿಂಬೇ ಕಾಯಿ ಅಮಟೇ ಕಾಯಿ**

**ನೀವು ತಂದು ಹಾಕಬೇಕ್ರಿ ಉಪ್ಪಿನಕಾಯಿ.**

ಒಂದು ಸಲ ನಿಮ್ಮಜ್ಜಂಗೆ ಆಫೀಸಿಗೆ ಮದ್ಯಾಹ್ನ ಊಟಕ್ಕೆ ಮೊಸರನ್ನ ಕಲೆಸಿ ಜೊತೆಗೆ ಮಾಕಳಿಬೇರ್ ಉಪ್ಪಿನಕಾಯಿ ಇಟ್ಟಿದ್ದೆ. ಅಜ್ಜನಿಗೆ ಅದು ಬಹಳ ಇಷ್ಟ. ಊಟ ಆದ್ಮೇಲೆ ಅವರ ಇಂಗ್ಲಿಶ್ ಬಾಸ್ ಕರೆದ್ರು. ಅಜ್ಜಿ ಫೈಲು ತೊಗೊಂಡು ಬಾಸ್ ಟೇಬಲ್ನಲ್ಲಿ ಇಟ್ಟು ಬಂದಿದ್ದರು. ಸ್ವಲ್ಪ ಸೋರಿ ಫೈಲ್ ಮೇಲೆ ಬಂದಿತ್ತು. ಸ್ವಲ್ಪ ಹೊತ್ತಿನ ಮೇಲೆ ಬಾಸ್ ಅವರ ಹತ್ತಿರ ಫೈಲ್ ತಂದು ಒಂದು ಬೆಟ್ಟಿನಿಂದ ಖಾರ ನೆಕ್ಕಿ, 'ವಂಡರ್ಫುಲ್' ಅಂತ ಕೂಗಿದ್ರಂತೆ. ಬರೋ ಭಾನುವಾರ ಮನೇಗೆ ಬರ್ತೀನಿ.. ಇನ್ನೂ ಬೇರೆ ಇದ್ರೆ ನಾವು ಟೇಸ್ಟ್ ಮಾಡಕ್ಕೆ ಬರ್ತಿವಿ' ಅಂದ್ರಂತೆ'.

'ಅವನ ನಾಲಿಗೆ ಸುಡ್ಲಿಲ್ವಾ..? ಆಶ್ಚರ್ಯ?'

'ಅವನು ಆತನ ಹೆಂಡತಿನ ಕರಕೊಂಡು ಬಂದಿದ್ದ. ಆವತ್ತು ಬರೀ ಅನ್ನ ಮಾಡಿ, ಗಜನಿಂಬೆ, ಮಾಕಳಿ ಬೇರು, ಮಾವಿನಕಾಯಿ, ನಿಂಬೇ ಹಣ್ಣಿನ ಉಪ್ಪಿನಕಾಯಿಗಳನ್ನು ಸಾಲಾಗಿಇಟ್ಟಿದ್ದೆ. ಜೊತೆಗೆ ಹಪ್ಪಳ ಸಂಡಿಗೆ ಕರೆದಿದ್ದೆ. ಇಬ್ಬರೂ 'ಟೇಸ್ಟ್' 'ಟೇಸ್ಟ್' ಅಂತ ತುಪ್ಪ ಹಾಕಿಸಿಕೊಂಡು ಚೆನ್ನಾಗಿ ತಿಂದ್ರು. ಕೊನೆಗೆ ಶ್ಯಾವಿಗೆ ಪಾಯಿಸ ತಿಂದು ಹೋದ್ರು. ಅವಳು ಮನೇಗೆ ಉಪ್ಪಿನಕಾಯಿ ತೊಗೊಂಡು ಹೋಗೋದಕ್ಕೆ ಸಣ್ಣ ಸಣ್ಣ ಪಾತ್ರೆಲಿ ಕೊಟ್ಟೆ.'

'ಅಜ್ಜಿ! ಫನ್ಟಾಸ್ಟಿಕ್ ಐ ಸೆ! ಡ್ರಿಂಕ್ಸ್ ಜೊತೆ ಚೆನ್ನಾಗಿರುತ್ತೆ. ಅಜ್ಜನಿಗೆ ಒಳ್ಳೆ ಇನ್ಕ್ರಿಮೆಂಟ್ ಸಿಕ್ಕಿರಬೇಕು'.

'ಮುಂದಿನ ವರ್ಷ ಅಜ್ಜಂಗೆ ಪ್ರಮೋಷನ್ ಸಿಕ್ತು. ಹೆಡ್ ಕ್ಲರ್ಕ ಆದ್ರು. ಅವರ ಕೆಲಸದಿಂದನಾ ಅಥವಾ ನನ್ನ ಉಪ್ಪಿನಕಾಯಿ ಪ್ರಭಾವನಾ ಇವತ್ತಿನವರೆಗೆ ಗೊತ್ತಿಲ್ಲ!

'ಅಜ್ಜಿ!' ■


**ವಾರ್ಷಿಕ ಚಂದಾದರರ ಗಮನಕ್ಕೆ ಮಾತ್ರ**



# ಅಮೋಘ ಉಪ್ಪಿನಕಾಯಿ

ಕವಿತಾ ಹೆಗಡೆ ಅಭಯಂ

ಒಂದು ಪ್ರೀತಿ, ಬೆವರು ಮತ್ತು ಕಣ್ಣೀರಿನ ಕಥೆ ಹೇಳು ಎಂದಿರಾ? ಉಪ್ಪಿನಕಾಯಿಯದಲ್ಲದೆ ಇನ್ನೇನು ಹೇಳಲಿ?

ಉಪ್ಪಿನಕಾಯಿಲ್ಲದ ಊಟವೆಂದರೆ ಭಾರತೀಯರಿಗೆ ಉಸಿರಿಲ್ಲದ ದೇಹದಂತೆ ಅಥವಾ ಬಿಸುಪಿಲ್ಲದ ಅಪ್ಪುಗೆಯಂತೆ. ಊಟವೊಂದಕ್ಕೆ ಬೆಲೆ ಬರುವುದೇ ಉಪ್ಪಿನಕಾಯಿಯ ರುಚಿ, ವೈವಿಧ್ಯ ಮತ್ತು ವೈಶಿಷ್ಟ್ಯದಿಂದ.

ಪ್ರತಿಯೊಂದು ಮನೆಯಲ್ಲೂ ಉಪ್ಪಿನಕಾಯಿಯ ಬಗ್ಗೆ ವಿಶೇಷ ಭಾವನಾತ್ಮಕ ಸಂಬಂಧದ ಕಥೆಯಿದ್ದೇ ಇರುತ್ತದೆ. ಅಜ್ಜಿ ಅಥವಾ ಅಮ್ಮ ಮಾಡಿದ ಉಪ್ಪಿನಕಾಯಿಯನ್ನು ನೆನೆನೆನೆದು ಬಹುತೇಕ ಕಣ್ಣುಗಳು  ಹಸಿಯಾಗುತ್ತವೆ.

ನಮ್ಮ ಅಮ್ಮ ಉಪ್ಪಿನಕಾಯಿಗೆ ತುಂಬ ಫೇಮಸ್ಸು.  ಯಾರೇ ಯಾವಾಗ ಬಂದರೂ ಅಮ್ಮ ಹಾಕುತ್ತಿದ್ದ ಜೀರಿಗೆ ಮಾವಿನಮಿಡಿ, ಅಪ್ಪೆಮಿಡಿ, ಕಡಗಾಯಿ, ನಿಂಬೆಹಣ್ಣಿನ ಉಪ್ಪಿನಕಾಯಿಗಳನ್ನು ಚಪ್ಪರಿಸಿ ಬಾಯಿ ತುಂಬಾ ಹೊಳುತ್ತಿದ್ದದ್ದು ಅಮ್ಮನ ಉಪ್ಪಿನಕಾಯಿಯ ಕೌಶಲ್ಯವನ್ನೇ ಎತ್ತಿ ತೋರುತ್ತಿದ್ದವು. ನನಗಂತೂ ಅಮ್ಮನ ಕಡಗಾಯಿ ಮಾವಿನ ಕಾಯಿ ಉಪ್ಪಿನಕಾಯಿ ಎಂದರೆ ಪ್ರಾಣ. ಒಂದು ಸೌಟು ತಿಂದರೂ ತೃಪ್ತಿಯಾಗುತ್ತಿರಲಿಲ್ಲ.

ಮದುವೆಯ ಹೊಸದರಲ್ಲಿ ನನ್ನ ಗಂಡ ತನ್ನಮ್ಮ, ಅತ್ತಿಗೆ, ಪಕ್ಕದ ಮನೆಯ ಅಜ್ಜಿ ಅಲೌಕಿಕ ರೀತಿಯಲ್ಲಿ ಮಾಡುತ್ತಿದ್ದ  ಉಪ್ಪಿನಕಾಯಿ ವರ್ಣನೆ ಕೇಳಿ ಇನ್ನೂ ಕಂಗಾಲಾಗಿ ಹೋದೆ. 'ಯಾರು ಉಪ್ಪಿನಕಾಯಿ ಮಾಡೋಕೆ ಅಷ್ಟು ಕಷ್ಟ ಪಡ್ತಾರೆ?' ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡು ಮಾರ್ಕೆಟ್ಟಿನಲ್ಲಿ ಸಿಗುವ ಹತ್ತಾರು ಖ್ಯಾತ ಬ್ರಾಂಡ್ ಉಪ್ಪಿನಕಾಯಿಗಳನ್ನು ತಂದು ಹೊತ್ತಿಗೊಂದು ಬಡಿಸಿ ನೋಡಿದೆ. ಒಂದಾದರೂ ಚೆನ್ನಾಗಿದೆ ಅಂತ ಖುದ್ದು ನನಗೇ ಅನಿಸಲಿಲ್ಲ.

ಇನ್ನು ಪುಣ್ಯಕ್ಕೆ ಊಟ ತಿಂಡಿ ವಿಷಯದಲ್ಲಿ ತಕರಾರೀ ಕುಳ ಅಲ್ಲದ ನನ್ನ ಗಂಡ ಸೇರದಿದ್ದರೆ ಆ ರೆಡಿಮೇಡ್ ಉಪ್ಪಿನಕಾಯನ್ನು ತಟ್ಟೆಯಲ್ಲಿ ಬಿಟ್ಟರೇ ಹೊರತು 'ನೀನೇ ಉಪ್ಪಿನಕಾಯಿ ಮಾಡಬಾರ್ದಾ?' ಅಂತ ಬಾಯಿಬಿಟ್ಟು ಹೇಳಲಿಲ್ಲ. ನಾನೂ ಜಪ್ಪಯ್ಯ ಎನ್ನಲಿಲ್ಲ. ಉಪ್ಪಿನಕಾಯಿ ಅನ್ವೇಷಣೆಯನ್ನು ಮುಂದುವರಿಸಿಯೇ ಬಿಟ್ಟೆ. ಒಂದಲ್ಲ ಒಂದು ದಿನ ದಿಗ್ವಿಜಯ ಸಾಧಿಸುವ ಛಲವಿತ್ತು.

ನನಗೆ ಸಂಕಟವಾಗುವುದು ರುಬ್ಬು ಕಲ್ಲಿನಲ್ಲಿ ಕೆಜಿಗಟ್ಟಲೆ ಕೆಂಪು ಮೆಣಸಿನಕಾಯಿ ರುಬ್ಬಿ ದಿನವೆಲ್ಲ ಉರಿವ ಕೈಯಿಂದ ಬಳಲುವ ಹೆಂಗಸರನ್ನು ಕಂಡಾಗ. ನಾನು "ರುಬ್ಬುವಾಗ ಕೈ ಹಾಕುವ ಬದಲು ಸೌಟು ಬಳಸೋಕೆ ಏನಾಗಿದೆ?" ಎಂದೇ ಕೇಳುತ್ತಿದ್ದೆ. "ನೀ ಸುಮ್ನಿರೇ, ಉರಿದರೆ ನಮ್ಮ ಕೈ, ನೀ ಯಾವತ್ತಾದ್ರೂ ಮಾಡಿದೀಯಾ? ಕೈ ಹಾಕಿ ಮಾಡಿದ ರುಚಿ ಸೌಟು ಹಾಕಿದ್ರೆ ಬರಲ್ಲ" ಎಂಬ ವಿವರಣೆ ಬೇರೆ ಕೊಟ್ಟು ದಬಾಯಿಸಿ ನನ್ನ ಬಾಯಿ ಮುಚ್ಚಿಸಲು ಬಂದರೆ ಮಾತ್ರ ನನಗೆ ಅಯ್ಯೋ ಪಾಪ ಅನಿಸುತ್ತದೆ. ಆ ಮೆಣಸಿನಕಾಯಿ ಘಾಟಿಗೆ ಮೂಗ್ನೀರು ಕಣ್ಣೀರು ಕಾಂಪಿಟಿಷನ್ ಮೇಲೆ ಇಳಿಸುತ್ತ, ಕೆಮ್ಮುತ್ತ, "ಮನೆಯವರು, ಬಂಧು ಮಿತ್ರರು ತಿಂದು ಸಂತೋಷಪಟ್ಟು ಉಪ್ಪಿನಕಾಯಿ ಸೂಪರ್ ಅಂದಾಗ ಪಟ್ಟ ಕಷ್ಟವೆಲ್ಲ ಮರೆತು ಹೋಗುತ್ತೆ" ಎಂದು ನಸುನಗುತ್ತಾ ಸಾರ್ಥಕ ಭಾವ ತೋರುವಾಗ 'ಎಲ್ಲೈ ಭಾರತೀಯ ಮಹಿಳೆಯರೇ ಅಸಾಧ್ಯರು ಬಿಡ್ರೀ ನೀವು" ಎಂದು ಅಲ್ಲಿಂದ ಎಸ್ಕೇಪ್ ಆಗುತ್ತೇನೆ. ಇಷ್ಟೆಲ್ಲಾ ಕಷ್ಟ ನಾನು ಈ ಜನ್ಮದಲ್ಲಿ ಪಟ್ಟೆನೆಯೇ? ಉಹೂಂ.

ಮೊನ್ನೆ ನನ್ನ  ಗಂಡ ಊರಿಗೆ ಹೋದವರು "ನೋಡೇ, ಏನು ತಂದಿದೀನಿ

ನೋಡೇ" ಎನ್ನುತ್ತ ಹೆಮ್ಮೆಯಿಂದ ಒಂದು ದೊಡ್ಡ ಚೀಲ ಕೊಟ್ಟಾಗ 'ಆಹಾ! ಊರಿನಲ್ಲಿ ಸಿಗೋ ಕುಮಟೆಯ ವಿಶಿಷ್ಟ ತರಕಾರಿಯೋ, ಸ್ವೀಟೋ, ಎಂಥದೋ ಎಂಬ ಆಸೆಯಿಂದ ಬ್ಯಾಗು ತೆರೆದರೆ ಘಮ್ ಎನ್ನುವ ಗಂಧ ಬೀರಿ ನೂರಾರು ಅಪ್ಪೆ ಮಿಡಿ ಮಾವಿನಕಾಯಿಗಳು ಹಲ್ಲು ಕಿರಿದವು. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತೆ, ಸಾಗರವೇ ಉಕ್ಕಿ ನನ್ನನ್ನು ಆಪೋಶನ ತೆಗೆದುಕೊಂಡಂತೆ, ಅಗ್ನಿ ಪರ್ವತ ಜ್ವಲಿಸಿ ನನ್ನನ್ನು ಭಸ್ಮರೂಪಕ್ಕಿಳಿಸಿದಂತೆ, ಭೂಕಂಪದಿಂದ ಕುಸಿದ ಕಟ್ಟಡದಡಿಗೆ ಸಿಲುಕಿದ ಹಾಗೆ "ಅಯ್ಯೋ!" ಎಂದು ಕೂಗಿಕೊಂಡೆ. ಮಗಳು, ಗಂಡ ಇಬ್ಬರೂ ಕಂಗಾಲಾಗಿ ಭೂಲೋಕವೇ ಯಾಕೆ ಪರಲೋಕದ ಮೇಲಿನ ಉಪಚಾರ ಮಾಡಿ ನನ್ನನ್ನು ಜೀವಂತಗೊಳಿಸಿದರು.

"ಏನಾಯ್ತೆ? ಯಾಕೆ ಹೀಗಾಡ್ತಾ ಇದೀಯಾ?" ಎಂದು ಗಾಬರಿಯಾದರು.

"ಅಯ್ಯೋ, ದುರ್ವಿಧಿಯೇ!" ಎಂದು ಕೂಗಿದೆ.

'ಈ ಉಪ್ಪಿನಕಾಯಿ ಮಿಡಿಗಳನ್ನು ತೊಳೆದು ನೀರಿನ ಪಸೆಯೇ ಇಲ್ಲದ ಹಾಗೆ ಒರೆಸಿ, ಒಂದು ಪದರ ಉಪ್ಪು, ಒಂದು ಪದರ ಅಪ್ಪೆ ಮಿಡಿ ಹಾಕಿ, ಕವರ್ ಮಾಡಿ ದೊಡ್ಡ ಭಾರದ ಕಲ್ಲು ಹೇರಿ ಭರಣಿಯ ಬಾಯಿಗೆ ಬಟ್ಟೆ ಕಟ್ಟಿ ಮುಚ್ಚಿ, ನಾಲ್ಕು ದಿನ ಆದಮೇಲೆ ಮತ್ತೆ ದೇಖರೇಖಿ ಮಾಡಿದ್ರೆ ಇಡೀ ವರ್ಷಕ್ಕೆ ಸಾಕಷ್ಟು ಮಿಡಿ ಸಂಗ್ರಹ ಮಾಡಬಹುದು" ಎಂದು ಅಮ್ಮ ಹೇಳುತ್ತಿದ್ದದ್ದು ತರಂಗ ತರಂಗಗಳಾಗಿ ಕಿವಿಯ ಮೇಲೆ ಅಪ್ಪಳಿಸಿತು. 'ಇಷ್ಟೆಲ್ಲಾ ಮಾಡಿದ್ರೂ ಒಮ್ಮೊಮ್ಮೆ ಮಿಡಿ ಕೊಳೆತು ಹೋದ್ರೆ? ಅದೂ ಸುಮಾರಾಗಿ ನಮ್ಮ ತಪ್ಪಿನಿಂದಲೇ..." ಅಮ್ಮನ ಇನ್ನೊಂದು ಉವಾಚ ನೆನಪಾಗಿ "ಯವ್ವಾ... ನಾ ವಲ್ಲೆ..." ಎಂದು ಅಪ್ಪೆ ಮಿಡಿ ತಂದ್ದು ಸರ್ಪ್ರೈಸ್ ಕೊಡಲು ಯತ್ನಿಸಿದವನನ್ನು ನೋಡಿದ ನೋಟಕ್ಕೆ ಕಂಗೆಟ್ಟು ಅಪ್ಪ ಮಗಳು ಇಬ್ಬರೂ ನಾಪತ್ತೆಯಾಗಿಬಿಟ್ಟರು. ಆದರೂ ಸದ್ದಿಲ್ಲದೇ ಮಿಡಿ ಹಾಕುವ ಜಾರು, ನಮ್ಮೂರಿನ ಸಾಣೆಕಟ್ಟೆ ಉಪ್ಪು, ಊರೂಟು ಕಲ್ಲು ಎಲ್ಲಾ ತಂದಿಟ್ಟಾಗ ನಗು ನಗುತ್ತಾ ಮಿಡಿ ಹಾಕೋ ಯಜ್ಞ ಶುರುಮಾಡಿದೆ. ಎಷ್ಟು ಪ್ರಯತ್ನ ಮಾಡಿದರೂ ಉಪ್ಪಿನಕಾಯಿಯ ವ್ಯಾಮೋಹ ನನ್ನಲ್ಲಿಯೂ ಅವ್ಯಕ್ತವೆಂದು ಅವತ್ತು ಗೊತ್ತಾಯಿತು.




ಆದರೂ ಇಡೀ ವರ್ಷಕ್ಕೆ ಸಾಲುವಷ್ಟು ಉಪ್ಪಿನಕಾಯಿ ಮಾತ್ರ ಖಂಡಿತ ಮಾಡುವುದಿಲ್ಲ.

ನಾನಂತೂ ವೈವಿಧ್ಯಮಯ ರುಚಿಯ ಧಿಡೀರ್ ಉಪ್ಪಿನಕಾಯಿಗಳಿಗೆ ಸದಾ ಶರಣಾಗಿದ್ದೇನೆ. ನನ್ನ ಕಣ್ಣಿಗೆ ಮಾವು, ಲಿಂಬೆ ಮಾತ್ರವಲ್ಲ ಎಂಥಾ ತರಕಾರಿ ಸಿಕ್ಕರೂ ಅಮೋಘ ಉಪ್ಪಿನಕಾಯಿ ನಿಮಿಷದಲ್ಲಿ ರೆಡಿಯಾಗಿಬಿಡುತ್ತದೆ. ಜಿಹ್ವಾಗ್ರದ ಮೇಲೆ ನಲಿವ ಮೈಮನ ರೋಮಾಂಚನಗೊಳಿಸುವ ನನ್ನದೇ ಶೈಲಿಯ ಹೊಸ ಹೊಸ ಉಪ್ಪಿನಕಾಯಿ ತಿನ್ನಬೇಕಾದರೆ ನಮ್ಮ ಮನೆಗೇ ಬನ್ನಿ.

■

# ಗಂಜಿಯ ಗಮ್ಮತ್ತು ಗೊತ್ತುಂಟಾ..?

ನಳಿನಿ ಸೂರ್ಯಪ್ರಕಾಶ್

ಬೆಟ್ಟದ ನೆಲ್ಲಿಕಾಯಿ, ಸಮುದ್ರದ ಉಪ್ಪು–ಎತ್ತಲಿಂದೆತ್ತ ಸಂಬಂಧವಯ್ಯ? ನಿಜವೇ. ಎರಡೂ ಸೇರಿ ಕಳಿತು, ನಮ್ಮಲೆ ಕೊನೆಯ ಚಪ್ಪರಿಸುವ ಉಪ್ಪಿನಕಾಯಿಯಾಗೋದು ಅಂದ್ರೆ ಎಂಥ ಸೋಜಿಗವಲ್ಲವೇ? ಅಂಥಾದ್ರಲ್ಲಿ ಬೆಂಗಳೂರಿನ ನಾನು, ಕುಂದಾಪುರದ ರೇಖಾಳೂ, ಬ್ಯಾಂಕಿನ ಕೆಲಸದ ನಿಮಿತ್ತ, ಎಂದೂ ಕಂಡಿರದಿದ್ದ ಹುಣಸೂರಿನಲ್ಲಿ ಮನೆ ಮಾಡ್ಕೊಂಡು, ಮೂರು ವರ್ಷಗಳ ಕಾಲ ವಾಸವಾಗಿದ್ದುದೂ ಒಂದು ಪುಟ್ಟ ಸೋಜಿಗವೇ.

ಉಪ್ಪಿನಕಾಯಿಯ ಪೀಠಿಕೆ ಹಾಕಿ, ಮಧ್ಯದಲ್ಲಿ ಈ ರೇಖಾಳನ್ನು ಯಾಕಪ್ಪಾ ಎಳೆದೆ ಅಂದ್ರೆ, ಉಪ್ಪಿನಕಾಯಿಗೂ, ಅವಳಿಗೂ ಬಿಡಿಸಲಾರದ ನಂಟು. ಇವಳನ್ನು ಮೊದಲ ಬಾರಿ ಭೇಟಿ ಮಾಡಿದಾಗ ಹೇಳಿದ್ಲು, ""ನಂಗೆ, ಬೋಳು ಹುಳಿ ಎಲ್ಲಾ ಮಾಡ್ಲಿಕ್ಕೆ ಬರ್ತದೆ.....". ನಾನೋ, ಬೋಳು ಹುಳಿ ಅಂದ್ರೆ ಉಡುಪಿ ಕಡೆಯ ಯಾವುದೋ ಸ್ಪೆಷಲ್ ಹುಳಿ ಅಂತಂದ್ಕೊಂಡು ಬಾಯಲ್ಲಿ ನೀರೂರಿಸ್ಕೊಂಡೆ. ಇವಳ ಜೊತೆ ವಾಸ್ತವ್ಯ ಹೂಡಿದ ಮೇಲೆ ಗೊತ್ತಾಯ್ತು, ಬೋಳ್ಹುಳಿ ಅಂದ್ರೆ, ಮಸಾಲೆ ಖಾರವಿಲ್ಲದ ಬೋಳು ಬೋಳಾದ ಹುಳಿ ಅಂತ !! ನನ್ನಾಸೆಯ ಬಲೂನಿಗೆ ಸೂಜಿ ಚುಚ್ಚಿದಂತಾಯ್ತು. ಇರಲಿ, ಇಬ್ರೂ ಕಲೆತು, ಕಲಿತು, ಬಗೆ ಬಗೆ ತಿಂಡಿ, ಅಡುಗೆಯ ನಳಪಾಕವನ್ನೆ ಇಳಿಸೋಣ ಅಂತ ಕನಸು ಕಂಡೆ. ಆದರೆ ಆ ಪುಣ್ಯಾತ್ಗಿತ್ತಿಗೆ ತಿಂಡಿಯ ಗೊಡವೆಯೇ ಬೇಡವಾಗಿತ್ತು. ಮೂರೂ ಹೊತ್ತೂ ಅನ್ನ, ತುಪ್ಪ, ಉಪ್ಪಿನಕಾಯಿ ಇದ್ರೆ ಸಾಕು, ಕಲೆಸಿಕೊಂಡು, ಚಪ್ಪರಿಸಿ, ತಿಂದೇಳುವ ಹುಡುಗಿ. ನಿನ್ನ ಹೆಸರು ರೇಖಾ ಉಪಾಧ್ಯಾಯ ಅಲ್ಲ, ರೇಖಾ ಉಪ್ಪುಪ್ಪಾಧ್ಯಾಯ ಇರಬೇಕಿತ್ತು ಅಂತ ಛೇಡಿಸ್ತಿದ್ದೆ.

ನನ್ನ ಬಲವಂತಕ್ಕೆ ತಿಂಡಿಗೆ ಅಂತ ಉಪ್ಪಿಟ್ಟೋ, ಅವಲಕ್ಕಿಯೋ ಮಾಡ್ಕೊಂಡು ದಿನ ದೂಡುತ್ತಿದ್ದೆವು. ಒಂದಿನ, "ನೀನು ಕುಚ್ಚಲಕ್ಕಿ ಗಂಜಿ ತಿಂದಿದ್ಯಾ?" ಅಂದ್ಲು. ಇಲ್ಲವೆಂದೆ. ""ಕುಚ್ಚಲಕ್ಕಿ ಗಂಜಿಗೆ, ತುಪ್ಪ, ಉಪ್ಪಿನಕಾಯಿ ಜೊತೆ ತಿಂದ್ರೆ ಎಂಥಾ ಗಮ್ಮತ್ತು ಗೊತ್ತುಂಟಾ? ಮಾಡೋಣವಾ?"", ರಾಗವೆಳೆದಳು. ನಾನು ಗೋಣಾಡಿಸಿದೆ. ಕುಚಲಕ್ಕಿಯನ್ನ ಚೆನ್ನಾಗಿ ತೊಳೆದು, ಕುಕ್ಕರಿನಲ್ಲಿ ಎಂಟ್ಹತ್ತು ಬಾರಿ ಕೂಗಿಸಿದರಾಯ್ತು. ಗಂಜಿ ರೆಡಿ ! ಅಳ್ಳಕವಾದ ಗಂಜಿಯನ್ನ ತಟ್ಟೆಗೆ ಸುರಿದಳು. ಸುತ್ತಲೂ ಧಾರಾಳವಾಗಿ ತುಪ್ಪ ಹಾಕ್ಕೊಂಡು, ಮಧ್ಯೆ ಅವಕಾಯಿ ಉಪ್ಪಿನಕಾಯಿ ಬಡಿಸಿಕೊಂಡೆವು. ಗಂಜಿಯ ಬಿಸಿ ಹಿತವೆನಿಸುವಷ್ಟು ಆರುತ್ತಿದ್ದಂತೆಯೇ, ತುಪ್ಪ, ಉಪ್ಪಿನಕಾಯಿಯ ರಸ, ಹೋಳು, ಎಲ್ಲವೂ ಗಂಜಿಯಲ್ಲಿ ಮಿಳಿತವಾಗುವಂತೆ ಕಲೆಸಿ, ಅಳ್ಳಕವಾದ ತುತ್ತನ್ನು ಬಾಯಿಗಿಟ್ಟೆ !ಆಹಾಹ ! ಎಂಥಾ ರುಚಿ ಅಂತೀನಿ ! ಉಪ್ಪಿನಕಾಯಿಯ ಚುರುಕು ರುಚಿಗೆ, ಗಂಜಿಯ ಸಪ್ಪೆತನ, ತುಪ್ಪದ ಘಮಲು ಸೇರಿ, ಹಿತವಾದ ಹದವನ್ನು ತಂದುಕೊಟ್ಟಿತ್ತು. ಸರ್ರ್...ಬರ್ರ್....ಅಂತ ತುತ್ತುಗಳನ್ನು ಸವಿಯುವ ಪ್ರಪಂಚದಲ್ಲಿ ಕಳೆದುಹೋದೆ. ಅವಳ ಸಹವಾಸ, ""ಎಂಥಾ ಗಮ್ಮತ್ತು ಗೊತ್ತುಂಟಾ" ಎಂದು ಉದ್ಗರಿಸಿದೆ. ಅವಳು, ನಕ್ಕು, ನಕ್ಕು , ನಕ್ಕಿದಳು. ನಾನು ಗಂಜಿ ನೆಕ್ಕಿ, ನೆಕ್ಕಿ, ನೆಕ್ಕಿದೆ ! ಕೊನೆಗೆ ಅನ್ನದ ಅಗಳುಗಳು ವಿರಳವಾಗಿ, ತಟ್ಟೆಯಲ್ಲುಳಿದ ಆ ರಸಪಾಕವನ್ನು ಬೆರಳತುದಿಗಳಿಂದ ಬಳಿದು ನೆಕ್ಕಿ, ಲೊಟ್ಟೆಹೊಡೆಯುವಲ್ಲಿ ಸಿಕ್ಕ ಆನಂದ ವರ್ಣನಾತೀತ! ನಾಲಿಗೆಯನ್ನು ಬಡಿದೆಬ್ಬಿಸಿ, ಕಣ್ಮನಗಳನ್ನು ಅರಳಿಸುವಂಥ ರುಚಿ! ಇಂಥ ಗಂಜಿಯೂಟವನ್ನು ಅದೆಷ್ಟೋ ಬಾರಿ, ಮಾಕಳಿಬೇರಿನ ಉಪ್ಪಿನಕಾಯಿ, ಮಿಕ್ಸೆಡ್ ಉಪ್ಪಿನಕಾಯಿ ಜೊತೆ ಚಪ್ಪರಿಸಿದ್ದುಂಟು.

ಹುಣಸೂರಿನಿಂದ ಕಾಲ್ತೆಗೆದು ಕಾಲು ಶತಮಾನವೇ ಕಳೆದುಹೋಗಿದೆ. ನನ್ನ ಈ ಮಧ್ಯವಯಸ್ಸಿನಲ್ಲಿ ಹೈ ಬೀಪಿಯ ಭಯ ಬೆನ್ನಿಗೆ ಹತ್ತಿದ ಬೇತಾಳದಂತೆ. ಮನೆಗೆ ಯಾವುದೇ ಉಪ್ಪಿನಕಾಯಿ ಬಾಟಲಿಯನ್ನು ತರೋದು ನಿಲ್ಲಿಸಿ ಎಷ್ಟೋ ಸಮಯವಾಗಿದೆ. ನಾನೇ ಉಪ್ಪಿನಕಾಯಿ ಹಾಕೋದಂತೂ ಕನಸಿನ ಮಾತೇ ಸರಿ. ಹಾಗಾಗಿ ಉಪ್ಪಿನಕಾಯಿಯ ದರ್ಶನವಾಗೋದು ಮದುವೆ, ಮುಂಜಿ ಮುಂತಾದ ಸಮಾರಂಭಗಳ, ಪಂಕ್ತಿ ಊಟದ ಹಸಿರು ಬಾಳೆಲೆಯ ಎಡತುದಿಯಲ್ಲಿ. ಉಪ್ಪಿನಕಾಯನ್ನು ಬೆರಳತುದಿಯಲ್ಲೂ ಮುಟ್ಟದೆ ಊಟ ಮುಗಿಸಿದರಾಯ್ತು ಅಂದ್ರಾ ? ಛೆ, ಛೇ ! ಹಾಗಂದ್ರೆ ಹೇಗೆ ? ಈಗೆಲ್ಲ ಅಡುಗೆಯವರು ಒಂದು ಊಟಕ್ಕೆ ಕಮ್ಮಿ ಅಂದ್ರು ನಾನ್ನೂರು ರುಪಾಯಿ ಚಾರ್ಜು ಮಾಡ್ತಾರೆ ಗೊತ್ತ? ಪಾಪ, ನನ್ನನ್ನು ಆಹ್ವಾನಿಸುವ ಅತಿಥೇಯ ಮಹಾಶಯರು, ರಸಗವಳದ ಜೊತೆಗೆ ನಾನು ಕೊಡುವ ಉಡುಗೊರೆಗೆ ಪ್ರತಿಯಾಗಿ ರಿಟರ್ನ್ ಗಿಫ್ಟ್ ಬೇರೆ ಕೊಟ್ಟು ಕಳಿಸ್ತಾರೆ. ಅಂಥದ್ರಲ್ಲಿ ಅವರ ಹಣ, ಶ್ರಮ ಎಲೆಕೊನೆಯ ಉಪ್ಪಿನಕಾಯಿಯಷ್ಟೂ ವ್ಯರ್ಥವಾಗೋದು ನಂಗೊಂದು ಚೂರೂ ಇಷ್ಟವಿಲ್ಲಪ್ಪ. ಹಾಗಾಗಿ, ಬಡಿಸಿದ ಯಾವ ಪದಾರ್ಥವನ್ನೂ ವ್ಯರ್ಥ ಮಾಡದೆ ತಿಂದೇಳುವ ಪರಿಪಾಠ ಇಟ್ಕೊಂಡಿದ್ದೀನಿ. ಅವರ ಹಣ, ಶ್ರಮಕ್ಕೆ ಸಂಪೂರ್ಣ ನ್ಯಾಯ ಒದಗಿಸಿಕೊಡೋದೇ ಅತಿಥಿಯಾದ ನನ್ನ ಧರ್ಮ!




ಅದಕ್ಕೆಂತಲೇ ಶುರುವಿನಲ್ಲಿ ಸ್ವಲ್ಪವೇ ಅನ್ನವನ್ನು ಹಾಕಿಸಿಕೊಳ್ಳೋದು. ಎಲೆಕೊನೆಯ ಪಾಯಸವನ್ನು ಕಣ್ಣೊತ್ತಿಕೊಂಡು ಶುರುಮಾಡೋದು. ಶಾಸ್ತ್ರಕ್ಕೆ ಬಡಿಸುವ ತೊವ್ವೆಯೊಂದಿಗೆ ಎರಡು ತುತ್ತು ಅನ್ನ ತಿಂದು, ಉಳಿದ ಅನ್ನದಲ್ಲಿ ಹುಳಿಯ ಜೊತೆಗೂ, ಸಾರಿಗೂ ಮತ್ತು ಕೊನೆಯಲ್ಲಿ ಮೊಸರಿನ ಜೊತೆಗೂ ಸರಿದೂಗಿಸಿಕೊಂಡುಬಿಡುವುದು. ಇದರಿಂದ ಎಲೆ ಮೇಲಿನ ಸಾಲಿನ ಎರಡು ಕೋಸಂಬರಿ, ಎರಡು ಪಲ್ಯ, ಎಡಬದಿಯ ಚಿತ್ರಾನ್ನವನ್ನು ಹಪ್ಪಳ, ಸಂಡಿಗೆಯೊಂದಿಗೆ ಸರಾಗವಾಗಿ ಇಳಿಸಬಹುದು. ಬಡಿಸುವ ಸಿಹಿ ಭಕ್ಷ್ಯ(ಗಳು) ರಾಜನಿದ್ದ ಹಾಗೆ. ರಾಜನ ಮಾರ್ಗಕ್ಕೆ ಅಡ್ಡ ಬರದ ಹಾಗೆ ಹೊಟ್ಟೆಯೊಳಗೆ ಎಲ್ಲವೂ ಸೈಡು ಬಿಡುತ್ತವೆ ! ಇನ್ನುಳಿಯುವುದು ಒಂದೆರಡು ತುತ್ತು ಮೊಸರನ್ನ, ಒಂದು ಹೋಳು ಉಪ್ಪಿನಕಾಯಿ. ತೋರುಬೆರಳ ತುದಿಯಿಂದ ರಸವನ್ನೆಳೆದು ಬಾಯ್ಗಿಟ್ಟರೆ, ಆಹಹಾ! ಅದುವೇ ಅಲ್ಟಿಮೇಟ್ ಅಂತಾರಲ್ಲ, ಅಂಥ ರುಚಿ ! ಅದಕ್ಕಲ್ಲವೇ ಹೇಳೋದು, ಉಪ್ಪಿಗಿಂತ (ಉಪ್ಪಿನಕಾಯಿಗಿಂತ) ರುಚಿ ಬೇರೆ ಇಲ್ಲ ಅಂತ! ಉಳಿದ ರಸವನ್ನು ಚಪ್ಪರಿಸಿ, ಮೊಸರನ್ನದ ಜೊತೆ ಕಲೆಸಿಕೊಂಡು ತಿಂದು, ಬೆರಳು ನೆಕ್ಕುತ್ತಾ , ಅನ್ನದಾತ ಸುಖೀಭವ ಅಂದ್ಕೊಂಡು ಮೆಲ್ಲಗೆ ತೇಗುತ್ತಾ ಮೇಲೇಳುವುದು. ಮತ್ತೆ ಮುಂದಿನ ಬಾಳೆಲೆ ಊಟ ಎಂದೋ, ಎಲ್ಲೋ ಅಂತ ಕಾಯುವುದು. ಹೀಗೇ....ಆಗಾಗ.....ಅಷ್ಟೇ...! ಗೊತ್ತಾಯ್ತಲ್ಲ ? ■

## ಮೂರಕ್ ಬಂದಿದ್ದು ಮೂವತ್ತಕ್ಕೂ..

ವಾಣಿ ಸುರೇಶ್

ಅಲ್ಲ ಈ ತರ ಕೂತಲ್ಲೇ ಅ– ಮರೆಯೋರನ್ನ ಎಲ್ಲಾದ್ರೂ ನೋಡಿದ್ರಾ? ಯಾವ್ಯಾವ್ದೋ ಕೆಲಸಕ್ಕೆ ಬಾರದ ಓಬೀರಾಯನ ಕಾಲದ ಕತೆಗಳನ್ನ ದೊಡ್ಡ ಮಗನ ಮಗೂಗೆ ಬಣ್ಣಾಬಣ್ಣಿಕೆಯಾಗಿ ಹೇಳೋ ನಂಗೆ, ಇಂಪಾರ್ಟೆನ್ಸ್ ಡೇಟ್ಗಳನ್ನ, ಡೇಟ್ ಆಫ್ ಬರ್ತ್ ಗಳನ್ನ ಮರೆಯೋ ರೋಗ ಅದೆಲ್ಲಿಂದ ಬಂದು ಕಾಲು ಹಾಕ್ಕೊಂಡಿದೆಯೋ ಕಾಣೆ! (ಉದಾಹರಣೆಗೆ ನೋಡೀ, ಈ ಓಬೀರಾಯ ಯಾರೂಂತ ಅಂತಲೂ, ಜ್ಞಾಪಕವೇ ಬರ್ತಿಲ್ಲ! ಹೀಗೇ ನನ್ ಕತೆ). ಇದರಿಂದಾಗೋ ಫಜೀತಿಗಳನ್ನಂತೂ.. ಅಯ್ಯೋ ಕೇಳಲೇಬೇಡಿ.

ಅವತ್ತು ಏನಾಯ್ತೂಂತೀರಾ? ಬೆಳಗಾಗೆದ್ದು ವಾಕ್ ಮುಗಿಸಿ ಬಂದೋಳು ನೋಡ್ತೇನಿ, ಏಳೂವರೆಗೆಲ್ಲಾ ದಡಬಡಗುಟ್ಕೊಂಡು ತಿಂಡೀನೂ ತಿನ್ನದೇ ಆಫೀಸಿಗೆ ಓಡೋ ನಮ್ಮ ಹೊಸ ಸೊಸೆ ತನ್ವಿ, ಅವತ್ತು ಎಂಟೂವರೆಯಾದ್ರೂ ಇನ್ನೂ ಮನೇನೇ ಬಿಟ್ಟಿಲ್ಲ, ಅಷ್ಟೇ ಅಲ್ಲ. ಅಡಿಗೆಮನೇಲಿ, ಅದೂ ಅಡಿಗೆಮನೇಲಿ ಕಣ್ರೀ! ಅಲ್ಲಿ ಏನೋ ಪತರಗುಟ್ಟುತ್ತಾ ಇದ್ದಳು. ಒಲೆ ಮೇಲೆ ಬಾಂಡಲೇಲಿ ಶಾವಿಗೆ ಇತ್ತು. ಅದನ್ನ ಬಲಗೈಯ್ಯಲ್ಲಿ ನವಿರಾಗಿ ಕೆದಕ್ತಿದ್ದಳು. ಜೊತೆಗೆ ಎಡಗೈಯ್ಯಲ್ಲಿ ಹಸಿರುಕಲ್ಲಿನ ಕಲ್ ಪತ್ತಲ್ಲಿ ಹಾಕ್ಕೊಂಡಿದ್ದ ಏಲಕ್ಕೀಗೆ ಎಲ್ಲಿ ಪೆಟ್ಟಾಗತ್ತೋ ಅನ್ನೋ ಹಾಗೆ ಹಗುರವಾಗಿ ಕುಟ್ತಾ ಇದ್ದಳು ಬೇರೆ. ಆದರೆ ಅದೆರಡೂ ಕೆಲಸಾನ ಒಟ್ಟಿಗೆ ನಿಭಾಯಿಸಕ್ಕಾಗದೇ ಒದ್ದಾಡ್ತಾ ಇರೋದು ಮಾತ್ರಾ ಹೊಡೆದು ಕಾಣುತ್ತಿತ್ತು, ಪಾಪ!

"ಇದೇನವ್ಮಾ ಆಫೀಸಿಗೆ ಹೊತ್ತಾಗಲಿಲ್ವೇ? ಆಗ್ಲೇ ಚೇತು ಆಫೀಸಿಗೆ ಹೋಗಾಗಿರಬೇಕಲ್ವಾ. ನೀನೇನು ಇನ್ನೂ ಸವರಿಸ್ತಾ ಒಲೆ ಮುಂದೆ ನಿಂತಿದೀ. ನಾ ಹೆಲ್ಪ್ ಮಾಡಲೇ? ಎಲ್ಲಿ ಜಾಗ ಬಿಡು" – ಅಂತಂದೆ. ಅದಕ್ಕವಳು – "ಇಲ್ಲಮ್ಮಾ ಇವತ್ತು ನಾನೇ ಒಂದಿಷ್ಟು ಪಾಯಸ ಮಾಡಿಟ್ಟುಬಿಟ್ಟು ಹೋಗೋಣಾಂತಂದ್ಕೊಂಡೆ. ಸಂಜೆ ಆಫೀಸಿಂದ ಬಂದಮೇಲೆ ಮಾಡೋದು ಅಂದ್ರೆ ಲೇಟಾಗತ್ತೆ. ಬರುವಾಗ ಹೂವು, ಸಮೋಸಾ, ಐಸ್ಕ್ರೀಮ್ನೂ ಬೇರೆ ಹಿಡ್ಕೊಂಡು ಬರಬೇಕು" – ಅಂತಂದ್ಲು. "ಓ ಏನಿವತ್ತು ವಿಶೇಷ? ಪಾಯಸ ಅಷ್ಟೇ ಅಲ್ದೇ ಸಮೋಸಾ ಐಸ್ಕ್ರೀಮ್ ಬೇರೆ ತರ್ತಿದೀನಿ ಅಂತಿದೀ. ಸಂಜೆ ಯಾರು ಬರ್ತಿದಾರೆ ಮನೆಗೆ?" ಅಂದೆ.

ಅವಳು "ಇದೇನಮ್ಮಾ? ಇವತ್ತು ಚೇತನ್ ಹುಟ್ಟಿದ ಹಬ್ಬ ಅಲ್ವೇ?" ಅಂತ ಒಂದ್ ತರಾ ವಿಚಿತ್ರವಾಗಿ ನನ್ನನ್ನ ನೋಡಿ ನಕ್ಕಳು. ಅಲ್ಲಾ, ತೀರಾ ಮಗನ ಹುಟ್ಟಿದ ಹಬ್ಬಾನೇ ಮರೆಯೋ ಇವರೆಂಥಾ ತಾಯಿ? – ಅನ್ನೋ ಹಾಗೆ! ಅಂತೂ ಬೆಳಬೆಳಗ್ಗೇನೇ ನನ್ನ ಹಾಳು ಮರೆವೆಯಿಂದ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಂಡಹಾಗಾಯ್ತು.

ಇದು ಚೆನ್ನಾಗಿಲ್ಲ ಅಂತ ಅಂತನ್ನಿಸಿ ಅವತ್ತಿಂದ ಫೋನಲ್ಲಿ ರಿಮೈಂಡರ್ ಇಟ್ಕೊಳ್ಳೋ ಅಭ್ಯಾಸ ಶುರು ಮಾಡ್ಕೊಂಡೆ. ಆದರದು ಇನ್ನೊಂದು ತೀರು ಆಗಕ್ಕೆ ಶುರುವಾಯ್ತು. ಫೋನ್ ಹೊಡ್ಕೊಂಡ ತಕ್ಷಣ ಇರ್ತಿದ್ದ ಜ್ಞಾಪಕ, ಆ ಅಲಾರಾಂ ಸದ್ದನ್ನ ನಾನು ನಿಲ್ಲಿಸಿದ ತಕ್ಷಣ ಅದ್ಯಾಕೆ ಹೊಡ್ಕೊಂಡ್ತು ಅನ್ನೋದು ಪೂರ್ತಿ ಮರೆತು ಹೋಗಿ ಮತ್ತೆ ಯಥಾಪ್ರಕಾರ ಅದೇ ಕತೆ. ಛೇ ಇದೂ ಯಾಕೋ ಸರಿಹೋಗ್ತಿಲ್ಲ ಅಂತನ್ನಿಸಿ ಆ ಅಭ್ಯಾಸಾನೂ ಬಿಟ್ಟಿದ್ದಾಯ್ತು.

ಕೊನೆಗೆ ಹುಟ್ಟಿದಹಬ್ಬಗಳಿಗೂ–ನನಗೂ ಎಲ್ಲೋ ಅಲರ್ಜಿ ಇರಬೇಕು ಅಂತ ಡಿಸೈಡ್ ಮಾಡಿ ತೆಪ್ಪಗಾದೆ. ಆಗ್ ನೋಡಿ ಇನ್ನೊಂದು ಐನಾತಿ ಐಡಿಯಾ ಹೊಳೀತು. ತೀರಾ ಹತ್ತಿರದವರ ಹುಟ್ಟಿದ ಹಬ್ಬಗಳ ಹಿಂದೆಮುಂದೆ ಇನ್ಯಾವ್ದಾದ್ರೂ ನಮ್ಮ ಇಂಡಿಪೆಂಡೆನ್ಸ್ ಡೇ ತರದ ವಿಶೇಷದ ದಿನ ಬಂದಿದ್ರೆ, ಅದನ್ನ ನಮಗೆ ಬೇಕಿರೋ ಬರ್ತ್ ಡೇ ದಿನಕ್ಕೆ ಗಂಟು ಹಾಕಿಬಿಟ್ಟರಾಯ್ತು ಅಂತ. ಹೀಗಾದಮೇಲೆ ಒಂದು ಸ್ವಲ್ಪ ವಾಸಿ, ಅದೃಷ್ಟ

ಚೆನ್ನಾಗಿದ್ದರೆ ಅದೇ ದಿನ ಅಥವಾ ಅದರ ಆಸುಪಾಸಿನ ಎರಡು ಮೂರು ದಿನಗಳಲ್ಲಿ ಬರ್ತ್ ಡೇ ಬೇಬೀಸ್-ಗೆ wish ಮಾಡಕ್ಕಾಗುತ್ತಾ ಇರೋದ್ರಿಂದ ಎಲ್ಲರ ಕೈಯ್ಯಲ್ಲಿ ಹಾಸ್ಯಮಾಡಿಸಿಕೊಳ್ಳೋದು ತಪ್ಪಿದೆ, ಸದ್ಯ!

ಇದರಪ್ಪನ ತರದ ನನ್ನ ಇನ್ನೊಂದು ಪ್ರಾಬ್ಲಮ್ ಅಂದ್ರೆ ಮದುವೆ, ಮುಂಜಿ, ಗ್ರಹಪ್ರವೇಶಗಳ ದಿನಗಳನ್ನೂ ಸಲೀಸಾಗಿ ಕನ್ಫೂಸ್ ಮಾಡಿಕೊಳ್ಳೋದು. ಅಂದ್ರೆ ಇನ್ವಿಟೇಷನ್ ಎದುರಿಗಿದ್ದೂ ಅದು ಹೇಗೋ ದಿನ ತಪ್ಪಾಗಿಬಿಡೋದು! ಇದಂತೂ ತೀರಾ ವಿಚಿತ್ರಾಪ್ಪ. ಆದರೆ ಇದು ನನ್ನ ಕಡೆಯ ನೆಂಟರಿಷ್ಟರಿಗೆ ಮಾತ್ರಾ ಸೀಮಿತವಾಗಿರೋದು ನನ್ನ ಪುಣ್ಯ. ನನ್ನ ಪತಿ ನಮ್ಮನೆಯೋರ ಕಡೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ, ಆ ಫಂಕ್ಷನ್ನುಗಳಿಗೆ ಆಯಾ ದಿನದಂದೇ ಹೋಗೋ ಜವಾಬ್ದಾರಿಯನ್ನು ನನ್ನ ತಲೆಗೆ ಕಟ್ಟಿರೋದೇ ಬಹುಶಃ ಈ ನನ್ನ ಪುಣ್ಯಕ್ಕೆ ಕಾರಣವಿರಬೇಕು ಅಂತನ್ನಿಸತ್ತೆ.

ಆದರೂ, ಇಲ್ಲಿ ಕೇಳಿ. ಅವತ್ತು ನನ್ನ ಬಾಲ್ಯಸ್ನೇಹಿತೆ ಹರಿಣಿಯ ತಮ್ಮ, ಅದೇ ನಮ್ಮ ತರಲೆ ಪ್ರಸನ್ನ - ಅವನ ಮದುವೆಯಿತ್ತು. "ಅವರ ಮನೆಯವರು ಯಾರೂ ಗೊತ್ತಿಲ್ಲ.. ನಾನು ಬರಲ್ಲ, ನೀ ಹೋಗಿ ಬಾ" - ಅಂತ ಏಕ್ದಂ ಹೇಳಿ ಸ್ಟ್ರೈಕ್ ಮಾಡಿದ ಇವರನ್ನ, "ಇಲ್ಲ ಮಿಸ್ ಮಾಡೋ ಹಾಗೇ ಇಲ್ಲಪ್ಪ ಪ್ಲೀಸ್" - ಅಂತ ಒಂದು ತಿಂಗಳಿಂದ ಕಾಡಿ ಬೇಡಿ ಒಪ್ಪಿಸಿದ್ದೆ. ಮಿಡ್ಲ್ ಸ್ಕೂಲಿನ ದಿನಗಳಿಂದ ನಾವೆಲ್ಲಾ ಹೇಗೆ ಪ್ರತೀ ಸಂಜೆಯೂ ಕುಣಿದು ಕುಪ್ಪಳಿಸ್ತಿದ್ದಿದ್ದು, ಇದೇ ಪ್ರಸನ್ನ ಮಹಾ ತರಲೆ ಮಾಡ್ತಿದ್ದಿದ್ದು ಆ ಎಲ್ಲವನ್ನೂ ಇವರಿಗೆ ದಿನಾ ಹೇಳೀ ಹೇಳೀ ಚಿಟ್ಟು ಹಿಡಿಸಿದ್ದೇಂತ ಇವರ ಕೈಲಿ ಬಯ್ಯಿಸಿಕೊಳ್ಳೋದೇ ಆಗಿತ್ತು.

ಆ ದಿನ ನನ್ನ ಸ್ವಭಾವ ಚೆನ್ನಾಗಿ ತಿಳಿದಿರೋ ಇವರು ಹೊರಡಕ್ಕೆ ಮುಂಚೆ ಒಂದಿಪ್ಪತ್ತು ಸಲ ಮದುವೆಯ ದಿನದ ಬಗ್ಗೆ, ಆದಿದ್ದ ಛತ್ರದ ಬಗ್ಗೆ "ಸರಿಯಾಗಿ ಗೊತ್ತು ತಾನೇ?" ಅಂತ ಕೇಳೀ ಕೇಳೀ ನಂಗೂ ಸಾಕು ಮಾಡಿದ್ದರು.

"ಮಹಾ ಅಷ್ಟು ಗೊತ್ತಿಲ್ದೆ ಏನು? ಅವಳು ಹೇಳಿದ್ದಾಳೆ - 'ಗುರುವಾರ, ಗುರುನರಸಿಂಹ ಛತ್ರದಲ್ಲಿ ಮದುವೆ ಇರೋದು ಕಣೇ. ಆದ್ರಿಂದ ಈ ಎರಡೂ ಹೆಸರನ್ನ ನೀನು ಮರೆತು ಮೆಸ್ ಮಾಡಕ್ಕೆ ಸಾಧ್ಯವೇ ಇಲ್ಲ, ಡೋಂಟ್ ವರಿ' ಅಂತ - ಸುಮ್ಮನೆ ನಡೀರಿ ಮುಹೂರ್ತಕ್ಕೆ ಹೊತ್ತಾಗತ್ತೆ. ಇನ್ನೂ ಅಷ್ಟು ದೂರದ ಬಸವನಗುಡಿವರೆಗೂ ಹೋಗ್ಬೇಕು" - ಅಂತ ದಬಾಯಿಸಿ, ಜರಿಸೀರೆ ನೆರಿ ಸರಿಮಾಡಿಕೊಂಡು ಹೊರಟೆ.

ಅಲ್ಲಾ, ಅಲ್ಲಿ ಹೋದರೆ ಛತ್ರದಲ್ಲಿದ್ದ ಒಬ್ಬರೂ ಗುರುತಿನೋರು ಇರಬೇಡ್ವೇ? ಕೊನೆಗೆ ಹರಿಣಿಯಾದ್ರೂ?! ಉಹೂಂ ಒಬ್ಬರು ಅಂದರೆ ಒಬ್ಬರೂ ಇರ್ಲಿಲ್ಲ! ಇದು ದಶಕಗಳ ಹಿಂದಿನ ಮಾತಾದ್ರಿಂದ ಈಗಿನಂತೆ ಛತ್ರದ ಹೊರಗೆ ಮದುಮಕ್ಕಳ ಹೆಸರೂ ಹಾಕಿರಲಿಲ್ಲ. ಇವರಿಗೆ ಯಾರ ಪರಿಚಯವೂ ಇಲ್ದೇದ್ರಿಂದ ಹಾಯಾಗಿ ಅಲ್ಲಿದ್ದೋರನ್ನೆಲ್ಲಾ ಮಿಕಿಮಿಕಿ ಅಂತ ನೋಡ್ತಾ ಕೂತಿದ್ರು. ನನಗೆ ಚಡಪಡಿಕೆ ಶುರುವಾಯ್ತು. ಲೇಟಾಗಿ ಬೇರೆ ಹೋಗಿದ್ರಿಂದ ಎಲ್ಲೋ ಹಿಂದೆ ಖಾಲಿ ಇದ್ದಿದ್ದ ಕುರ್ಚೀಲಿ ಕೂತ್ಕೋಬೇಕಾಯ್ತು. ಹಸೆಮಣೆ ಮೇಲೆ ಯಾರ್ಯಾರು ಇದಾರೆ? ಏನೇನು ನಡೀತಿದೆ? ಅಂತ ಅನ್ನೋದಂತೂ ದೇವರಿಗೇ ಪ್ರೀತಿ. ನಮಗೂ ಅಲ್ಲಿ ಕಾಣಿಸ್ತಿದ್ದಿದ್ದು ಪುರೋಹಿತರ ಮತ್ತು ಫೋಟೋಗ್ರಾಫರ್ಗಳ ಬೆನ್ನು, ಇಲ್ಲ ತಲೆಗಳು. ಕೊನೆಗೆ ಸಂಕೋಚಬಿಟ್ಟು ಪಕ್ಕದಲ್ಲಿದ್ದೋರನ್ನ ವರನ ಹೆಸರು ವಿಚಾರಿಸಿದೆ. ನೋಡಿದ್ರೆ ಅದು ಬೇರೆ ಯಾರದ್ದೋ ಮದುವೆ ಆಗಿತ್ತು. ಅವರಿಗೆ ಅದೇನು ಗುಮಾನಿ ಬಂತೋ ಏನೋ.. ಅವರು - "ಅಲ್ಲ ನೀವು ತಿಮ್ಮಪ್ಪಯ್ಯನೋರ ಕಡೆಯೋರಲ್ವೇ? ನಿಮ್ಮ ಯಜಮಾನರು ಪಾಪ ಸುಮ್ಮನೇ ಒಂದೂ ಮಾತಿಲ್ಲದೇ ಮಿಕಿಮಿಕಿ ಅಂತ ಕೂತಿರೋದು ನೋಡಿದ ತಕ್ಷಣವೇ ಅಂದ್ಕೊಂಡೆ, ಅದೇ ಹೋಲಿಕೆ ಅಂತ. ಹಾಗಾದ್ರೆ ನೀವು ಯಾರ ಕಡೆಯೋರೋ?" ಅಂತ ಹುಬ್ಬೇರಿಸಿದರು. ತಕ್ಷಣ ಅವರಿಗೆ ಏನೋ

ಒಂದು ಸಮಜಾಯಿಷಿ ಹೇಳಿ, ಇವರಿಗೆ ಏನು ನಡೀತಿದೆ ಅಂತ ಗೊತ್ತಾಗಿ ರೇಗಕ್ಕೂ ಮುಂಚೆ ಬೇಗ್ಬೇಗ ಹೊರಡಿಸಿಕೊಂಡು ಬಂದಿದ್ದಾಯ್ತು. ಕಾರಲ್ಲಿ ನಡೆದ ಅಷ್ಟೋತ್ತರದ ಬಗ್ಗೆ ಕೇಳಬೇಡಿ. ಮನೆಗೆ ಬಂದ ತಕ್ಷಣ ಹರಿಣಿಗೆ ಫೋನು ಮಾಡಿದರೆ ಮದುವೆ ಹಿಂದಿನ ಗುರುವಾರವೇ ಮುಗಿದುಹೋಗಿದ್ದು ಗೊತ್ತಾಗಿ ಅವಳ ಕೈಯ್ಯಲ್ಲೂ ಅಷ್ಟೋತ್ತರ ಆಯ್ತು. ಒಟ್ನಲ್ಲಿ ಪ್ರಸನ್ನನ ಅದೃಷ್ಟ ಆಂತಲೂ ಕಾಣತ್ತೆ, ಹೆಂಡತಿ ಎದುರಿಗೆ ನನ್ನ ಕೈಲಿ ಕಿವಿ ಹಿಂಡಿಸ್ಕೊಳ್ಳೋದು ತಪ್ಪಿದ್ದು.

ಇದು ಅತೀ ಆಯ್ತು, ಹೇಗಾದ್ರೂ ಮಾಡಿ ಇದಕ್ಕೊಂದು ಗತಿ ಕಾಣಿಸಲೇಬೇಕೂಂತ ಮನಸ್ಸು ಮಾಡಿದೆ. ಅಷ್ಟೊತ್ತಿಗೆ ಸರಿಯಾಗಿ ಆಗಿನಕಾಲಕ್ಕೆ ಅತಿ ದೂರ ಅನ್ನಿಸಿಕೊಂಡಿದ್ದ ರಾಜರಾಜೇಶ್ವರಿನಗರದಲ್ಲಿ ನನ್ನ ಕಸಿನ್ ವೇಣು ಕಟ್ಟಿದ್ದ ಮನೆ ಗೃಹಪ್ರವೇಶದ ಇನ್ವೈಟ್ ಬಂತು. ಆಗ ತಾನೇ ಆಗಿದ್ದ ಅನುಭವ ಸರಿಯಾಗಿ ಪಾಠ ಕಲಿಸಿತ್ತು ನೋಡಿ, ಅದಕ್ಕೇ ಈ ಸಲ ಸರಿಯಾದ ದಿನವೇ ಹೋಗಿ ವೇಣು ದಂಪತಿಗಳ ಮನಸ್ಸಂತೋಷಪಡಿಸಬೇಕು ಅಂತ ಬಲು ಸೀರಿಯಸ್ಸಾಗಿ ಶಪಥ ಮಾಡಿದೆ. ದಿನಕ್ಕೆರಡು ಮೂರು ಸಲವಾದರೂ ಅದರದ್ದೇ ಗೀಳು. ಕೊನೆಗೆ ಆ ದಿನವೂ ಬಂತು.

ಮಲ್ಲೇಶ್ವರದ ಮೂಲೆಯಿಂದ ರಾ.ರಾ.ನ–ದ ತುಟ್ಟತುದಿಗೆ ಸರಿಯಾದ ಸಮಯಕ್ಕೆ ತಲುಪಲೇಬೇಕೆಂಬ ಸಂಭ್ರಮದಲ್ಲಿ ಬೆಳಗ್ಗೆ ತಿಂಡಿಯನ್ನೂ ಮಾಡದೇ, "ಅಲ್ಲಿ ಒಳ್ಳೆಯ ಊಟ ಇರತ್ತಲ್ಲ ಸಾಕು ಬನ್ನಿ" – ಅಂತ ಇವರಿಗೂ ಬರೀ ಬನ್ನು–ಕಾಫಿಯನ್ನ ಗದುಕಿಸಿ, ಇವರ ಗೊಣಗಾಟಾನೂ ಕೇರ್ ಮಾಡದೇ ಹೊರಟಿದ್ದೂ ಆಯ್ತೂನ್ನಿ.

ಒಳ್ಳೇ ಮೇ ತಿಂಗಳ ರಣ ಬಿಸಿಲು, ನಮ್ಮದೋ ಮೂವತ್ತು ಮೈಲಿ ಸ್ಪೀಡಿನ, AC ರಹಿತ ವಾಹನವಿಶೇಷ. ಸಾಲದ್ದಕ್ಕೆ ಗೊತ್ತಿಲ್ಲದ ಬಡಾವಣೆ ಬೇರೆ. ಆಗೆಲ್ಲಾ ಜಿಪಿಎಸ್ಸು ಗೀಪೀಎಸ್ಸು ಎಲ್ಲಿ ಬಂತು ಸಧ್ಯ! ಕೊನೆಗೂ ಇನ್ವೈಟ್‌ನಲ್ಲಿದ್ದ ಮ್ಯಾಪ್ ಪ್ರಕಾರ ಆ ಕುರುಚಲು ಗಿಡಮರಗಳ ಮಧ್ಯೆ ಇದ್ದ ಕಚ್ಚಾ ರಸ್ತೆಯಲ್ಲೂ ಅಡ್ರೆಸ್ ಕಂಡುಹಿಡಿದು ಓ ಲಕ್ಷ್ಮಣಾಂತ ತಲುಪಿದರೆ ಅಲ್ಲಿ ಗೃಹಪ್ರವೇಶದ ಸುಳಿವಾದರೂ ಇರಬೇಡ್ವೇ! ನೋಡಿದರೆ ಬರೀ ಕುಟ್ಟೀಚಚ್ಚೀ ಗಲಾಟೆ ಎಬ್ಬಿಸುತ್ತಿದ್ದ ಕಾರ್ಪೆಂಟರ್‌ಗಳು, ಸದ್ದಿಲ್ಲದೇ ಬೀದಿ ಬಾಗಿಲು, ಕಿಟಕಿಗಳಿಗೆ ಫೈನಲ್ ಟಚಸ್ ಕೊಡ್ತಿದ್ದ ಪೈಂಟರ್ಗಳದ್ದೇ ರಾಜ್ಯಭಾರ! ಬರೀ ಟರ್ಪೆಂಟೈನ್ ವಾಸ್ನೆ. ಸಾಲದ್ದಕ್ಕೆ ವಾಚ್ಮನ್ ಶೆಡ್ ಮುಂದೆ ಬಿದ್ಕೊಂಡಿದ್ದ ಒಂದು ನಾಯಿ ಬೇರೆ ನಮ್ಮನ್ನ ನೋಡಿ ಗುರುಗುಟ್ಟಿ ಎದ್ದುಬಂದು ಹುಯಿಲೆಬ್ಬಿಸಿತು. ಇವರಿಗೋ ನಾಯಿ ತಲೆ ಕಂಡರಾಗದು!

ಒಂದು ಕಡೆಯಲ್ಲಿ ಹೊಟ್ಟೆಯಲ್ಲಿ ತಾಳ, ಇನ್ನೊಂದು ಕಡೆ ಹೊರಗಿನ ಧಗೆಗೂ ಮೀರಿದ್ದ ಇವರ ಕೋಪದ ಧಗೆ! ಹೋಗಲಿ ಅಂದ್ರೆ ಆಗೆಲ್ಲಾ ಅದು ಸರಿಯಾದ ಒಂದು ಹೋಟೆಲ್ಲೂ ಇರದ ಹೊಸ ಬಡಾವಣೆ ಬೇರೆ.. ನನ್ನ ಗ್ರಹಚಾರಕ್ಕೆ ಯಾಕೆ ಹೀಗಾಯ್ತೂಂತ ಆ ಹಾಳು ನಾಯಿಯಿಂದ ಹೇಗೋ ತಪ್ಪಿಸಿಕೊಂಡು ಕಾರಲ್ಲಿ ಕೂತು ಇನ್ವೈಟ್ ಚೆಕ್ ಮಾಡಿದರೆ ಗೃಹಪ್ರವೇಶ ಹದಿನೈದು ದಿನಗಳ ನಂತರದ ಅದೇ ದಿನ ಅಂತ ಗೊತ್ತಾಯ್ತು! ಶ್ರೀರಾಮರಕ್ಷೆ!

ಅಂತೂ ಇಂದಿನವರೆಗೂ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಇದು ಹೀಗೇ ಅನೂಚಾನವಾಗಿ ನಡ್ಕೊಂಡು ಬಂದಿದೆ. ಇವರಿಗೂ ನನ್ನ ಸುಟ್ಟರೂ ಹೋಗದ ಹುಟ್ಟುಗುಣಾನ ಬೈದು ತಿದ್ದೋದು ಸಾಕಾಗಿದೆ. ನಂಗಂತೂ "ಮೂರನೇ ವಯಸ್ಸಿಗೆ ಬಂದಿದ್ದು ಮೂವತ್ತಕ್ಕೂ ಕಣೇ" – ಅಂತ ನಮ್ಮಜ್ಜಿ ಹೇಳ್ತಿದ್ದಿದ್ದು ನೆನಪಿಗೆ ಬರ್ತಿದೆ. ಏನೋ! ಈಗಂತೂ ವಯಸ್ಸೂ ಆಗ್ತಿರೋದ್ರಿಂದ ಈಗ ಯಾರೇನು ಬೇಕಾದ್ರೂ ಅಂದ್ಕೊಳ್ಳಲಿ, ಕತ್ತೆ ಬಾಲ ಕುದುರೆ ಜುಟ್ಟು – ಅಷ್ಟೇ ಅಂತಂದ್ಕೊಂಡು ನಾನೂ ಸುಮ್ಮನಾಗಿಬಿಟ್ಟಿದ್ದೀನಿ.

■

# ಬಟರ್ ಬಸಪ್ಪನ ಚಾಣಾಕ್ಷತೆ....!

ವಿ.ವಿಜಯೇಂದ್ರ ರಾವ್

ಅದೊಂದು ಪ್ರೈವೇಟ್ ಕಂಪನಿಯಾಗಿದ್ದು, ಲಾಭಗಳಿಕೆಯಲ್ಲೂ ಸಹ ಮುಂಚೂಣಿಯಲ್ಲಿತ್ತು. ಎಲ್ಲಾ ಆಫೀಸಿನಲ್ಲಿ ಇರುವಂತೆ, ಅದಕ್ಕೂ ನರಸಿಂಗ ರಾವ್ ಅನ್ನುವವರು ಒಬ್ಬರು ಬಾಸ್ ಆಗಿದ್ದರು. ಆ ಆಫೀಸಿನಲ್ಲಿ ಎಷ್ಟೇ ಜನ ಇದ್ದರೂ, ಬಟರ್ ಬಸಪ್ಪ ಅಂತ ಖ್ಯಾತಿ ಪಡೆದಿದ್ದ ಬಸವರಾಜ್, ಯಾರೇ ಬಾಸ್ ಬಂದರೂ ಸಹ, ಅವರಿಗೆ ಸೂಕ್ತ ರೀತಿಯಲ್ಲಿ ಬೆಣ್ಣೆ ಹಚ್ಚಿ, ತನ್ನ ಕಾರ್ಯಗಳನ್ನು ಸಾಧಿಸಿಕೊಳ್ಳುತ್ತಾ, ಪ್ರಮೋಷನ್ ಸಹ ಪಡೆಯುತ್ತಿದ್ದನು.ಅವನ ಕಾರ್ಯವೈಖರಿಯನ್ನು ಕಂಡು ಅವನಿಗೆ "ಬಟರ್ ಬಸಪ್ಪ" ಅಂತ ಅಡ್ಡ ಹೆಸರಿನಿಂದ ಕರೆಯುವುದು ಅವನಿಗೂ ತಿಳಿದಿತ್ತು.ಈ ನರಸಿಂಗ ರಾಯರಿಗೂ ಅವರು ಅಕಸ್ಮಾತ್ ಲೇಟಾಗಿ ಬಂದರೆ, ಅವರ ಛೇಂಬರ್‌ಗೆ ಹೋಗಿ, ಬಿಸಿ, ಬಿಸಿ ಕಾಫಿಯನ್ನು ತನ್ನ ಫ್ಲಾಸ್ಕಿನಿಂದ ಬಗ್ಗಿಸಿ ಕೊಟ್ಟು ಅವರ ಮನವನ್ನು ಗೆದ್ದು, ಹೊರ ಬರುತ್ತಿದ್ದ. ಇವನ ಕಾರ್ಯವಿಧಾನ ಕಂಡು, ಇತರರು ರೋಸಿಹೋಗಿ, ಏನೂ ಮಾಡಲಾಗದೆ, ಕೈ ಕೈ ಹಿಸುಕಿ ಕೊಳ್ಳುತ್ತಿದ್ದರು.

ಹೀಗಿರುವಾಗ ಒಂದು ದಿನ ಬೆಳಿಗ್ಗೆ....... ಎಲ್ಲರೂ ಆಫೀಸಿಗೆ ಬಂದಾಗ, ತಮ್ಮ ಬಾಸಿನ ತಾಯಿಯವರು ಅಂದು ಬೆಳಿಗ್ಗೆ ನಿಧನರಾದರು ಎನ್ನುವ ಕಹಿ ಸುದ್ದಿ ಎಲ್ಲರಿಗೂ ತಲುಪಿತು. ಸರಿಯೆಂದು, ಎಲ್ಲರೂ ತಮ್ಮ ಸಂತಾಪ ಸೂಚಿಸಲು, ಬಾಸ್ ಮನೆಗೆ ಹೋದರು. ಆದರೆ, ಅವರು ಯಾರಿಗೂ ಬಟರ್ ಬಸಪ್ಪನ ಸುಳಿವು ಅಲ್ಲಿ ಎಲ್ಲೂ ಕಾಣಲಿಲ್ಲ. ಮನದೊಳಗೆ ಅವರೆಲ್ಲರಿಗೂ ಏನೋ ಆನಂದ, ಅಂತೂ ಬಟರ್ ಬಸಪ್ಪ, ಬಾಸ್‌ನ ಅವಕೃಪೆಗೆ ಒಳಗಾಗುತ್ತಾನೆ ಅಂತ. ಎಲ್ಲರೂ ಸಂತಾಪ ಸೂಚಿಸಿದ ನಂತರ, ಬಾಸ್‌ನ ಪರಿವಾರದೊಂದಿಗೆ ಸ್ಮಶಾನದತ್ತ ಮೆರವಣಿಗೆಯಲ್ಲಿ ಹೋದರು.


ಆಗ ಸಂಕ್ರಮಣದ ಕಾಲವಾದ್ದರಿಂದ ಅಂದು, ಅನೇಕರು ಸ್ವರ್ಗಸ್ಥರಾದ್ದರಿಂದ, ಹೆಣಗಳ ದೊಡ್ಡ ಸಾಲೇ ಅಲ್ಲಿತ್ತು. ಸುಮಾರು ಹದಿನೈದು ಇಪ್ಪತ್ತು ಹೆಣಗಳು ಒಂದರ ಹಿಂದೆ ತಮ್ಮ ಸರದಿಗಾಗಿ ಕಾಯುತ್ತಾ ಮಲಗಿದ್ದವು.ಬಾಸ್ ಒಂದೇ ಟೆನ್ಶನ್ನಿಂದ ಶತಪಥ ತಿರುಗಾಡುತ್ತಿದ್ದರು. ಕಡೇ ಪಕ್ಷ, ಇನ್ನೂ ಮೂರು ಗಂಟೆಗಳ ಕಾಲ, ಈ ಸರದಿಯಲ್ಲೇ ಇರಬೇಕು, ಯಾವಾಗ ಎಲ್ಲಾ ಮುಗಿಸಿ ಹೋಗುತ್ತೀವೋ ಎಂದು ಚಡಪಡಿಸುತ್ತಿದ್ದಾಗ...

ದಿಢೀರನೆ ಎರಡನೇ ನಂಬರ್ ಜಾಗದಲ್ಲಿದ್ದ ಒಂದು ಶರೀರ, ಮೆಲ್ಲಗೆ ಎದ್ದು, ಹೊದ್ದಿಕೊಂಡಿದ್ದ ಅಚ್ಚ ಬಿಳಿ ಹೊದಿಕೆಯನ್ನು ಕೆಳಗೆ ಹಾಕಿ ಆ ಸಾಲಿನಲ್ಲಿ ಹಿಂದಿದ್ದ ತನ್ನ ಬಾಸ್ ನ ಹತ್ತಿರ ಓಡಿಹೋಗಿ–ಸಾರ್, ನೀವು ನಿಮ್ಮ ತಾಯಿಯ ಪಾರ್ಥಿವ ಶರೀರವನ್ನು ನಾನಿದ್ದ ಜಾಗದಲ್ಲಿ ಮಲಗಿಸಿ, ಇನ್ನು ಹತ್ತೇ ನಿಮಿಷದಲ್ಲಿ ಕಾರ್ಯ ಮುಗಿಸಿ ಬಿಡಬಹುದು ಎಂದಾಗ, ಆ ದುಃಖದಲ್ಲೂ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಯಾವುದೇ ಶಿಷ್ಟಾಚಾರವನ್ನು ನೋಡದೆ, ಬಟರ್ ಬಸಪ್ಪನನ್ನು ಆತ್ಮೀಯವಾಗಿ ತಬ್ಬಿಕೊಂಡು, ನಿನ್ನ ಈ ಉಪಕಾರವನ್ನು ನಾನು ಯಾವತ್ತೂ ಮರೆಯುವುದಿಲ್ಲ ಎಂದು ಹೇಳಿ, ಮುಂದೆ ಎಲ್ಲಾ ಕಾರ್ಯಗಳು, ಸುಗಮವಾಗಿ ಸಾಗಲು ಎಲ್ಲಾ ಏರ್ಪಾಟು ಮಾಡಿದ್ದ ಬಟರ್ ಬಸಪ್ಪನನ್ನು ಕಂಡು, ಅವನ ಆಫೀಸಿನ ಇತರ ಸಿಬ್ಬಂದಿ ವರ್ಗದವರು ...ಎಲಾ ಇವನಾ..!, ನಾವು ಇವನು ಬರಲೇ ಇಲ್ಲ ಅಂದುಕೊಂಡರೆ, ಇವನು ಇಲ್ಲಿಯ ಪರಿಸ್ಥಿತಿ ಅರಿತು, ಅದಕ್ಕೆ ತಕ್ಕಂತೆ, ಕಾರ್ಯ ನಿರ್ವಹಿಸಿ ಭೇಷ್ ನ್ನು ಪಡೆದಿದ್ದನ್ನು ನೋಡಿ, ನಾವು ಇವನಿಂದ ಬಹಳಷ್ಟು ಕಲಿಯಬೇಕಿದೆ ಅಂದುಕೊಂಡರು. ....ನರಸಿಂಗ ರಾಯರ ಉಳಿದಿದ್ದ ಆರು ತಿಂಗಳ ಸರ್ವೀಸಿನ ನಂತರ, ಆ ಆಫೀಸಿಗೆ ಬಾಸ್ ಆದದ್ದು...ನಮ್ಮ " ಬಟರ್ ಬಸಪ್ಪ " ಅಂತ ಬಾಯಿಬಿಟ್ಟು ಬೇರೆ ಹೇಳಬೇಕಾ......!

# ಆಮೆ ಮೊಲದ ಕಥೆ
## (ಈಚೆಗೆ ನಡೆದದ್ದು)

ತೋಚಿದ್ದು - ಗೀಚಿದ್ದು : **ರಾಂಕಿ ಬೆಳ್ಳೂರು**

ಈ ಕಾರ್ಟೂನ್ ಸ್ಟ್ರಿಪ್ ತಯಾರಿಸುವಾಗ ಯಾವುದೇ ಪ್ರಾಣಿಗಳಿಗೆ ಹಿಂಸೆ ನೀಡಿಲ್ಲ.
(ಸಂಪಾದಕರನ್ನು ಹೊರತುಪಡಿಸಿ)




ಜಗತ್ತು ಆ ಶಬ್ದವನ್ನು
ನೋಡುತ್ತಿರುವಾಗ, ಆಮೆ
ಕಾಣದಂತೆ ಚಲಿಸಿತು.
ವಿರಾಮವಿಲ್ಲ. ಶಬ್ದವಿಲ್ಲ.
ಕೇವಲ ಉದ್ದೇಶ.





ಮೊಲ ಕಣ್ಣು ಮಿಟುಕಿಸಿತು.
ದಾರಿ ಖಾಲಿಯಾಗಿತ್ತು.
"ಅವನು ಹೇಗೆ ಮುಂದೆ
ಬಂದನು?" ಎಂದು ಅದು
ಆಶ್ಚರ್ಯಪಟ್ಟಿತು.

ತಂತ್ರದಲ್ಲಿ, ದಿಕ್ಕು ತೋಚದ
ವೇಗವು ಯಾವುದೇ
ಉಪಯೋಗವಿಲ್ಲ.
ಆಮೆ ಗೆಲ್ಲುವುದಷ್ಟೇ ಅಲ್ಲ -
ಅದು ಮೊಲವನ್ನು ಮೀರಿಸಿತು.
ನಿರ್ಣಾಯಕವಾಗಿ
ಕಾರ್ಯನಿರ್ವಹಿಸಿತು.




## ನೀತಿ ಪಾಠ:



ಗೆಲುವು ವೇಗದ ಬಗ್ಗೆ ಅಲ್ಲ.
ಅದು ಯಾವಾಗ ಮತ್ತು ಹೇಗೆ
ಚಲಿಸಬೇಕೆಂದು ತಿಳಿದುಕೊಳ್ಳುವುದರ ಬಗ್ಗೆ.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ಮುಳ್ಳು ಬಿತ್ತುವ ಮನುಷ್ಯ ಬರಿಗಾಲಿನಲ್ಲಿ ನಡೆಯಬಾರದು.
- ✓ ಜಗತ್ತು ಎಷ್ಟು ಕೆಟ್ಟಿದೆ ಎಂದರೆ ಸತ್ತು ಹೋಗಿರುವ ಮೀನು ಕೂಡ ಫ್ರೆಶ್ ಆಗಿರಬೇಕು ನಮ್ಮ ಜನಕ್ಕೆ.
- ✓ ತಿನ್ನುವ ಅನ್ನ ಕೈ ಚೆಲ್ಲಿ ಅಂಗಿಯ ಮೇಲೆ ಬಿದ್ದಾಗ 'ಓ ! ಶಿಟ್ !' ಎಂದು ಸಿಂಕ್ ಹತ್ತಿರ ಹೋಗಿ ನಾಜೂಕಾಗಿ ಅಂಗಿ ಒರೆಸಿಕೊಂಡವನಿಗೆ ಅಂಗಿಯ ಬೆಲೆ ಗೊತ್ತಿತ್ತು. ಚೆಲ್ಲಿದ ಅನ್ನದ ಬೆಲೆ ಗೊತ್ತಿರಲಿಲ್ಲ.
- ✓ ಯುವರ್ ಅಪಾಲಜಿ ಮಸ್ಟ್ ಬಿ ಅಸ್ ಲೌಡ್ ಅಸ್ ಯುವರ್ ಡಿಸ್‌ರೆಸ್‌ಪೆಕ್ಟ್ ವಾಸ್.
- ✓ ಹೆಣಕ್ಕೂ ಕಣ್ಣು ಕಿವಿ ಮೂಗು ಎಲ್ಲವೂ ಇರುತ್ತವೆ. ಆದರೆ ಜೀವ ಇರಬೇಕಲ್ಲ!
- ✓ ಆಧುನಿಕ ತಂತ್ರಜ್ಞಾನ ಮ್ಯಾಜಿಕ್‌ಗಿಂತ ಭಿನ್ನವಾಗಿರುವುದಿಲ್ಲ.
- ✓ ದಿ ಫಂಕ್ಷನ್ ಆಫ್ ಪ್ರಯರ್ ಈಸ್ ನಾಟ್ ಟು ಇನ್‌ಫ್ಲುಯೆನ್ಸ್ ಗಾಡ್ ಬಟ್ ರ್‍ಯಾದರ್ ಟು ಚೇಂಜ್ ದಿ ನೇಚರ್ ಆಫ್ ದಿ ಒನ್ ಹು ಪ್ರೇಸ್.
- ✓ ನದಿ ಕಲ್ಲಿನೊಡನೆ ವಾದ ಮಾಡುತ್ತಾ ಕೂಡುವುದಿಲ್ಲ. ಅದನ್ನು ಬಳಸಿ ಮುಂದೆ ಸಾಗುತ್ತದೆ. ಆ ವಿವೇಕ ಅನುಸರಿಸಬೇಕು.
- ✓ ಇಂದನ್ನು ನಿನ್ನೆಗಿಂತ ಚೆನ್ನಾಗಿ ಬಳಸಿಕೊಳ್ಳಲು ನಿಮಗೆ ಸಾಧ್ಯವಾಗದಿದ್ದರೆ ನಾಳೆ ಏಕೆ ಬೇಕು?
- ✓ ವೈ ಡು ವಿ ಓನ್ಲಿ ರೆಸ್ಟ್ ಇನ್ ಪೀಸ್? ವೈ ಡೋಂಟ್ ವಿ ಲಿವ್ ಇನ್ ಪೀಸ್ ಟೂ!
- ✓ ಜೀವನ ವಿಚಿತ್ರ. ಏನೂ ಇಲ್ಲದೆ ಬರುತ್ತೇವೆ. ನಂತರ ಎಲ್ಲ ದಕ್ಕಿಸಿಕೊಳ್ಳಲು ಹೋರಾಡುತ್ತೇವೆ. ಮತ್ತೆ ಎಲ್ಲವನ್ನೂ ಬಿಟ್ಟು ಬರಿಗೈಲಿ ಮರಳುತ್ತೇವೆ.
- ✓ ಕೆಲವರಿಗೆ ನಿಮ್ಮ ಬಗ್ಗೆ ಅಪಾರ ಕೋಪ. ಏಕೆಂದರೆ ನೀವು ಅವರು ಬಯಸಿದಷ್ಟು ಅಸುಖಿಗಳಾಗಿಲ್ಲ ಎಂಬ ಕಾರಣಕ್ಕಾಗಿ.
- ✓ ದಿ ಟ್ರಬಲ್ ವಿತ್ ಹ್ಯಾವಿಂಗ್ ಅನ್ ಓಪನ್ ಮೈಂಡ್ ಈಸ್ ದಟ್ ಪೀಪಲ್ ಇನ್‌ಸಿಸ್ಟ್ ಆನ್ ಕಮಿಂಗ್ ಅಲಾಂಗ್ ಅಂಡ್ ಅಂಡ್ ಟ್ರೈಯಿಂಗ್ ಟು ಪುಟ್ ಥಿಂಗ್ಸ್ ಇನ್ ಇಟ್.

■

# ಜನ್ಮ ದಿನಾಂಕದ ಜನ್ಮಾಂತರದ ಎಡವಟ್ಟುಗಳು

ಗೀತ ಕುಂದಾಪುರ

ಈಗ ದಾಖಲೆ ಅಂದರೆ ಸರ್ಟಿಫಿಕೇಟ್‌ಗಳ ಕಾಲ, ಎಲ್ಲದಕ್ಕೂ ಸರ್ಟಿಫಿಕೇಟ್‌ನ್ನು ಕೊಟ್ಟು ಸಾಬೀತು ಪಡಿಸಬೇಕು. ಉಳಿದದ್ದಕ್ಕೆಲ್ಲಾ ಇರಲಿ ಹುಟ್ಟಿದ್ದಕ್ಕೆ, ಬದುಕುತ್ತಿರುವುದಕ್ಕೆ, ಸತ್ತಿರುವುದಕ್ಕೂ ಸರ್ಟಿಫಿಕೇಟ್ ಇದೆ. ಹುಟ್ಟಿದ್ದನ್ನು ಸಾಬೀತು ಪಡಿಸಲು ಬರ್ತ್ ಸರ್ಟಿಫಿಕೇಟ್' ಟೇಬಲ್ಲಿನ ಮೇಲಿಡಬೇಕು, ಹಾಗೆಯೇ ಬದುಕಿದ್ದನ್ನು ಸಾಬೀತು ಪಡಿಸಲು ಯಾವುದೋ ಆಫೀಸರ್ ಕೊಡುವ ಲಿವಿಂಗ್ ಸರ್ಟಿಫಿಕೇಟ್' ಕೊಡಬೇಕು. ಸತ್ತರೂ ಸರ್ಟಿಫಿಕೇಟ್ ಹಾವಳಿ ತಪ್ಪದು, ಸತ್ತವರ ಡೆತ್ ಸರ್ಟಿಫಿಕೇಟ್' ಕೊಟ್ಟು ಸಾಬೀತು ಪಡಿಸಬೇಕು.

5–6 ದಶಕಗಳ ಹಿಂದೆ ನಾವು ಹುಟ್ಟಿದ್ದಕ್ಕೆ ದಾಖಲೆ ಅಂದರೆ ಬರ್ತ್ ಸರ್ಟಿಫಿಕೇಟ್' ಮಾಡಿಸುವ, ಕೊಡುವ ಪದ್ದತಿ ಚಾಲ್ತಿಯಲ್ಲಿರಲಿಲ್ಲ, ಹುಟ್ಟಿರಲಿಲ್ಲ. ಶಾಲೆಗೆ ಸೇರಿಸುವಾಗ ಹೆತ್ತವರು ಕೊಟ್ಟ ಜನ್ಮ ದಿನಾಂಕವೇ ಜನ್ಮ ದಿನಾಂಕ, ಮೇಷ್ಟ್ರು ಬರೆದುಕೊಂಡದ್ದೇ ರೆಕಾರ್ಡ್. ಎಸ್.ಎಸ್.ಎಲ್.ಸಿ ಸರ್ಟಿಫಿಕೇಟ್‌ನಲ್ಲಿ ಜನ್ಮ ದಿನಾಂಕವೂ ನಮೂದಿಸುತ್ತಿದ್ದು ಜನ್ಮ ದಿನಾಂಕಕ್ಕೆ ದಾಖಲೆಯಾಗುತ್ತಿತ್ತು. ಹುಟ್ಟಿಗೆ ಸರಿಯಾದ ದಾಖಲೆಗಳಿಲ್ಲದೆ ಆದ ಎಡವಟ್ಟುಗಳು ಒಂದೇ, ಎರಡೇ. ನನ್ನ ಕಸೀನ್ ಸುಮಾ ಮತ್ತವಳ ಗೆಳತಿ ರೇಖಾ ಇಬ್ಬರೂ ಒಂದೇ ಶಾಲೆಯ ಒಂದೇ ಬೇಂಚಿನ ಮೇಲೆ ಕೂತೆದ್ದು ಬೇರೆ, ಬೇರೆ ಬ್ಯಾಂಕ್ ಸೇರಿದವರು. ನನ್ನಕ್ಕನಿಗೆ ರಿಟೈರ್ ಆಯಿತೆಂದು ಬ್ಯಾಂಕಿನವರು ಹೂ ಹಾರ ಹಾಕಿ, ಸಿಹಿ ತಿನ್ನಿಸಿ ಸೆಂಡ್ ಆಫ್ ಮಾಡಿ ಮನೆಗೆ ಕಳುಹಿಸಿಕೊಟ್ಟರು. ರೇಖಾ ಮಾತ್ರ ಅಯ್ಯೋ.. ನನಗೆ ಇನ್ನೂ ಎರಡು ವರ್ಷದ ಸರ್ವಿಸ್ ಇದೆ' ಎಂದಳು, ಅದೇಗೆ ಸಾಧ್ಯ ಎಂದರೆ? ಶಾಲೆಗೆ ಸೇರಿಸುವಾಗ ನಮ್ಮಪ್ಪ ತಪ್ಪಾಗಿ ಎರಡು ವರ್ಷ ಮುಂದಿನ ಜನ್ಮ ದಿನಾಂಕ ಕೊಟ್ಟಿದ್ದರು ಕಣೇ' ಎಂದಳು. ಇಂತಹ ಕೇಸುಗಳು ಅಪರೂಪವಲ್ಲ, ನನ್ನದೂ ಹೆಚ್ಚು ಕಮ್ಮಿ ಇಂತಹದ್ದೇ ಕೇಸ್; ಶಾಲೆಯ ರೆಕಾರ್ಡಿನಲ್ಲಿರುವ ಜನ್ಮ ದಿನಾಂಕ ನಿಜವಾದದ್ದಲ್ಲ, ಯಾವುದೋ ಲಕ್ಕಿ ನಂಬರ್ ಎಂದೆನಿಸಿದ್ದನ್ನು ಶಾಲೆಗೆ ಸೇರಿಸುವಾಗ ಕೊಟ್ಟಿದ್ದರು. ಪಾಸ್ಪೋರ್ಟಿಗೆ ಶಾಲೆಯ ರೆಕಾರ್ಡ್ ಆಧಾರವಾಯಿತು. ಯಾವುದೋ ದೇಶದ ಇಮಿಗ್ರೇಷನ್ ಕೌಂಟರಿನಲ್ಲಿ ನಿಂತಿದ್ದೆ, ಅಲ್ಲಿನ ದಡಿಯ ಆಫೀಸರ್ ಸುಮ್ಮನೆ ಚೆಕ್ ಮಾಡುವಂತೆ ಡೇಟ್ ಆಫ್ ಬರ್ತ್' ಕೇಳಿದ. ನಾನೋ ಹೆಮ್ಮೆಯಿಂದ ನನ್ನ ನಿಜವಾದ ಡೇಟ್ ಆಫ್ ಬರ್ತ್ ಹೇಳಿದೆ, ಆಫೀಸರ್ ನನ್ನನ್ನು ದುರುಗುಟ್ಟಿ ನೋಡಿದ, ನನ್ನ ತಪ್ಪು ಅರಿವಾಗಿ ನಡುಗಿದೆ, ಅವನು ನನ್ನನ್ನು ಮತ್ತಷ್ಟು ಅನುಮಾನದಿಂದ ನೋಡಿದ. ಇಲ್ಲಿ ನನ್ನದೇ ತಪ್ಪು, ನನ್ನ ಎರಡೆರಡು ಜನ್ಮ ದಿನಾಂಕ ನೆನಪಿಟ್ಟುಕೊಳ್ಳುವಲ್ಲಿ ಎಡವಿದ್ದೆ.

ನನ್ನ ಗಂಡನ ಕತೆ ಇನ್ನೂ ವಿಚಿತ್ರ. ಅವರ ಅರ್ಧಾಂಶ ಕ್ಲಾಸಮೆಟ್ಸ್‌ನ ಜನ್ಮ ದಿನಾಂಕ ಜೂನ್ ಒಂದು. ಹಿಂದಿನ ಕಾಲದಲ್ಲಿ ಮನೆಯಲ್ಲಿ 5–6 ಮಕ್ಕಳು ಸಾಮಾನ್ಯ, ಮಕ್ಕಳ ಜನ್ಮ ದಿನಾಂಕ ತಂದೆಗೆ ನೆನಪಿರುವುದು ಅಪ್ಪರಲ್ಲೇ ಇದೆ. ಜೂನ್ ಒಂದರಂದು ಶಾಲೆ ತೆರೆದು ಮಕ್ಕಳನ್ನು ಶಾಲೆಗೆ ಭರ್ತಿ ಮಾಡಿಕೊಳ್ಳುವಾಗ ಮೇಷ್ಟ್ರು ಜೂನ್ 1 ಎಂದು ಬರೆದು ಸೇರಿಸಿಕೊಂಡಿದ್ದರು. ಇದೇ ಸಾಮೂಹಿಕ ಹುಟ್ಟಿನ ಗುಟ್ಟು. ಹೀಗೂ ಆಗಿದ್ದಿದೆ, ಆಶ್ಚರ್ಯಪಡಬೇಕಾಗಿಲ್ಲ, ಊರಿನಲ್ಲಿ ನಮ್ಮ ಪಕ್ಕದ ಮನೆಯವರಿಗೆ ವರ್ಷಕ್ಕೊಂದರಂತೆ ಸಾಲು, ಸಾಲು ಮಕ್ಕಳು, ಅಪ್ಪ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಸಣ್ಣವ ಜನಿಸಿದ ಇಸವಿ, ದೊಡ್ಡವನಿಗಿಂತ ಹಿಂದಿನ ಇಸವಿ ಕೊಟ್ಟಿದ್ದರು, ಇದರ ಪ್ರಕಾರ

ಅಧಿಕೃತವಾಗಿ ಸಣ್ಣವ ಸಣ್ಣವನಲ್ಲ, ದೊಡ್ಡವ; ಹಾಗೆಯೇ ದೊಡ್ಡವ ದೊಡ್ಡವನಲ್ಲ ಸಣ್ಣವ. ನನ್ನ ಗೆಳತಿಯ ಮಾವ ಸ್ವತಂತ್ರ ಸೇನಾನಿ, ಇತ್ತೀಚೆಗೆ ತೀರಿಕೊಂಡರು, ಕೂಡಲೆ ಮನೆಯವರು ಡೆತ್ ಸರ್ಟಿಫಿಕೇಟ್ ಮಾಡಿಸಿಟ್ಟುಕೊಂಡರು. ಸರಕಾರದಿಂದ ಯಾವುದೋ ಹಣ ಮತ್ತು ಪ್ರಶಸ್ತಿ ಬರಬೇಕಿತ್ತು, ಅವರ ವಯಸ್ಸನ್ನು ನಿಕರವಾಗಿ ಗುರುತಿಸಲು ಬರ್ತ್ ಸರ್ಟಿಫಿಕೇಟ್ ಕೇಳಿದರು. ಮನೆಯವರು ವಿಲೇಜ್ ಅಕೌಂಟೆಂಟನ್ನು ಹಿಡಿದು ಬರ್ತ್ ಸರ್ಟಿಫಿಕೇಟ್ ಮಾಡಿಸಿದರೆನ್ನಿ, ಅಂತೂ ಡೆತ್ ಸರ್ಟಿಫಿಕೇಟ್ ಮೊದಲು, ಬರ್ತ್ ಸರ್ಟಿಫಿಕೇಟ್ ನಂತರ ಸಿಕ್ಕಿತು.

ನಮ್ಮ ಹುಟ್ಟು, ಸಾವಿಗೆ ನಾವು ಜವಾಬ್ಧಾರರೂ ಅಲ್ಲ. ನಾವು ಭೂಮಿಯ ಮೇಲಿದ್ದರೂ ನಮ್ಮ ಜನ್ಮ ದಿನಾಂಕಕ್ಕೆ ಆಕಾಶದಲ್ಲಿರುವ ನಕ್ಷತ್ರ ಜೊತೆಯಾಗುತ್ತದೆ. ಜನ್ಮ ದಿನಾಂಕ ನೋಡಿ ವರ್ತಮಾನ, ಭವಿಷ್ಯ, ಗುಣ, ಅವಗುಣ, ರೂಪವನ್ನೆಲ್ಲಾ ಹೇಳಿ ಜನ್ಮ ಜಾಲಾಡುವ ಪಂಡಿತರೂ ಇದ್ದಾರೆ.




ಹುಟ್ಟಿದ್ದಕ್ಕೆ, ಬದುಕು – ತ್ತಿರುವುದಕ್ಕೆ, ಸತ್ತಿರುವುದಕ್ಕೆ ಸರ್ಟಿಫಿಕೇಟ್ ಕೊಡ– ಬೇಕಾಗಿರುವ ಈ ಕಾಲದಲ್ಲಿ ಬರ್ತ್ ಸರ್ಟಿಫಿಕೇಟ್‌ನ್ನು ಡಾಕ್ಟರ್, ನರ್ಸಿಂಗ್ ಹೋಮಿ – ನವರೇ ಕೊಡುತ್ತಿದ್ದಾರೆ. ಇದರಿಂದ ಇಸವಿ, ದಿನಾಂಕ, ಗಂಟೆ, ನಿಮಿಷದಲ್ಲಿ ಎಡವಟ್ಟಾಗುವ ಪ್ರಶ್ನೆಯೇ ಇಲ್ಲ. ಆದರೀಗ ವಿಷಯ ಮತ್ತೊಂದು ದಿಕ್ಕಿಗೆ ತಿರುಗಿದೆ, ಮಕ್ಕಳ ಉಜ್ವಲ ಭವಿಷ್ಯದ ಕನಸು ಹೊತ್ತ ಈಗೀನ ಕಾಲದ ಬುದ್ಧಿವಂತ ತಂದೆ, ತಾಯಿ ಮಗು ಹುಟ್ಟುವ ದಿನ, ಗಳಿಗೆಯನ್ನು ಅವರೇ ನಿರ್ಧರಿಸುವುದು ಹೊಸ ವಿಷಯವಾಗಿ ಉಳಿದಿಲ್ಲ, ಇದರೊಡನೆ ಡಾಕ್ಟರುಗಳ ಕೈವಾಡವಂತೂ ಇರುತ್ತದೆ.

ಗೆಳತಿ ಚಂದ್ರಿಕಾ ನಮ್ಮ ಮನೆಗೆ ಸತ್ಯನಾರಾಯಣ ಪೂಜೆಗೆ ಬಂದವಳು ಮಗಳ ಡೆಲಿವರಿ ಡೇಟ್ ಜುಲೈ ತಿಂಗಳಲ್ಲಿದೆ, ಡಾಕ್ಟರ್ ನಾರ್ಮಲ್ ಡೆಲಿವರಿ ಎಂದರು. ಆ ಸಮಯದಲ್ಲಿ ನನ್ನನ್ನು ಎಲ್ಲಿಗೂ ಕರೆಯಬೇಡ, ಅವಳ ಬಾಣಂತನ ಮಾಡಬೇಕು' ಎಂದಿದ್ದಳು. ಹಾಗೆ ಹೇಳಿದವಳು ಮೇ ಕೊನೆಯ ವಾರದಲ್ಲಿ ಫೋನ್ ಮಾಡಿ ಮಗಳಿಗೆ ಹೆಣ್ಣು ಮಗು ಹುಟ್ಟಿತು ಕಣೇ, ಮಗು ಆಸ್ಪತ್ರೆಯಲ್ಲೇ ಇದೆ' ಎಂದಳು.? ಅಯ್ಯೋ, ಪ್ರಿಮೇಚರ್ ಡೆಲಿವರಿ ಅಲ್ವಾ, ಯಾವುದೂ ನಮ್ಮ ಕೈಯಲಿಲ್ಲ ಬಿಡು, ಬಾಣಂತಿ ಆರೋಗ್ಯ ತಾನೇ?' ಎಂದು ಫಿಲಾಸಫಿ ಮಾತಾಡಿ ವಿಚಾರಿಸಿದೆ. ಅವಳು ನನ್ನನ್ನು ಅಣಕಿಸುತ್ತಾ  ಅದೆಲ್ಲಾ ಯಾವುದೋ ಕಾಲಕ್ಕಾಯಿತು, ಈಗ ಎಲ್ಲವೂ ನಮ್ಮ ಕಾಲದಲ್ಲಿದೆ. ಅವಳೇನಾದರೂ ಜುಲೈ ತಿಂಗಳಲ್ಲಿ ಹೆತ್ತಿದ್ದರೆ ಮಗು ಶಾಲೆಗೆ ಸೇರುವುದು ತಡವಾಗುತ್ತಿತ್ತು,

ಒಂದು ವರ್ಷ ವೇಸ್ಟ್, ಅದಕ್ಕೆ ಪ್ಲಾನ್ ಮಾಡಿ ಮಗಳು, ಅಳಿಯ ಮೇ ತಿಂಗಳಲ್ಲೇ ಸಿಸೆರಿಯನ್ ಮಾಡಿಸಿದರು. ಮಗುವನ್ನು ಇನಕ್ಯೂಬಿಲೇಟರನಲ್ಲಿಟ್ಟಿದ್ದಾರೆ, ಮಗಳು ಹಾಲು ಕೊಟ್ಟು ಬರುತ್ತಾಳೆ, ಮಗು ಸುಧಾರಿಸಿಕೊಳ್ಳುವ ಭರವಸೆಯನ್ನು ಡಾಕ್ಟರ್ ಕೊಟ್ಟಿದ್ದಾರೆ' ಎಂದಾಗ ಮಂಡೆ ಕುಟ್ಟಿಕೊಂಡೆ. ಒಟ್ಟಿನಲ್ಲಿ ಸಿಸೆರಿಯನ್ ಡೆಲಿವರಿ ಸಾಮನ್ಯವಾಗುತ್ತಿದ್ದಂತೆ ಒಳ್ಳೆಯ ದಿನ, ಸಮಯ ನೋಡಿ ಡೆಲಿವರಿ ಮಾಡಿಸಿ ತಮ್ಮ ಮಕ್ಕಳ ಭವಿಷ್ಯವನ್ನೇ ಬರೆಯುವ ಹೆತ್ತವರು ಹೆಚ್ಚಾಗುತ್ತಿದ್ದಾರೆ.

ಅಮೆರಿಕಾದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನವೊಂದು ಗಮನ ಸೆಳೆಯಿತು. ಜಾಕ್‌ಪಾಟ್ ಹೊಡೆದಂತೆ ಅಧಿಕಾರಕ್ಕೆ ಬಂದ ಟ್ರಂಪ್ ಹೇಳಿಕೆ ಹೊರಡಿಸಿದ, ಫೆಬ್ರವರಿ 20ರ ನಂತರ ಅಮೆರಿಕಾದಲ್ಲಿ ಅಮೆರಿಕಾ ಪೌರತ್ವವಿಲ್ಲದ ತಂದೆ, ತಾಯಿಗೆ ಹುಟ್ಟಿದ ಮಕ್ಕಳಿಗೆ ಸಹಜವಾಗಿ ಅಮೆರಿಕಾದ ಪೌರತ್ವ ಬಾರದು'. ಹೇಗಾದರೂ ಮಾಡಿ ಅಮೆರಿಕಾದ ಪೌರತ್ವ ಪಡೆಯಲು ಹಾತೊರೆಯುವವರ ಆಕಾಂಕ್ಷಿಗಳಿಗೆ ಕಡಿವಾಣ ಹಾಕಿದಂತಾಯಿತು. ಅಮೆರಿಕಾದಲ್ಲಿರುವ ಬಸುರಿಯರು ಫೆಬ್ರವರಿ 20ರ ಒಳಗೆ ಹೆರಲು ಡಾಕ್ಟರನ್ನು ಒತ್ತಾಯಿಸುತ್ತಿದ್ದಾರಂತೆ.

ಪರಿಚಯದವರೊಬ್ಬರು ಇತ್ತೀಚೆಗೆ ಲಿವಿಂಗ್ ಸರ್ಟಿಫಿಕೇಟ್ ಬಗ್ಗೆ ನಡೆದ ಘಟನೆಯೊಂದು ಹೇಳಿದರು. ಪಿಂಚಣಿ ಪಡೆಯಲು ಪ್ರತಿ ವರ್ಷ ಲಿವಿಂಗ್ ಸರ್ಟಿಫಿಕೇಟ್ ರೂಪದಲ್ಲಿ ಪ್ರೂಫ್ ಕೊಡಬೇಕು. ಒಬ್ಬರಿಗೆ ಎರಡು ವರ್ಷಗಳಿಂದ ಪಿಂಚಣಿ ಬಂದಿರಲಿಲ್ಲ, ಆಫೀಸಿನಲ್ಲಿ ಸರ್ಟಿಫಿಕೇಟ್ ಕೇಳಿದರು, ಬಡಪಾಯಿ ಎಲ್ಲಿಂದಲೋ ಲಿವಿಂಗ್ ಸರ್ಟಿಫಿಕೇಟ್ ತಂದ. ಅಫೀಸಿನವರೂ ಮತ್ತೂ ಕ್ಯಾತೆ ತೆಗೆದರು, ಇದು ಈ ವರ್ಷದ ಸರ್ಟಿಫಿಕೇಟ್, ಕಳೆದ ವರ್ಷ ಬದುಕಿರುವುದಕ್ಕೆ ಸರ್ಟಿಫಿಕೇಟ್ ಕೊಡಪ್ಪ ಎಂದರು. ಇದು ವಾಟ್ಸಾಪ್ ಕತೆಯೋ ಇಲ್ಲ ನಿಜವಾಗಿ ನಡೆದದ್ದೋ ಗೊತ್ತಿಲ್ಲ. ಒಟ್ಟಿನಲ್ಲಿ ಎಲ್ಲಾ ಕಡೆ ಎಲ್ಲದಕ್ಕೂ ಪ್ರೂಫ್ ಬೇಕು.

ಜೀವನದಲ್ಲಿ ಎಡವಟ್ಟುಗಳು ಸಹಜ, ಹಿಂದೆ ಜನ್ಮ ದಿನಾಂಕದಲ್ಲಿ ಎಡವಟ್ಟು ಸಾಮನ್ಯವಾದರೆ ಈಗ ಮಗು ಜನಿಸುವ ಮೊದಲೇ ನಡೆಯುತ್ತದೆ ಹಂಗಾಮ. ■

**ಆ ಆನೆ ತಂದ್ಕೊಡು..**

ಅವತ್ತು ನೆಂಟರ ಮನೆಗೆ ವಧು ಪರೀಕ್ಷೆಗೆ ಅಂತ ಕರೆದಿದ್ರು ಇತ್ತೀಚೆಗಷ್ಟೇ ವರ್ಗವಾಗಿ ಬೇರೆ ಊರಿನಿಂದ ಬಂದಿದ್ದ ನೆಂಟರ ಕುಟುಂಬದ ಎಲ್ಲರೂ ಹೋಗಿದ್ರು..

ವಧು ಮಾತಾಡ್ತಾ..ಹುಡುಗನ ಕಡೇವ್ರು ಬರೋಕೆ ಇನ್ನೂ ಟೈಂ ಇದೆ..ಸ್ವಲ್ಪ ಮೆಡಿಟೇಷನ್ ಮಾಡ್ಬಿಡ್ತೀನಿ ಅಂತ ರೂಮಿಗೆ ಹೋದ್ಲು..ಕೆಲ ಸಮಯದ ಬಳಿಕ ತಮ್ಮ ನನ್ನು ಕರೆದು,ಲೇ ಕಿಟ್ಟಿ ಎಲ್ಲಿ ಆ ಆನೆ ಸ್ವಲ್ಪ ತಂದ್ಕೊಡು ಅಂದಿದ್ದು ಕೇಳಿ ನೆಂಟ್ರು ಗಾಬ್ರಿ ಆದ್ರು..ಇದೇನಪ್ಪಾ ಆನೆ ಸಾಕೋಷ್ಟು ಶ್ರೀಮಂತರಾ ಇವ್ರು..ಅದೂ ಅಲ್ದೆ ಆನೆ ಇರೋಷ್ಟು ದೊಡ್ಡ ಮನೇನೂ ಅಲ್ಲ..ಹೇಗೆ ಅಂತ ಆಲೋಚನೆ ಮಾಡ್ತಿದ್ದವ್ರಿಗೆ

ಕಿಟ್ಟಿ, ಅಕ್ಕಾ, ತೊಗೋ ನಿನ್ನ ಆನೆ ಅಂತ ಪುಟ್ಟ ಚೀಲವೊಂದನ್ನು ಕೊಟ್ಟಾಗ.. ನೋಡಿದ ನೆಂಟರು ನಕ್ಕಿದ್ದೇ ನಕ್ಕಿದ್ದು..ಆ ಚೀಲ ವುಲನ್ ನಲ್ಲಿ ಮಾಡಿದ ಆನೆ ಡಿಸೈನ್ ನಲ್ಲಿತ್ತು..ಅದ್ರಲ್ಲಿ ಜಪಮಾಲೆ ಇಟ್ಟಿದ್ಲು ವಧು ಸವಿತಾ.

–ಸುಮನಾ

# ಸ್ನೋಯಿ ಎಂಬ ಮುದ್ದು

ಧಾರಿಣಿ ಮಾಯಾ

ಬಹಳ ದಿನಗಳಿಂದ ಒಂದು ಹಾಲು ಬಣ್ಣದ ಬೆಕ್ಕು ನಮ್ಮನೆ ಬಳಿ ಸುತ್ತಾಡುತ್ತಿತ್ತು. ಮಾತನಾಡಿಸಲು ಪ್ರಯತ್ನಿಸಿದಾಗೆಲ್ಲಾ ಮುಖ ತಿರುವಿ ಕ್ಯಾಟ್ ವಾಕ್ ಮಾಡಿಕೊಂಡು ಹೊರಟುಹೋಗುತ್ತಿತ್ತು. ಕರೆದರೂ ಬರೋಲ್ಲವಲ್ಲ ಎಂದು ನನಗೆ ಬೇಸರವಾಗುತ್ತಿತ್ತು. ಹೀಗೊಮ್ಮೆ ಅದು ನಮ್ಮನೆ ಕಾಂಪೌಂಡಿನೊಳಗೆ ಬಂದಾಗ ಒಂದು ಪುಟ್ಟ ಬಟ್ಟಲಲ್ಲಿ ಹಾಲು ಹಾಕಿ ದೂರ ಹೋಗಿ ನಿಂತೆ. ತಾನು ಸೇಫ್ ಎಂದು ಖಾತ್ರಿಯಾದ ಮೇಲೆ ಮೆಲ್ಲನೆ ಬಂದು ಸೊರ್ರನೆ ಹಾಲನ್ನೆಲ್ಲಾ ಹೀರಿ ಮಾಯವಾಗಿಬಿಟ್ಟಿತು. ಮತ್ತೆ ಒಂದಷ್ಟು ದಿನ ಅದರ ಸುಳಿವೇ ಇರಲಿಲ್ಲ. ಇಂದಲ್ಲಾ ನಾಳೆ ಬರುತ್ತೆ ಎಂದು ಕಾದರೂ ಬರದಿದ್ದಾಗ ಬೇಸರವಾಗಿ ಅದರ ಕಡೆ ಮರೆತೇ ಬಿಟ್ಟಿದ್ದೆ.

ಒಮ್ಮೆ ನಾನು ಹೊರಗಡೆ ಹೋಗಲು ರೆಡಿಯಾಗಿ ಮನೆಬೀಗ ಹಾಕಿ ಹೊರಗಡಿಯಿಟ್ಟಾಗ ಈ ಬಿಳಿಯ ಧಡ್ಡನೆ ಪ್ರತ್ಯಕ್ಷವಾದ. ಮೊದಲೇ ನನಗೆ ಬೆಕ್ಕುಗಳ ಮೇಲೆ ಸೆಂಟಿಮೆಂಟ್ ಜಾಸ್ತಿ. ಮತ್ತೆ ಮನೆಬೀಗ ತೆಗೆದು ಒಳಗೆ ಹೋಗಿ ಹಾಲು ಕಾಯಿಸಿ, ಜೊತೆಗೆ ರೆಡಿ ಪ್ಯಾಕೆಟ್ ಫುಡ್ ಹಾಕಿದೆ. ಹಾಲು ಕುಡಿದು, ಅದನ್ನೂ ಗಬಗಬನೆ ತಿಂದು, ಮಾತನಾಡಿಸಿದರೂ ಹಿಂತಿರುಗಿ ನೋಡದೆ ಓಡಿಬಿಟ್ಟ. ನಂತರದ ದಿನಗಳಲ್ಲಿ ನನ್ನಿಂದೇನೂ ಆಪತ್ತಿಲ್ಲವೆಂದು ಮನಗಂಡು ನಿಧಾನಕ್ಕೆ ನನ್ನ ಮನೆ ಬಾಗಿಲಿಗೆ ಬರಲು ಶುರುವಿಟ್ಟುಕೊಂಡ. ಇವ ಬಂದಾಗೆಲ್ಲಾ ಕ್ಷೀರಾನ್ನ ಹಾಕತೊಡಗಿದೆ. ಪಾಪಚ್ಚಿ, ನಿತ್ಯ ಹೊರಗೆ ಅದೇನು ತಿಂದು ಬದುಕಿತ್ತೋ,, ಇಲ್ಲಿ ತಟ್ಟೆ ತೊಳೆದಂತೆ ತಿಂದು, ನನ್ನೆಡೆಗೆ ನೋಡಿ ಪುನಃ ಮಿಯ್ಯಾಂ ಗುಟ್ಟಿದ. ಫ್ರಿಜ್‌ನಲ್ಲಿದ್ದ ಹಾಲನ್ನು ಬೆಚ್ಚಗೆ ಕಾಯಿಸಿ ಅವನ ಬಟ್ಟಲಿಗೆ ಹಾಕಿದೆ. ನಿಮಿಷದಲ್ಲಿ ಮತ್ತೆ ಖಾಲಿಯಾಗಿ, ಪುನಃ ಮಿಯ್ಯಾಂ ಶುರುವಿಟ್ಟ. ಮತ್ತೆ ಮೂರನೇ ಬಾರಿಗೆ ಹಾಕಿದೆ. ನಾಲ್ಕನೇ ಬಾರಿಗೂ ಮುಂದುವರೆದಾಗ, 'ಏಯ್, ಹೊಟ್ಟೆಕೆಟ್ಟು ಅಜೀರ್ಣ ಆದತ್ತೋ ಮಾರಾಯಾ. ಸದ್ಯಕ್ಕೆ ಸುಧಾರಿಸಿಕೋ, ಹೋಗು, ನಾಳೆ ಬಾ' ಎಂದು ಬಾಗಿಲು ಹಾಕಿಕೊಂಡೆ.

ಮಾರನೆಯ ದಿನಾ ಮತ್ತೆ ಅದೇ ಸಮಯಕ್ಕೆ ಹಾಜರ್.. ಒಮ್ಮೊಮ್ಮೆ ಹೀಗೆ ದಿನಕ್ಕೆ ಎರಡರಿಂದ ಮೂರು ಬಾರಿಯೂ ಬರುವನು. ಈಗ ಇವನಿಗೆಂದೇ ದಿನಾ ಹೆಚ್ಚಿಗೆ ಹಾಲು ತೆಗೆದುಕೊಳ್ಳಲು ಶುರುಮಾಡಿರುವೆ. ಈಗಂತೂ ದಿನೇ ದಿನೇ ಹಾಲಿನ ದರ ಗಗನಕ್ಕೇರುತ್ತಿದೆ. ಆ ಉಸಾಬರಿಯೆಲ್ಲಾ ಇವನಿಗೇನು ಗೊತ್ತು. ಇವನ ಮೈಬಣ್ಣ ಸಂಪೂರ್ಣ ಬೆಳ್ಳಗೆ ಇದ್ದದ್ದರಿಂದ 'ಸ್ನೋಯಿ' ಅಂತ ನಾಮಕರಣ ಮಾಡಿದೆ. ಆದ್ರೆ ಬೀದಿಯಲ್ಲಿ ಎದ್ದು ಬಿದ್ದು ತಿರುಗುವುದರಿಂದ ಅಲ್ಲಲ್ಲಿ ಕಪ್ಪು-ಕಂದು ಬಣ್ಣ ಮೆತ್ತಿಕೊಂಡು ಸ್ವಲ್ಪ 'ಕೊಳಕಣ್ಣ' ಆಗಿದ್ದ. ಆದ್ರೂ ಅವ ನನ್ನ ಪಾಲಿಗೆ ಮುದ್ದು ಸ್ನೋಯಿನೇ..

ಒಂದು ದಿನ ಬೆಳಗ್ಗೆಯಿಂದ ಕತ್ತಲಾವರಿಸಿದ ತನಕವೂ ಅದೇಕೋ ಅವನ ಸುಳಿವೇ ಇರಲಿಲ್ಲ. ಅಂದು ನನಗೆ ಏನನ್ನೋ ಕಳೆದುಕೊಂಡ ಅನುಭವ. ಪದೇ ಪದೇ ಮನೆ ಹೊರಗಡೆ ಹೋಗಿ ಅವನಿದ್ದಾನಾ ಅಂತ ಕತ್ತು ಕೊಂಕಿಸಿ ನೋಡುವುದೇ ಆಗುತ್ತಿತ್ತು. ಅಕಸ್ಮಾತ್ ಬೀದಿ ನಾಯಿಗಳ ಬಾಯಿಗೆ ಸಿಕ್ಕಿ ಜೀವಕ್ಕೆ ಸಂಚಕಾರ ಬಂದಿರಬಹುದೇ ಎಂದು ನೆನೆದು ದಿಗಿಲಾಯಿತು. ಮಾರನೇ ದಿನ ತನ್ನ ರೆಗ್ಯೂಲರ್ ಶೆಡ್ಯೂಲ್ ಬಿಟ್ಟು ಅದ್ಯಾವಾಗಲೋ ಅಚಾನಕ್ಕಾಗಿ ಪ್ರತ್ಯಕ್ಷನಾದಾಗ, ಅವನ ದಾರಿಯನ್ನೇ ಕಾಯುತ್ತಿದ್ದ ನನ್ನ ಮನ..

**ಬಾ ಬಾರೋ ಬಾರೋ ರಣಧೀರ**

**ಬಾ ಬಾರೋ ಪ್ರೀತಿಯ ಸರದಾರಾ..**
**ಬಾ ಎಂದರೆ ಬಂದಿಳಿಯುವ ಶೂರ**
**ನೀ ಬಂದರೆ ದಿಗ್ವಿಜಯದ ಹಾರ...**

ಎನ್ನುತ್ತಾ ಗಾರ್ಲೆಂಡ್ ಬದಲು ಅವನು ಬಂದ ಖುಷಿಗೆ ಅವನಿಗೆ ಪ್ರಿಯವಾದ ರೆಡಿ ಪ್ಯಾಕೆಟ್ ಫುಡ್ ಹಾಕಿದೆ. ಎಲ್ಲವನ್ನೂ ಒಮ್ಮೆಗೇ ಕಬಳಿಸಿದವ, ಹಾಲು ಹಾಕಿದರೆ ಮೂಸಿಯೂ ನೋಡದೆ ನಂಗೆ ಹಾಲು ನಕ್ಕೋ.. ನಕ್ಕೋ.. ಎನ್ನುತ್ತಾ, ಅದೇ ಪ್ಯಾಕೆಟ್ ಫುಡ್ ಬೇಕೆಂದು ಹಠ ಹಿಡಿದ. ಇದು ಯಾಕೋ ಸರಿಯಾಗದು ಎಂದು ನಾನೂ ಅವನೊಂದಿಗೆ ಹಠಕ್ಕೆ ಬಿದ್ದು ಹಾಲನ್ನವನ್ನು ಹಾಕಿ ಕದ ಮುಚ್ಚಿ ಒಳಗೆ ಬಂದೆ. ಇವ ಏನು ಮಾಡ–ಬಹುದೆಂದ ನೋಡಲು ಕುತೂಹಲದಿಂದ ಸದ್ದಿಲ್ಲದೆ ಕಿಟಕಿಯ ಸಂದಿನಿಂದ ಇಣುಕಿದೆ. ಬಾಗಿಲು ತೆಗೆಯೇ ಶೇಷಮ್ಮ.. ಎಂದು ಅವನ ಮಿಯ್ಯಾಂ ಭಾಷೆಯಲ್ಲಿ ಕೂಗಿದಂತೆ ಭಾಸವಾಯಿತು. ಗಂಡಿನ ತಂಗಿ ಮದುವಣಗಿತ್ತಿಯನ್ನು ಬಾಗಿಲಲ್ಲಿ ತಡೆಹಿಡಿದು ಪಟ್ಟಾಗಿ ಕೂತಂತೆ ಇವನೂ ಹೊಸ್ತಿಲಿನ ಮೇಲೆಯೇ ಝಾಂಡಾ ಊರಿದ್ದ. ಆದರೆ ಅವನ ಈ ಮೊಂಡಾಟಕ್ಕೆ ನಾನು ಬಗ್ಗದೆ ಇರುವುದನ್ನು ಅರಿತು, 'ಯಾಕೋ ಈಯಮ್ಮ ನಂಗಿಂತ ಹಠ ಜಾಸ್ತಿ' ಅಂದುಕೊಂಡು ಗತಿಯಿಲ್ಲದೆ ಹಾಲನ್ನವನ್ನೇ ತಿಂದು ಮುಗಿಸಿದ. ಮಕ್ಕಳು ಹಠ ಮಾಡಿದಾಗ, ದಂಡಿಸುವುದಕ್ಕಿಂತ ನಿರ್ಲಕ್ಷಿಸಿದರೆ ಹೇಗೆ ಸರಿದಾರಿಗೆ ಬರುವರೋ, ಹಾಗೆಯೇ ಇವನ ಮನ್ ಕೀ ಸೈಕಾಲಜಿಯನ್ನು ನಾನೂ ಅರ್ಥಮಾಡಿಕೊಂಡೆ.

ನಮ್ಮನೆಯ ಮುಂಬಾಗಿಲು ತೆರೆಯುವುದನ್ನೇ ಕಾಯುವ ಸ್ನೋಯಿ, ಬಾಗಿಲು ತೆಗೆಯುವುದೇ ತಡ ಊಟಕ್ಕಾಗಿ ಮ್ಯಿಯ್ಯಾಂಗುಟ್ಟಲು ಶುರುಮಾಡುತ್ತಾನೆ. ಇವನೊಂದಿಗೆ ನಿತ್ಯವೂ ಮಾತಾಡಿಸುವ ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳುವ ಬುದ್ಧಿವಂತನಾಗಿದ್ದಾನೆ. 'ಏ ಸ್ನೋಯಿ,, ಆಚೆನೇ ಇರು, ಒಳಗೆ ಬರಬೇಡ' ಎಂದರೆ ಮನೆಯೊಳಗೆ ಬಾರದೆ, ಮುಂಬಾಗಿಲ ಹೊಸಿಲಿನಲ್ಲೇ ಮುದ್ದಾಗಿ ಕುಳಿತು ನಾನು ಹೊರಗೆ ಬರುವವರೆಗೂ ಕಾಯುತ್ತಾನೆ. 'ಏಯ್ ಸ್ನೋಯಿ, ಹಾಲು ಬಿಸಿ ಮಾಡ್ತಾ ಇದ್ದೀನಿ, ಒಂದ್ನಿಮಿಷ ಅಲ್ಲೇ ಇರು' ಎಂದು ಒಳಗಿನಿಂದ ಕೂಗುತ್ತೇನೆ. ಹೊರಗೆ 'ಹ್ಞೂ..' ಎನ್ನುವಂತೆ ಮಿಯ್ಯಾಂಗುಟ್ಟುತ್ತಾನೆ. ಒಟ್ಟಿನಲ್ಲಿ ನಾನು ಏನೇ ಮಾತಾಡಿದರೂ ಅದಕ್ಕೆ ಪ್ರತಿಯಾಗಿ ಸ್ಪಂದಿಸುತ್ತಾನೆ. ಅವನು ಮಿಯ್ಯಾಂ ಎನ್ನುವುದು ನನಗೆ 'ಅಮ್ಮಾ' ಅಂದಂತೆ ಕೇಳಿಸುತ್ತದೆ. ಕೂಡಲೇ ಕರಗಿಹೋಗಿಬಿಡುತ್ತೇನೆ. ನನ್ನ ಮನೆ ಬಾಗಿಲ ಬಳಿ ಬೇರೆ ಯಾರೇ ನಿಂತಿದ್ದರೂ ಹೆದರಿ ದೂರ ಓಡಿಬಿಡುವ ಸ್ನೋಯಿ ನನ್ನನ್ನು ನೋಡಿದಾಕ್ಷಣ ಮಿಯ್ಯಾಂ.. ಎನ್ನುತ್ತಾ ಹತ್ತಿರ ಬರುತ್ತಾನೆ. ಈ ಮುದ್ದಣ್ಣ ನನ್ನ ಹೃದಯದಾಳಕ್ಕೆ ಇಳಿದುಬಿಟ್ಟಿದ್ದಾನೆ.

ಊಟಕ್ಕಾಗಿ ನನ್ನನ್ನೇ ನಂಬಿ ನಿತ್ಯವೂ ನಮ್ಮನೆಗೆ ಬರುವ ಈ ಪೋರ, ನಾನು ಒಂದೆರಡು ದಿನ ಮನೆಯಲ್ಲಿಲ್ಲದಿದ್ದರೆ ಏನು ಮಾಡುವನೋ, ಯಾರು ಹಾಲು ಹಾಕುತ್ತಾರೋ ಎಂದು ನನ್ನ ಮನಸ್ಸು ಚಡಪಡಿಸುತ್ತದೆ. 'ಬೆಕ್ಕುಗಳಿಗೆ ನಾಯಿಗಳಂತೆ ನಿಯತ್ತಿಲ್ಲ; ಒಂದಲ್ಲ ಒಂದು ದಿನ ನಮ್ಮನ್ನು ತೊರೆದು ಹೋಗುವುದು ಇದ್ದದ್ದೇ' ಎಂದು ಹೇಳುವುದನ್ನು ಕೇಳಿದ್ದೇನೆ. ಅದರಿಂದ ನಾನು ವಿಹ್ವಲಳಾಗುತ್ತೇನೆ. ಅದು ನಿಜವೇ ಆಗಿದ್ದರೂ ನನ್ನ ಮನಸ್ಸು ಮಾತ್ರ ಅದನ್ನು ಒಪ್ಪಲು ಸುತಾರಾಂ ಸಿದ್ಧವಿಲ್ಲ.

**ನಿತ್ಯವು ನಿನ್ನಯ ನೋಡದೆ**
**ತೊರೆದು ಜೀವಿಸಬಹುದೇ ಸ್ನೋಯಿ..**

■

# ಬರ್ತಾವೇನ, ಅ ದಿವಸಾ ತಿರಗಿ?

ಸಿ.ಎ.ವಿಲಾಸ ನಾ ಹುದ್ದಾರ

"ಮೈ ಮ್ಯಾಲೆ ಒಂದ, ಕೋಲ ಮ್ಯಾಲೆ ಒಂದ", ಇದೇನ ಒಗಟಾ ಅಲ್ಲಾ. ಇದು ಸುಮಾರು 1960–70 ರ ದಶಕದೊಳಗ ಇದ್ದ ನಮ್ಮ ಜೀವನದ ಸಾರಾಂಶ. ಅಂದ್ರ ನಮಗ ಹಾಕ್ಕೋಳಲಿಕ್ಕೆ ಅರಿವಿ ಒಂದ ಜೋಡ ಮೈಮ್ಯಾಲೆ ಇದ್ರ, ಇನ್ನೊಂದು ಕೋಲ ಮ್ಯಾಲೆ ಇರ್ತಿತ್ತು. ಕೋಲ ಮ್ಯಾಲೆ ಇದ್ದ ಅರಿವಿ ಒಣಗಿದ ಮ್ಯಾಲೆ ನಮ್ಮ ಅರಿವಿ ಬದಲಾಗೋದು. ಒಮ್ಮೊಮ್ಮೆ ಅರಿವಿ ಒಣಗಲಿಲ್ಲಾ ಅಂದ್ರ ಒಂದ ತಂಬಿಗೀ ಒಳಗ ನಿಗಿ ನಿಗಿ ಕೆಂಡಾ ಹಾಕಿ ಅದರ ಕುತ್ತಿಗೀನ ಪಂಜಾದಿಂದ (ಆಗೀನ ಟೋವೆಲ್) ಹಿಡದು ಹಸೀ ಅರಿವೀ ಮ್ಯಾಲೆ ತಿಕ್ಕೀದ್ರ ಅದು ಒಣಗೋ ಜೊತಿಗೆ ಇಸ್ತ್ರೀನೂ ಆಗತಿತ್ತು. (ಟು ಇನ್ ಒನ್) ಮಳೆಗಾಲದ ಸಾಧಾರಣ ಶನಿವಾರದ ದಿವಸ ಇದು ಸರ್ವೇ ಸಾಮಾನ್ಯ. ಯಾಕಂದ್ರ ಅವತ್ತ ಖಾಕಿ ಚಡ್ಡಿ, ಬಿಳಿ ಅಂಗಿ ಯುನಿಫಾರ್ಮ್ ಇರ್ತಿತ್ತು. ಖಾಕಿ ಚಡ್ಡಿ ಮೊದಲೇಕ ದಪ್ಪ ಇರೋದು, ಅದರಾಗ ಹಸಿ ಆದ್ರಂತೂ ಒಣಗೋದು ಸಾಧ್ಯನ ಇರ್ಲಿಲ್ಲ. ತಂಬಿಗಿ ಒಳಗ ಕೆಂಡಾ ಹಾಕಿ ತಿಕ್ಕೀದ್ರ ಒಣಗತಿತ್ತು ಮತ್ತ ಇಸ್ತ್ರೀನೂ ಆಗಿರತಿತ್ತು. "ಚೌಲದಾಗ ಡೌಲ" ಮಾಡ್ತಿದ್ವಿ. ಇದ ಯಾವದೂ ನಮಗ ತ್ರಾಸ ಅನಸ್ತಿರಲಿಲ್ಲಾ ಮತ್ತ ಜೀವನಾನ ನಾವು ಸಂಪೂರ್ಣವಾಗಿ ಅನುಭವಿಸುತ್ತಿದ್ವಿ.

ತಂಬಿಗೀ ಒಳಗ ಹಾಕಲಿಕ್ಕೆ ಕೆಂಡಾ ಎಲ್ಲಿಂದ ಬರ್ತಿತ್ತಪಾ ಅಂದ್ರ, ಜಳಕಕ್ಕ ನೀರ ಕಾಯಿಸಲಿಕ್ಕೆ ಕಟಿಗಿ ಒಲಿ ಹಚ್ಚತಿದ್ವಿ. ಒಲೀ ಮ್ಯಾಲೆ ದೊಡ್ಡ ಹಂಡೆ, ಕೆಳಗ ಧಗಾ ಧಗಾ ಉರಿಯೋ ಕಟಿಗಿ. ಆದ್ರ ಮಳೆಗಾಲದಾಗ ಭಾಳ ತ್ರಾಸ ಪಡತಿದ್ವಿ. ಕಟಿಗಿ ಹಸೀ ಇರ್ತಿದ್ವು, ಉದಗೊಳವಿಯಿಂದ ಊದಿ ಊದಿ ಎದಿ ಎಲ್ಲಾ ನೋಯಿಸ್ತಿತ್ತು. ಆ ಕಟಿಗಿ ಸುಡಕೋತ ಕೆಂಡ ಆಗ್ತಿತ್ತು. ಅದ ನಮಗ ತಂಬಿಗೀ ಒಳಗ ಹಾಕಲಿಕ್ಕೆ ಸಿಗತಿತ್ತು. ಕಟಿಗೀಗೆ ಉರಿ ಹಚ್ಚಲಿಕ್ಕೆ ಶಗಣಿ ಇಂದ ಮಾಡಿದ್ದ ಕುಳ್ಳು (ಬೆರಣಿ) ಉಪಯೋಗಿಸ್ತಿದ್ವಿ. ಆ ಕುಳ್ಳು ಉರದ ಮ್ಯಾಲೆ ಅದರ ಕರಕಲದಿಂದ ನಮ್ಮ ಹಲ್ಲೀನ ಪುಡಿ ತಯ್ಯಾರ ಆಗ್ತಿತ್ತು. ಅದರೊಳಗ ಪಚ ಕರ್ಪರಾ, ಉಪ್ಪು, ಲವಂಗ ಎಲ್ಲಾ ಇರ್ತಿದ್ವು. ಈಗೀನ ಟೂಥ ಪೇಸ್ಟನ ಜಾಹಿರಾತದೊಳಗ ಇರ್ತದಲಾ, ನಿಮ್ಮ ಪೇಸ್ಟನ್ಯಾಗ ಉಪ್ಪ ಅದ ಏನ ಅಂತ ಕೇಳ್ತಾರ. ನಮ್ಮ ಪೂರ್ವಜರಿಗೆ ಮೊದಲೇಕ ಇದೆಲ್ಲಾ ಗೊತ್ತಿತ್ತು. ನಮಗ ಯಾವದ ಜೀವನದೊಳಗ ಕಡೀಮೀ ಅದ ಅಂತ ಅನಸ್ತಿರಲೇ ಇಲ್ಲಾ.

ನಾವು ಹೊಸಾ ಅರಿವೀ ಮಾರಿ ನೋಡೋದು ದೀಪಾವಳಿಗೆ ಒಮ್ಮೆ. ಗಂಡ ಹುಡುಗ್ರಿಗೆ ಒಂದ ನಮೂನೆ ಡಿಸೈನ್ ಇದ್ದ ಒಂದ ಥಾನ ಅರವಿ, ಅದ ರೀತಿ ಹೆಣ್ಣ ಹುಡಗ್ಯಾರಿಗೆ ಒಂದ ತರಹದ ಅರಿವಿ. ಯಾವನೋ ಒಬ್ಬ ಸೋಮುನೋ, ಅಬ್ದುಲ್ಲಾನೋ ಸಿಂಪಿಗ್ಯಾ (ದರ್ಜಿ) ಇರ್ತಿದ್ದಾ. ಅವನ ಕಡೇನ ಹೊಲಸಬೇಕ. ಯಾಕಂದ್ರ ಅವಂಗ ಕೊಡೋ ಅರಿವೀ ಹೊಲದ ಕೂಲಿ ವರ್ಷತುಂಬ ಅಷ್ಟಷ್ಟ (ಇ.ಎಮ್.ಐ) ಕೊಟ್ಟ ಮುಟ್ಟಸೋದು. ಮಕ್ಕಳಿಗೆ ಅರಿವೀ ಕೊಡಸಿ ರೊಕ್ಕ ಉಳದ್ರ ಅಜ್ಜಾ–ಅಜ್ಜಿ, ಅಪ್ಪಾ–ಅವ್ವಗ ಹೊಸಾ ಅರಿವಿ ಇಲ್ಲಿದ್ರ ಹಳೇ ಅರವೀನ ಗತಿ. ದೀಪಾವಳಿಗೆ ನಾವು ಭಾಳ ಕಾಯ್ಲಿಕ್ಕೆ ವಾಸನೀ ಎಣ್ಣಿ ಮತ್ತ ವಾಸನೀ ಸಾಬೂಣನೂ ಕಾರಣ. ದೀಪಾವಳಿಗೆ ವಾಸನಿ ಎಣ್ಣಿ ಮತ್ತ ಮೈಸೂರ್ ಸ್ಯಾಂಡಲ್ ಸಾಬೂಣ ಬರ್ತಿದ್ವು. ನಮಗ ಸಂಬ್ರಮವೋ ಸಂಭ್ರಮ. ವರ್ಷದ ತುಂಬ ಕಲ್ಲಿನಂತೆ ಇದ್ದ ಲೈಫ್ ಬೋಯ್ ಸಾಬೂಣೇ ನಮ್ಮ ಜಳಕದ ಸಂಗಾತಿ. ಅದು ಎಷ್ಟ ಹಚ್ಕೋಂಡ್ರೂ, ಮನೀ ಮಂದಿ ಎಲ್ಲಾ ಹಚ್ಕೊಂಡ್ರೂ ಸವೀತಾನ

ಇರ್ಲಿಲ್ಲ. ಆದ್ರ ಸಾಬೂಣ, ಎಣ್ಣಿ ಯಾವದೇ ಇರ್ಲಿ ನಮಗೇನ ಫರಕ ಬೀಳ್ತಿರಲಿಲ್ಲಾ. ಇದ್ದದ್ರೊಳಗ ಮಜಾ ಮಾಡಿ ಆನಂದಸ್ತಿದ್ವಿ.

ನಮಗ ಸಿಹಿ ತಿನಬೇಕಂತ ಅನ್ನೀದ್ರ ಯಾವದರೇ ಹಬ್ಬಾ ಬರೋತನ್ಕಾ ಕಾಯಲೇ ಬೇಕು. ಅವಾಗೊಮ್ಮೆ ಇವಾಗೊಮ್ಮೆ ಬೆಲ್ಲದ ಸಜ್ಜಿಗಿ ಸಿಗ್ತಿತ್ತು. ಅವಲಕ್ಕೀನೂ ಅಪರೂಪ. ಮೂರು ಹೊತ್ತು ಭಕ್ರೀ( ಜೋಳದ ರೊಟ್ಟಿ)ನ ಗತಿ ನಮಗ. ಈಗಿನ್ಹಂಗ ಆಗ ಪ್ರತಿ ರಸ್ತೆಗೆ 8–10 ಸಿಹಿ ತಿನಿಸಿನ ಅಂಗಡಿ ಇರ್ತಿರಲಿಲ್ಲಾ. ( ಕಾಂತಿ ಸ್ವೀಟ್ಸ್, ಆಶಾ ಸ್ವೀಟ್ಸ್, ಬಿಗ್ ಮಿಶ್ರಾ ಮುಂ.) ಹಬ್ಬಾ–ಹುಣ್ಣಿಮಿ ಬಂದ್ರ ಸಿಹಿ ತಿನಿಸ ನಮ್ಮ ಬಾಯಿಗೆ ಬೀಳತಿತ್ತು. ನಾವು ಮನಃಪೂರ್ತಿಯಾಗಿ ಅದನ್ನ ಸವೀತಿದ್ವಿ. ಆದ್ರ ಮಜಾ ಅಂದ್ರ, ಸಿಹಿ ಅಪರೂಪಕ್ಕ ಸಿಗತಿದ್ದಕ್ಕ ಅದಕ್ಕ ಭಾಳ ಮಹತ್ವ ಇತ್ತ. ಯಾವದ ವಸ್ತು ಭಾಳ ಸಿಗ್ತಿದ್ರ ಅದು ತನ್ನ ಮಹತ್ವ ಕಳಕೋತದ. ಹೌದಲ್ಲೋ? ಈಗ ಬೇಕಾದಷ್ಟು ಸಿಕ್ರೂ, ಖರೀದಿ ಮಾಡ್ಲಿಕ್ಕೆ ತಾಕತ್ತ ಇದ್ರೂ ತಿನ್ಲಿಕ್ಕೆ ನಸೀಬ ಇರೂದಿಲ್ಲಾ. (ಸಿಹಿಮೂತ್ರ ರೋಗ್, ಕೊಲೆಸ್ಟ್ರಲ್ ಮುಂ.)

ನಮ್ಮ ಆಟ ಎಲ್ಲಾ ಮಣ್ಣಿನಾಗ. ಮಣ್ಣಿನ ಮಕ್ಕಳು ನಾವೆಲ್ಲಾ ಆಗಿದ್ವಿ. ಗೋಲಿ, ಕಬಡ್ಡಿ, ಚಿಣಿ–ಫಣಿ(ಗಿಲ್ಲಿ ದಾಂಡ), ಲಗೋರಿ ಎಲ್ಲಾ ಆಡ್ಕೋತ, ಮೈ,ಅರೀವಿ ಎಲ್ಲಾ ಧೂಳಿನಿಂದ ತುಂಬಿಸ್ಕೋತ, ಮೈ ಮ್ಯಾಲೆ ಖಬರ ಇಲದ್ಹಂಗ ಆಡ್ತಿದ್ವಿ. ಒಮ್ಮೊಮ್ಮೆ ಜಗಳಾನೂ ಆಡ್ತಿದ್ವಿ. ಭಾಳ ಸಿಟ್ಟ ಬಂದ್ರ ಒಬ್ಬರಿಗೊಬ್ಬರು ತೆಕ್ಕಿ–ಮುಕ್ಕಿ ಬಿದ್ದ, ಮಣ್ಣಾಗ ಉಳ್ಳ್ಯಾಡಕೋತ ಬಡದ್ಯಾಡೋದು ನಡೀತಿತ್ತು. ಒಮ್ಮೊಮ್ಮೆ ಸ್ವಲ್ಪ ದಿವಸಾ ಮಾತಾಡೋದು ಬಿಡತಿದ್ವಿ. ಆಮ್ಯಾಲೆ ಮತ್ತ ಎಲ್ಲಾರೂ ಒಂದ ಆಗ್ತಿದ್ವಿ. ದಿಸಕ್ಕ, ಎರಡ ದಿವಸಕ್ಕ ಮನೀತನಕ ಜಗಳಾ ಬರಲೇ ಬೇಕು. ಇಲ್ಲಾಂದ್ರ ಅವಾ ನಾಲಾಯಕ್ಕ. ಮಕ್ಕಳ ಮನೀಗೆ ಹೋಗಿ ಛಾಡಿ ಹೇಳಿದ್ರ ಅವ್ವಂದ್ರು ತಮ್ಮ ಮಕ್ಕಳ ಹೇಳಿದ್ದು ಕೇಳ್ಕೊಂಡ ಜಗಳಾ ಆಡ್ಲಿಕ್ಕೆ ಬಂದು ಒಬ್ಬರಿಗೊಬ್ರು ಹರಟೀ ಹೊಡಕೋತ ನಿಂತ್ರ, ಮಕ್ಕಳು ಮತ್ತ ಒಂದಾಗಿ ಆಟಾ ಆಡ್ಕೋತ ಮಜಾ ಮಾಡ್ತಿದ್ರು. ಮಕ್ಕಳೆಲ್ಲಾ ಕೂಡಿ ಹುಣಸಿ ಹಣ್ಣು ಕುಟ್ಟಿ ಜಿಗಳಿ ಮಾಡೋದು. ಕಾಯಿ ಕುಟ್ಟಿ ಕಾರ್ಕ ಚೆಂಡ ಮಾಡಿ ಕ್ರಿಕೆಟ್ ಆಡೋದು ಎಲ್ಲಾ ಮಾಡ್ಕೋತ ಮಸ್ತ ಮಜಾ ಮಾಡ್ತಿದ್ವಿ. ಕಿಸೆ ಖಾಲೀ ಇದ್ರೂ, ಮನಸ್ಸ ಪೂರ್ತಿ ಜೀವಾನದ ರಸಾನುಭಾವ ಅನುಭವಿಸ್ತಿದ್ವಿ.

ರಾತ್ರಿ ಆತಂದ್ರ ನಮ್ಮ ಮನ್ಯಾಗ ನಮ್ಮ ಬೇಬಿ ಮಾವಸಿ (ಆಕೀ ಹೆಸರು ವಿಜಯಲಕ್ಷ್ಮೀ) ನಮ್ಮನ್ನ ಸುತ್ತಲೂ ಕೂಡಿಸಿಕೊಂಡ ಕೈತುತ್ತು ಹಾಕತಿದ್ಲು. ಆಗ ಯಾರ ಯಾರ ಮನ್ಯಾಗ ಅತ್ಯಾ, ಮಾವಸಿ, ಕಾಕು, ದೊಡ್ಡ ಅಕ್ಕಾ ಇರ್ತಿದ್ರೋ ರಾತ್ರಿ ಈ ದೃಶ್ಯ ಸರ್ವೇ ಸಾಮಾನ್ಯ ಇತ್ತು. ಅದರಾಗ ಬ್ಯಾರೆ ತಂಗಳನ್ನ ಇದ್ರ ಅದಕ್ಕ ಎಣ್ಣಿ,ಗುರೆಳ್ಳ ಪುಡಿ ಚಟ್ನಿ, ಮೇಂಥೇದ ಹಿಟ್ಟು, ಉಪ್ಪು ಹಾಕಿ ಕಲಸಿ ಕೈತುತ್ತ ಹಾಕೀದ್ರ ಸ್ವರ್ಗಕ್ಕ ಮೂರೇ ಗೇಣು ಇದ್ಧಂತಾ ಸುಖಾ. ಕಣ್ಣು ಮುಚ್ಚಿಕೊಂಡ ಅದರ ರುಚಿ ಸವಕೋತ ಆನಂದಿಸ್ತಿದ್ವಿ. ಈಗಿನ್ಹಂಗ ಆಗ ಮೋಬೈಲ್ ಇರ್ಲಿಲ್ಲಾ. ರಾತ್ರಿ ಊಟಾ ಅಂತೂ ಎಲ್ಲರೂ ಕೂಡೆ ಮಾಡ್ತಿದ್ರು. ಈಗ ಎಲ್ಲಾರ ಕೈಯಾಗೂ ಮೋಬೈಲ್, ಮಾತಿಲ್ಲಾ ಕತೀ ಇಲ್ಲಾ, ಲಗು ಲಗು ಊಟಾ ಮಾಡೋದು ತಮ್ಮ ತಮ್ಮ ರೂಮ ಸೇರಕೊಳ್ಳೋದು. ಆಗ ರೂಮ ಇರ್ತಿರಲಿಲ್ಲಾ ಎಲ್ಲಾರು ಪಡಸಾಲ್ಯಾಗ/ ನಡುವಿನಮನ್ಯಾಗ ಸಾಲಕ ಹರಟೀ ಕೊಡ್ಕೋತ ಮಲ್ಕೋತಿದ್ವಿ. ಮೋಬೈಲ್ ಇಲ್ಲದ ಆ ದಿನಗಳು, ಆಹಾ, ಅದ್ಭುತ ಸುಖೀ ದಿನಗಳು. ನಮಗ ತ್ರಾಸ ಅನ್ನೋದ ಗೊತ್ತಿರಲಿಲ್ಲಾ.

ಮನೀಗೆ ಎಷ್ಟ ಸಂಬಂಧಿಕರು, ಎಷ್ಟೊತ್ತಿಗೆ ಬಂದ್ರೂ ಮನೀ ಯಜಮಾನೀ ಬ್ಯಾಸರ ಇಲ್ಲದ, ಹುರುಪಿನಿಂದ ಬಿಸಿ ಬಿಸಿ ಅಡಿಗೀ ಮಾಡಿ ಊಟಕ್ಕ ಹಾಕ್ತಿದ್ರು. ಈಗ

ತಯ್ಯಾರಾದ ತಿಂಡಿ–ತಿನಸು ಸಿಗತಿದ್ರೂ (ಸ್ವಿಗ್ಗಿ, ಝೊಮ್ಯಟೋ) ಯಾರರೇ ಹೇಳದ ಕೇಳದ ಅಚಾನಕ್ಕಾಗಿ ಮನೀಗೆ ಬಂದ್ರ ನಮ್ಮ ಮಾರೀ ಚೆಹರಾನ ಬ್ಯಾರೆ ಆಗ್ತದ. ಆಗ "ಅತಿಥಿ ದೇವೋ ಭವ" ಅನ್ನೋದು ಅಕ್ಷರಶಃ ಖರೇ ಇತ್ತು, ಆದ್ರ ಈಗ "ಅತಿಥಿ ದೆವ್ವೋ ಭವ" ಆಗೇದ. ಹಬ್ಬಾ ಬಂದ್ರ ಹೊಸಾ ಅರಿವೀ ತೊಗೊಂಡ, ಸಿಹಿ ತಿನಸ ತಿಂದ ಆನಂದಿಸ್ತಿದ್ವಿ. ಆದ್ರ ಈಗ ಬೇಕಾದಾಗ ಅರಿವೀ, ಸಿಹಿ ತಿಂಡಿ , ಬೇಕಾದದ್ದೆಲ್ಲಾ ಸಿಗ್ತಿರೋವಾಗ ಯಾವದಕ್ಕೂ ಮಹತ್ವ ಇಲ್ಲಾ. ಎಲ್ಲಾ ಅಸ್ವಾಭಾವಿಕ, ಕೃತಕ, ಕೃತ್ರಿಮ ಅನಸ್ತದ. ಜೀವನಾ ಯಾಂತ್ರಿಕ ಆಗೇದ. ನಮ್ಮ ಕಳೆದ ಸಹಜ, ಸರಳ ಜೀವನಾ ತಿರುಗಿ ಬರೂದಿಲ್ಲಾ. ಹೌದಲ್ಲೋ?. ಈ ಸಂದರ್ಭದೊಳಗ ವಾಟ್ಸಾಪ್‌ನಲ್ಲಿ ಬಂದ ಒಂದ ಪದ್ಯ ನೆನಪ ಆಗ್ತದ:

**ಓದತಿದ್ವಿ ಕರೆಂಟ್ ಇಲ್ದೆ,**
**ನಡೀತಿದ್ವಿ ಚಪ್ಲಿಯಿಲ್ದೆ,**
**ಕುಣಿತಿದ್ವಿ ತಾಳವಿಲ್ದೆ,**
**ಹಾಡುತಿದ್ವಿ ರಾಗವಿಲ್ದೆ,**
**ಪಾಸಾಗತಿದ್ವಿ ಟ್ಯೂಷನ್ ಇಲ್ದೆ,**
**ಖುಷಿಯಾಗಿದ್ವಿ ಹೇಗೋ ಕಾಸಿಲ್ದೆ !!**
**ಮಲಗ್ತಿದ್ವಿ ಮಂಚವಿಲ್ದೆ,**
**ಬೆಳದ್ಬಿಟ್ವಿ ಹಾರ್ಲಿಕ್ಸ ಇಲ್ದೆ,**
**ಎದ್ದೇಳತಿದ್ವಿ ಆಲಾರಾಂಯಿಲ್ದೆ,**
**ತೊಡತಿದ್ವಿ ಬಟ್ಟೆ ಇಸ್ತ್ರಿ ಇಲ್ದೆ,**
**ದಡಸೇರಿದ್ವಿ ಯಾರ ಮುಲಾಜಿಲ್ದೆ,**
**ತುಂಬಾ ಖುಷಿಯಾಗಿದ್ವಿ ಹೇಗೋ ಕಾಸಿಲ್ದೆ !!.**

■

**ಚುಟುಕು ಹಾಸ್ಯ ಕಥಾ ಸ್ಪರ್ಧೆ**



**ನಿಯಮಗಳು :**

**1. ಕಥೆ 60 ಪದಗಳನ್ನು ಮೀರಿರಬಾರದು.**
**2. ಜೋಕುಗಳನ್ನು ಬಿಗ್ಗಿಸಿ ಬಳಸುವಂತಿಲ್ಲ.**
**3. ಕಥೆ ಸ್ವಂತ ರಚನೆಯಾಗಿರಬೇಕು.**
**4. ಉತ್ತಮ ಕಥೆಗಳಿಗೆ ಮೂರು ಬಹುಮಾನಗಳು.**

**ಮೊದಲ ಬಹುಮಾನ : ಟ್ರಂಪ್‌ನೊಂದಿಗೆ ಭೇಟಿ**
**ಎರಡನೆಯ ಬಹುಮಾನ : ಫೇಲ್ಡ್ ಮಾರ್ಷಲ್ ಮುನೀರನೊಂದಿಗೆ ಭೇಟಿ**
**ಮೂರನೆಯ ಬಹುಮಾನ : ಬೆಂಗಳೂರಿನ ರಸ್ತೆಗಳಲ್ಲಿ ದೋಣಿ ವಿಹಾರ**

# ವಾಕ್ ಸ್ವಾತಂತ್ರ್ಯ

ಕೆ.ಎಸ್.ಸೋಮೇಶ್ವರ

ಇದೇನಿದು ನಮಗೆ ವಾಕ್ ಸ್ವಾತಂತ್ರವಿಲ್ಲವೇ ! ಏಕಿಲ್ಲ ಸಾಕಷ್ಟಿದೆ.. ಮೊದಲೆಲ್ಲಾ ಮಾತೇ ಮುತ್ತು ಎನ್ನುವ ಕಾಲದಲ್ಲೂ ಮಾತುಗಳ ಮಹಾಪೂರವೇ ಹರಿದು ಬರುತ್ತಿತ್ತು. ಈಗಂತೂ ಅನೇಕಾನೇಕ ಸಂವಹನ ಮಾಧ್ಯಮಗಳ ಮೂಲಕ ಇದು ಯಾವುದೇ ಅಡೆ ತಡೆಗಳಿಲ್ಲದೆ ಸ್ವತಂತ್ರವಾಗಿದೆ. ಹಲವು ವೇದಿಕೆಗಳಲ್ಲಿ ಇದೊಂದು ವಿಜೃಂಭಿಸುವ ಕಲೆಯಾಗಿದೆ. ಕೆಲವೊಮ್ಮೆ ಆಡಿದ ಮಾತನ್ನು ಹೇಳಿಯೇ ಇಲ್ಲ ಎಂದು ಆಣೆ ಪ್ರಮಾಣ ಮಾಡುವವರೂ ಇದ್ದಾರೆ. ಅದೇ ರೀತಿ, ಆಡಿದ ಮಾತಿನಿಂದ ನೋವಾಗಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುವ ಆಫರ್ ಕೂಡ ಇರುತ್ತದೆ. ಅದೇನು ಕಿರಾಣಿ ಅಂಗಡಿಯಲ್ಲಿ ಕಟ್ಟಿ ಕೊಟ್ಟ ಪೊಟ್ಟಣವೇ ಬೇಡಾದಾಗ ಹಿಂದಿರುಗಿಸುವುದು. "ಮನಸುಗಳ ಮಾತು ಮಧು" ಅಂತಾರೆ ಕವಿಗಳು. ಅದೇನೋ ನಂಗೊತ್ತಿಲ್ಲಪ್ಪ

ಈಗ ನಾನು ಹೇಳ ಹೊರಟಿರುವುದು ಈ ವಾಕ್ ಸ್ವಾತಂತ್ರ್ಯ ಅಲ್ಲವೇ ಇಲ್ಲ. ಅದರ ಗೊಡವೆಯೇ ಬೇಡ. ಇಲ್ಲಿ ನನಗೆ ವಾಕ್ ಎಂದರೆ ನಡಿಗೆ. ಇದರಲ್ಲೇನು ವಿಶೇಷ ? ನಮಗೆ ಕಾಲಿರುವುದೇ ನಡೆಯಲು ತಾನೇ. ನಮ್ಮಂತೆಯೇ ಪಕ್ಷಿಗಳಿಗೂ ಎರಡೇ ಕಾಲಿರುವುದು. ಅವೂ ಹಾರಾಡಿ ರೆಕ್ಕೆಗಳಿಗೆ ಸುಸ್ತಾದಾಗ ನೆಲದ ಮೇಲೆ ಲ್ಯಾಂಡ್ ಆಗಿ ನಡೆಯಲೇ ಬೇಕು. ಇನ್ನು ಇತರೆ ಪ್ರಾಣಿಗಳನ್ನು ನೋಡಿ! ಅವಕ್ಕೆ ನಾಲ್ಕು ಕಾಲು. ನಮ್ಮ ಕಾರುಗಳಿದ್ದ ಹಾಗೆ. ಅವುಗಳೂ ನಡೆದಾಡಿ ಸುಸ್ತಾದಾಗ ನಮ್ಮಂತೆಯೇ ಕಾಲು ಮಡಿಚಿ ಪವಡಿಸುವೆ ಪರಮಾತ್ಮ ಎಂದು ಆಕಳಿಸಿ ತೂಕಡಿಸುತ್ತವೆ. ಕೆಲವು ಪ್ರಾಣಿಗಳಿಗೆ ಆ ಸೌ ಭಾಗ್ಯವಿಲ್ಲ. ಅವು ತಮ್ಮ ಕಾಲುಗಳ ಮೇಲೆ ತಾವೇ ನಿಂತು ನಿದ್ರೆಗೆ ತೆರಳಬೇಕಾಗುತ್ತದೆ.. ಮೊದಲೆಲ್ಲಾ ಸರ್ಕಸ್ ಎಂಬ ಪ್ರಪಂಚದಲ್ಲಿ ಈ ನಾಲ್ಕು ಕಾಲಿನ ಪ್ರಾಣಿಗಳಿಗೆ ಎರಡು ಕಾಲುಗಳ ಸರ್ಕಸ್ ಮಾಡಿಸುತ್ತಿದ್ದರು. ಅದೇನೋ ಪ್ರಾಣಿ ದಯಾ ಸಂಘದ ದಯೆಯಿಂದ ಅವಕ್ಕೆ ಆ ಭಾಗ್ಯ ಇಲ್ಲದಾಗಿದೆ. ಅದಿಲ್ಲದಿದ್ದರೆ ಏನಂತೆ, ನಮ್ಮ ಟಿವಿ ರಿಯಾಲಿಟಿ ಕಾರ್ಯಕ್ರಮಗಳಲ್ಲಿನ ಡಾನ್ಸ್ ಎಂಬ ಪ್ರಹಸನ ನೋಡಿ. ಒಂಟಿ ಕಾಲಲ್ಲೇ ಕುಣಿಸಿ ಬಿಡುತ್ತಾರೆ.

ನಡೆವವರ ನಡೆ ನುಡಿ ಆಗಾಗ್ಗೆ ಕುಂಟುತ್ತ, ಎಡವುತ್ತಾ ಮುಗ್ಗರಿಸುವ ಪರಿಯಲ್ಲೇ ನಡೆಯ ಬೇಕಿದೆ ಅದು ನಡಿಯುತ್ತಿದೆ ಕೂಡ. ಮಕ್ಕಳು ಅಂಬೆಗಾಲಿಡುತ್ತಾ ಮುಂದುವರಿದು ತಮ್ಮ ಕಾಲಿನ ಮೇಲೆ ನಿಲ್ಲುವ ಪ್ರಯತ್ನ ಮಾಡಿ ತೊದಲು ಮಾತಲ್ಲೇ ಪುಟ್ಟ ಪುಟ್ಟ ತಪ್ಪು ಹೆಜ್ಜೆ ಇಟ್ಟು ಆರಂಭಿಸುತ್ತೆ ತಮ್ಮ ವಾಕ್ ಪ್ರಾವೀಣ್ಯತೆ. ಆಮೇಲೆ ಮೂರು ಚಕ್ರದ ಗಾಲಿ ಹಿಡಿದು ನಡಿಗೆಯ ರಾಜನಂತೆ ವಿಜೃಂಭಿಸುತ್ತಾರೆ.

ಈಗ ಬನ್ನಿ ಬೈಪೆಡ್ ಅಂದರೆ ಈ ಮಾನವರುಗಳ ನಡೆದಾಟ. ಅದೇನೋ ಶಿಲಾಯುಗವೋ ಏನೋ, ಆಗೆಲ್ಲ ರಸ್ತೆಗಳೇನೂ ಇರಲಿಲ್ಲ ಅದರ ಗುಣ ಮಟ್ಟ ಹೇಳುವವರು ಕೇಳುವವರು ಯಾರೂ ಇರಲಿಲ್ಲ. ರಸ್ತೆಗಳಿಗೆ ಟಾರು ಮೆತ್ತುವುದೋ ಅಥವಾ ವೈಟ್ ಟಾಪಿಂಗ್ ಅಂತ ರಸ್ತೆಗಳನ್ನೇ ಟಾಪ್ ಲೆಸ್ ಮಾಡುವ ಯುಗವೂ ಅದಾಗಿರಲಿಲ್ಲ. ಇತ್ತೀಚೆಗೆ ಬೆಂಗಳೂರಿನ ಟಿ.ಸಿ.ಎಮ್ ರಾಯನ್ ರಸ್ತೆಯಲ್ಲಿ ನಾನು ಹತ್ತಿದ ಆಟೋ ಹರಿದಾಡುತ್ತ, ಕೆಲವೊಮ್ಮೆ ಎಗರುತ್ತಾ ಮುಂದುವರಿಯಿತು. ಕಾರಣ ಅದರ ಒಂದು ಭಾಗವನ್ನು ಈ ರೀತಿ ಬಿಳಿ ಟಾಪ್ ಮಾಡಿ ಅದಿನ್ನೂ ವಾಹನಗಳ ಅಪ್ಪುಗೆಗೆ ಬಂದಿಲ್ಲ. ಅದರ ಉಳಿದರ್ಧ ಭಾಗ ವಾಹನಗಳಿಗೆ ಧಿಮಿ ಕಿಟ ಧಿಮ್. ಆ ಯುಗದಲ್ಲಿ ಕಾಡು

ಮೇಡುಗಳಲ್ಲಿ ಗೆಡ್ಡೆ ಗೆಣಸುಗಳ ಭಾಗ್ಯ ಅರಸುತ್ತಾ ನಡೆದೇ ಜೀವಿಸಿದ್ದರು ಎನ್ನುತ್ತದೆ. ಇತಿಹಾಸ. ಇನ್ನು ಸ್ವಲ್ಪ ಹಿಂದಕ್ಕೆ ಹೋಗಿ ಪುರಾಣ ಕಥೆಗಳ ನೋಡಿ.. ಅಲ್ಲಿ ಜನ ಸಾಮಾನ್ಯರಿಗೆ ಮಾತ್ರ ನಡಿಗೆ ಭಾಗ್ಯ ಉಳಿದಂತೆ ಕಂಡವರು ರಾಜ ಮಹಾರಾಜರುಗಳು ಅವರ ಅಂತಃಪುರದ ರಾಣಿ ಮಹಾರಾಣಿಯರು. ಅವರುಗಳಿಗೆ ರಥ ರೈಡಿಂಗ್. ಸೆಲ್ಫ್ ಡ್ರಿವನ್ ಅಲ್ಲ ಅದಕ್ಕೊಬ್ಬ ಸಾರಥಿ/ಮಾವುತ. ನಾಲ್ಕು ಜನರು ಹೊರುವ ಮೇನಾಗಳಲ್ಲಿ ರಾಣಿವಾಸದವರ ಸವಾರಿ ಇನ್ನು ಶ್ರೀ ರಾಮಚಂದ್ರ ತನ್ನ ಪತ್ನಿ, ಭ್ರಾತೃ ಸಮೇತ ಕಾಡಿಗೆ ಹೋದದ್ದು ಕಾಲ್ನಡಿಗೆಯಲ್ಲೇ ಅಲ್ಲವೇ. ಅದೇ ರೀತಿ, ಪಂಚ ಪಾಂಡವರು ಪಾಂಚಾಲಿ ಸಮೇತ ಕಾಡು ಮೇಡುಗಳ ಅಲೆದದ್ದು ಅವರ ಕಾಲುಗಳಲ್ಲೇ. ಮೇಲೆ ಹೇಳಿದ ಫ್ರಿಫರ್ಡ್ ರೈಡಿಂಗ್ ಈಗಲೂ ಇದೆ. ರಾಜಾಧಿರಾಜರುಗಳಿಗೆಲ್ಲಾ ನಡಿಗೆ ಕಡಿಮಯೇ. ಈಗ ಅವರೆಲ್ಲಾ ಕಿರೀಟ ಕಳಚಿರುವದರಿಂದ ಅದು ನಮ್ಮ ಅಚ್ಚು ಮೆಚ್ಚಿನ ಜನಪ್ರತಿನಿಧಿಗಳಿಗೂ ಅಪ್ಪೈ ಆಗುತ್ತಿದೆ. ಅದರಲ್ಲಿ ನಮ್ ಸೈಕಲ್ ಶಾಮಣ್ಣ ನವರು ಸೇರುವುದಿಲ್ಲ. ಅವರು ಜನತಾ ಜನಾರ್ಧನನಾಗಿ ಬಾಳಿದವರು. ಉಳಿದಂತೆ ನಾವೆಲ್ಲ ಬಡ ಬೋರೇಗೌಡ ಎನ್ನುವಂತೆ ಕಾಲಾಯ ವಾಹನ ವೈ ನಮಃ. ಅದೊಂದು ಚಾಕೊಲೆಟ್ ನ ಜಾಹೀರಾತು ಬರುತ್ತದೆ. ಅದರಲ್ಲಿ ಮದುವೆ ಮಂಟಪಕ್ಕೆ ಹುಡುಗಿಯನ್ನು ಮೇನಾದಲ್ಲಿ ಕರೆ ತರಲು ಹೊತ್ತ ನಾಲ್ವರು ರೂಟ್ ಬದಲಿಸಿ ಒಂದು ಚಾಕೊಲೆಟ್ ಮಳಿಗೆಗೆ ನುಗ್ಗಿ ಎಲ್ಲರನ್ನೂ ಕಂಗಾಲಾಗಿಸುತ್ತಾರೆ. ಹಸಿವಾದಾಗ ನಮಗೆ ಇದಷ್ಟೇ ಕಾಣುವುದು ಎಂಬ ಸಮಜಾಯಿಸಿ.



ಇನ್ನು ನಮ್ಮಗಳ ನಿಜವಾದ ನಡಿಗೆಗೆ ಬರೋಣ. ನಮ್ಮ ತಲೆಮಾರು ಅಂದರೆ ಆರು ದಶಕಗಳ ಹಿಂದಿನವರು ಮತ್ತು ಅದಕ್ಕೂ ಹಿಂದಿನವರಿಗೆ ಕಾಲೇ ಕಂಭ. ಯಾವುದೇ ಮೇಳವಾಗಲಿ, ಜಾತ್ರೆಯಾಗಲಿ ನಡಿಗೆಯೇ ಭೂಷಣವಾಗಿತ್ತು. ಆಗೆಲ್ಲ ಸೈಕಲ್ ಸವಾರಿ ಅಂದರೆ ಸಾಮಾನ್ಯ ಜನತೆ. ಅದೂ ತೀರ ಅವಶ್ಯಕತೆ ಇದ್ದಾಗ ಮಾತ್ರ. ದ್ವಿಚಕ್ರ, ಮೂಗಿಲಿ, ನಾಲ್ಕು ಚಕ್ರ ಎಲ್ಲ ದೊಡ್ಡವರಿಗೆ ಮಾತ್ರ ಮೀಸಲು. ಆಗಿನ ನಡಿಗೆಯಲ್ಲಿ ಇರೋ ಸುಖ ಈಗ ಗೊತ್ತೇ ಇಲ್ಲ ! ನಮಗಳಿಗಂತೂ ಸ್ಕೂಲು, ಕಾಲೇಜು ಏನೇ ಇರಲಿ ವಾಕ್ ಮ್ಯಾನ್ /ವುಮೆನ್ ನಮಗೆ ಪ್ರಕೃತಿದತ್ತವಾದ ಊರು ಗೋಲಾಗಿತ್ತು. ಡೆಸ್ಟಿನಿ ಎಲ್ಲೇ ಇರಲಿ ಮೊದಲ ಆಪ್ಷನ್ ವಾಕ್-ಇಂಗ್. ಸಂಜೆಯ ವೇಳೆ ಜಯನಗರ ನಾಲ್ಕನೇ ಬ್ಲಾಕ್‌ನಿಂದ ಒಳಗೆ ಬರುವಾಗ ಅಲ್ಲೊಂದು ದೊಡ್ಡ ಕೊಳದ ಏರಿಯನ್ನು ಹಾದು ಬರುವಾಗ ಅಲ್ಲಿನ ಕಪ್ಪೆಗಳ ವಟಗುಟ್ಟುವಿಕೆ ಈಗಲೂ ಕಿವಿಗೆ ಮಾರ್ದನಿಸುತ್ತದೆ. ಇದೆಲ್ಲ ನಡಿಗೆ ಭಾಗ್ಯದಿಂದಲೇ ಹೊರತು ಬೇರೆ ರೀತಿಯ ಚಲನೆಯಿಂದಲ್ಲ ನಮ್ಮ ಜಯನಗರದಿಂದ ಬಸವನಗುಡಿ ನಂತರ ಜಯನಗರದ ಇನ್ನೊಂದು ಮೂಲೆಯ

ಕಾಲೇಜು ಎಲ್ಲ ನಡಿಗೆಯಲ್ಲೇ ಸರಿಯಾದ ಸಮಯಕ್ಕೆ ಗುರಿ ಮುಟ್ಟಿ ಸಾಧಿಸಿದ್ದೀವಿ. ಸಂಜೆ ವೇಳೆ ಸಮಾನ ವಯಸ್ಕರ ಸಣ್ಣ ಗುಂಪುಗಳು ನಡಿಗೆಯಲ್ಲೇ ಇಡೀ ಬಡಾವಣೆಯನ್ನು ಒಂದಲ್ಲ ಲೆಕ್ಕವಿಲ್ಲದಷ್ಟು ಬಾರಿ ಸುತ್ತಿ ದಿಗ್ವಿಜಯ ಸಾಧಿಸಿದ ಕೋಡು ನಮದಾಗಿದೆ. ಜಯನಗರದ ಏಳನೆ ಬ್ಲಾಕಿನ ಮಾವಿನ ತೋಪು (ಈಗ ಅದು ಕಾಲೇಜು ಆಗಿದೆ) ಬನಶಂಕರಿ ದೇವಸ್ಥಾನ. ಈ ಕಡೆ ಬಸವಣ್ಣನ ಗುಡಿ ನರಹರಿರಾಯನ ಗುಡ್ಡ,ಲಾಲ್ ಬಾಗ್, ಕಬ್ಬನ್ ಪಾರ್ಕ್ ಯಾವುದೇ ಗುರಿ ಇರಲಿ ವಾಕ್ ಮಾಡಿ ಸಾಧನೆ ಮಾಡಿದ್ದೇವೆ. ಇದರಲ್ಲಿ ಕೆಲವೊಂದು ವಿಶೇಷತೆಗಳೂ ಇವೆ. ಸುಮಾರು ಎಪ್ಪತ್ತರ ದಶಕದವರೆಗೂ ಜಯನಗರದ ರಾಗಿ ಗುಡ್ಡ ದೊಡ್ಡದೊಂದು ಕರಿಬಣ್ಣದ ಎತ್ತರದ ಕಲ್ಲು ರಾಗಿ ಬಂಡೆಯಾಗಿದ್ದಿತು. ಆಗೆಲ್ಲ ನಾವುಗಳು ಅಲ್ಲಿಗೆ ನಡಿಗೆಯಲ್ಲೇ ಬಂದು ಕಡಿಮೆ ಏರುಗತಿ ಇರುವ ಸ್ಥಳದಿಂದ ಬೆಟ್ಟವನೇರಿ ಹಿಮಾಲಯ ಏರಿದಷ್ಟೇ ಹಮ್ಮಿನಿಂದ ಅಲ್ಲಿ ಸುತ್ತಲಿನ ಹಸಿರಿನ ವಿಹಂಗಮ ನೋಟ ಅನುಭವಿಸುತ್ತಿದ್ದೆವು (ಈಗ ಆ ಹಸಿರೆಲ್ಲಾ ಕಾಂಕ್ರೀಟ್ ಸಿರಿಗಳಾಗಿವೆ). ಅದಾದ ನಂತರವೇ, ರಾಮ ಭಕ್ತ ಹನುಮ ನನಗೆ ಇದೇ ಪ್ರಶಸ್ತ ಸ್ಥಳ ಎಂದು ಅಲ್ಲಿ ಲ್ಯಾಂಡ್ ಆಗಿ ಸರ್ವೇ ಜನೋ ಸುಖಿನೋ ಭವಂತು ಎಂದು ಹರಸುತ್ತಿದ್ದಾನೆ. ನಂತರ ನಾನು ಮತ್ತು ನನ್ನಿಬ್ಬರು ಸ್ನೇಹಿತರು ಬೆಂಗಳೂರಿನಲ್ಲೇ ಒಂದು ಲಾಂಗ್ ವಾಕ್ ಮಾಡಿದ್ದೇವೆ. ಆಗ ಪವಾಡ ಪುರುಷರು ಮತ್ತು ವಾಸ್ತವತೆಯನ್ನು ಹೇಳುವವರ ವಾಗ್ವಾದ ಏರು ಗತಿಯಲ್ಲಿದ್ದ ಸಮಯ. ನಮ್ಮ ಪಯಣ ಜಯನಗರದಿಂದ ಸುಮಾರು 25 ಕಿಲೋ ಮೀಟರ್ ದೂರವಿರುವ ವೈಟ್ ಫೀಲ್ಡ್ ನಲ್ಲಿನ ಸಾಯಿಬಾಬಾರವರ ಆಶ್ರಮಕ್ಕೆ ವಾಕ್ ಮಾಡೇ ಹೊರಟೆವು. ಅಲ್ಲಿ ಬಿಡಿ, ವಿವಿಧ ಕಾರಣಗಳಿಂದ ಆಶ್ರಮ ಲಾಕ್ ಆಗಿದ್ದಿತು. ಸರಿ ಮತ್ತೆ ರಿಟರ್ನ್ ನಮದೇ ಕಾಲು ನಮದೇ ನಡಿಗೆ. ಈ ತರಹ ನಡಿಗೆಗಳು ಹಲವು ಬಾರಿ ನಗರದಲ್ಲಿನ ಕೆಲವು ಅನಿರೀಕ್ಷಿತ ಘಟನೆಗಳಿಂದಲೂ ಆಗಿದ್ದಿದೆ. ತೊಂಭತ್ತರ ದಶಕದ ಏರಿದ ಕಾವೇರಿ ಗಲಾಟೆ ನಮಗೆ ನಮಗಳ ಕಛೇರಿಯಿಂದ ಏಳೆಂಟು ಕಿಲೋ ಮಿಟರ್ ನಡಿಗೆಯೇ ಮನೆಗೆ ಹಾದಿ. ಇನ್ನು ನಮ್ಮ ವರನಟ ಡಾ. ರಾಜಕುಮಾರ್ ರವರು ಕಾಡುಗಳ್ಳನಿಂದ ಅಪಹರಿಸಲ್ಪಟ್ಟ ಮರುದಿನ ಮೇಖ್ರಿ ವೃತ್ತದ ಬಳಿಯ ಕಛೇರಿಯಿಂದ ಸುಮಾರು 13 ಕಿಲೋ ಮೀಟರ್ ಗಳು ವಾಕ್ ಮಾಡಿಯೇ ಮನೆ ಸೇರಿದ್ದೇವೆ. ಇದು ಅಲ್ಲಿಂ ದ ಬೇರೆ ಬೇರೆ ಪ್ರದೇಶಗಳಿಗೆ ಹೋಗುವವರಿಗೂ ಅನುಭವ ವೇದ್ಯ. ಹೀಗೆ ಕಾಲ್ನಡಿಗೆಯಲ್ಲೇ ಸಾಕಷ್ಟು ನಗರ ಪ್ರದಕ್ಷಿಣೆಗಳನ್ನು ಮಾಡಿರುವ ಅನುಭವ ನನ್ನದು. ಅದೇ ರೀತಿಯಲ್ಲಿ ಇನ್ನೂ ಹಲವಾರು ಮಂದಿ ಇಂತಹ ವಾಕ್ ಸ್ವಾತಂತ್ರ್ಯದ ಅನುಭವದ ಪತಾಕೆ ಹಾರಿಸಿರುತ್ತಾರೆ.

ಇನ್ನು ಕೆಲವು ವಿಚಾರಗಳು ನಡಿಗೆಯಿಂದಲೇ ಸಾಧ್ಯ ಎಂಬುದನ್ನು ಅನೇಕಾನೇಕ ಮಹನೀಯರುಗಳು ತೋರಿಸಿದ್ದಾರೆ. ಆಚಾರ್ಯ ವಿನೋಬ ಭಾವೆಯವರ ಭೂದಾನ ಚಳುವಳಿಗೆ ನಡಿಗೆಯಲ್ಲೇ ದೇಶ ದರ್ಶನ, ಸುಂದರಲಾಲ್ ಬಹುಗುಣರವರದೂ ಇಂತಹುದೇ ವಿಶಿಷ್ಟತೆಗೆ ಮಾದರಿ. ಈಗಲೂ ಅನೇಕ ಸಾಮಾಜಿಕ ಕಾರಣಗಳ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಲು ವಾಕಥಾನ್ ಅಂದರೆ ನಡಿಗೆಯ ಜಾಥಾ ಮಾಡುತ್ತಾರೆ. ನಮ್ಮ ಒಲಿಂಪಿಕ್ಸ್ ಕ್ರೀಡೆಯಲ್ಲಂತೂ ಸುಮಾರು 20 ಕಿಲೋ ಮೀಟರುಗಳ ವಾಕಿಂಗ್ ಮ್ಯಾರಥಾನ್ ಇದ್ದೇ ಇರುತ್ತದೆ. ನಿಜವಾಗಿಯೂ ನಡಿಗೆಯ ಸ್ವರೂಪವನ್ನು ಆ ಕ್ರೀಡೆಯಲ್ಲಿ ಕಾಣಬಹುದಾಗಿದೆ. ಅದರಲ್ಲಿ ಭಾಗವಹಿಸುವವರುಗಳು ಪೂರಾ ನಡಿಗೆಯನ್ನು ಅಂಗಾಲು ಪೂರ ನೆಲಕ್ಕೆ ಊರಿಯೇ ನಡೆಯಬೇಕು. ಈ ನಡಿಗೆಯಲ್ಲಿ ಕೆಲ ವಿಭಿನ್ನ ಸಾಹಸ ಮಾಡಿದವರೂ ಇದ್ದಾರೆ. ಅವರಲ್ಲೊಬ್ಬರು ನೀರ ಮೇಲೆ ನಡೆಯುತ್ತೇನೆಂದು ಪ್ರಚುರ

ಮಾಡಿ ಅಷ್ಟೇನೂ ಯಶಸ್ಸು ಕಾಣದ ಕಥೆಯೂ ಈ ನಡಿಗೆಗೆ ಸೇರುತ್ತದೆ.ಇವರ ವಿಶೇಷ ಸಂಗತಿಯೆಂದರೆ ಈತ ತಮಗೆ ಅತೀಂದ್ರಿಯ ಶಕ್ತಿ ಇರುವ ಭ್ರಮಾಲೋಕದಲ್ಲಿದ್ದು ನಾನು ನೀರ ಮೇಲೆಯೇ ನಡೆಯುವೆ ಎಂದು ಪ್ರಚಾರ ಮಾಡಿಕೊಳ್ಳುತ್ತಿದ್ದರು. ಅದೇನೋ ಪಾಪ ಅವರು ನೀರಿನಲ್ಲಿ ದುಪುಕ್ ಎಂದು ಮುಳುಗುತ್ತಿದ್ದುದೇ ಹೆಚ್ಚಿನ ವರದಿ. ಅದು ಹೊಡೆತದ ಸುದ್ದಿ ಅಂದರೆ ಈಗಿನ ಕಾಲದ ಬ್ರೇಕಿಂಗ್ ನ್ಯೂಸ್ ಆಗಿರುತ್ತಿತ್ತು. ಇನ್ನು ನಗರಗಳ ಯಾವುದೇ ಮೂಲೆಗೆ ಹೋದರೂ ನಡಿಗರ ಸಂಘಗಳೇ ಇರುತ್ತದೆ. ನಮ್ಮಲ್ಲಿ ಡಾ.ಎಚ್.ಎನ್ ರವರು ಜನಪ್ರಿಯಗೊಳಿಸಿದ ಲಾಲ್ ಬಾಗಿನ ನಡಿಗರ ಕ್ಲಬ್ ಈಗಲೂ ಹುಮ್ಮಸ್ಸಿನಿಂದ ವಾಕಿಂಗ್ ಮಾಡುತ್ತಿದೆ.

ಹೀಗೆ ವಾಕ್ ಸ್ವಾತಂತ್ರ್ಯ ನಮಗೆ ಬೇಕಾದನ್ನು ಬೇಕಾದಾಗ ಮಾಡ ಬಹುದಾದ ಸ್ವಾತಂತ್ರ್ಯ. ನಮ್ಮ ದೊಡ್ಡ ನಗರಗಳಲ್ಲಿ ಸಂದಿಗೊಂದಿಗಳಲ್ಲಿ ಓಡಾಡುವಾಗ ಕಾಡು ಮೇಡು ಬೆಟ್ಟ ಪ್ರಪಾತ ಗಳನ್ನು ಏರಿಳಿದಷ್ಟೇ ನಡಿಗೆಯ ಅನುಭವ ಆಗಿರುತ್ತದೆ. ಇನ್ನು ನಡಿಗೆಯವರಿಗೆ ರಸ್ತೆಗಳಲ್ಲಿನ ಏಕ ಮುಖ ಸಂಚಾರದ ಅಡ್ಡಿ ಇರುವುದಿಲ್ಲ. ಯಾವ ಮುಖದ ದಾರಿಯಾದರೂ ನೀವು ತಲೆಯೆತ್ತಿ ನಡೆಯಬಹುದಾಗಿದೆ. ಆದರೆ, ಅಲ್ಲಲ್ಲಿ ಮುತ್ತಿಕ್ಕುವ ವಾಹನ ಮತ್ತು ಜನ ಜಂಗುಳಿಯನ್ನು ನಿಭಾಯಿಸಿಕೊಂಡರೆ ನಡೆವವನೇ ಜಾಣ. ಅಂತಹ ವಾಕ್ ಸ್ವಾತಂತ್ರ್ಯ ಎಲ್ಲೂ ಭೂಮಿಯ ಯಾವ ಭಾಗದಲ್ಲಾದರೂ ಅನುಭವಿಸಬಹುದಾಗಿದೆ. ಇದಕ್ಕೊಂದು ದಿನಾಚರಣೆ ಆಚರಿಸಬೇಕಲ್ಲವೇ. ಅದೇಕೋ ಅದಾರಿಗೂ ಇದು ಹೊಳೆದಂತಿಲ್ಲ. ಇಲ್ಲದಿದ್ದಲ್ಲಿ ಅದೊಂದು ಸರಕಾರಿ ಕೃಪಾಪೋಷಿತವಾಗಿ ಉದ್ಘಾಟನೆ ಅದಕ್ಕೆ ಕೆಂಪು ಟೇಪು, ಕತ್ತರಿ ಪ್ರಯೋಗ ಎಲ್ಲ ಆಗಬೇಕು. ಈಗಂತೂ ನಡಿಗೆ ಎಂದರೆ ಅದೊಂದು ದೈವಿಕ ಕೆಲಸದಂತೆ ನಡೆಯುತ್ತದೆ. ನಿಗದಿತ ಸಮಯದಲ್ಲಿ ಮಾಡುವ ವಾಕಿಂಗ್. ಅದನ್ನು ದೇಹವನ್ನು ಸುಸ್ಥಿತಿಯಲ್ಲಿ ಇರಿಸಲು ಪ್ರಯತ್ನ ಎನ್ನುತ್ತಾರೆ. ವೈದ್ಯರುಗಳ ಸಲಹೆಯೂ ಅದೇ ಆಗಿರುತ್ತದೆ. ಆದರೆ, ನಾವೆಲ್ಲ ಅದ್ಯಾವ ಸಲಹೆಯೂ ಇಲ್ಲದೇ ನಡೆದು ಬಂದ ದಾರಿಯಲ್ಲಿ ಸಿಕ್ಕ ವಾಕ್ ಸ್ವಾತಂತ್ರ್ಯ ಇಲ್ಲಿ ಇದೆಯೇ ? ಇದೇ ರೀತಿ ಸರಕಾರಗಳ ಕೆಲ ಕಾರ್ಯಕ್ರಮಗಳ ವಿರುದ್ಧ ನಡೆಯುವ ಚಳುವಳಿಗಳು. ಇದೂ ಸಹ ನಡಿಗೆಯಲ್ಲೇ 'ಬೇಕೆ ಬೇಕು ನ್ಯಾಯ ಬೇಕು' ಎಂಬ ಉದ್ಗಾರ. ಅನೇಕ ವೀರಾಗ್ರಣಿಗಳು ರಾಕೆಟ್ ಏರಿ ಅಂತರಿಕ್ಷದಲ್ಲಿ ನಡೆದ ಅನುಭವವೂ ನಮಗೆ ದೊರೆತಿದೆ. ವ್ಯಾಲಂಟಿನ ತೆರೆಷ್ಕೋವ ಎಂಬ ರಷ್ಯನ್ ಮಹಿಳೆ ಈ ರೀತಿ ಅಂತರಿಕ್ಷದಲ್ಲೇ ನಡೆದಾಡಿದ ಮೊದಲ ಮಹಿಳೆ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಈಗ ಇವೆರಡು ವಿಶೇಷ ನಡಿಗೆಯ ನಡೆ ಹೇಳಲೇ ಬೇಕಾಗಿದೆ.. ಮೊದಲನೆಯದು ವಾಕ್ ಮನ್. ಆಗೆಲ್ಲ ಸಣ್ಣ ಟ್ರಾನ್ಸಿಸ್ಟರ್ ರೇಡಿಯೋಗಳನ್ನು ಕಿವಿಗೆ ಆನಿಸಿಕೊಂಡು ಸುಮಧುರ ಹಾಡುಗಳನ್ನು ಆಲಿಸುತ್ತಾ ನಮಗಳ ಓಡಾಟ ನಡೆಯುತ್ತಿತ್ತು. ಇದರಿಂದ ಉತ್ಸಾಹಿತರಾದ ಸೋನಿ ಎಂಬ ಸಂಸ್ಥೆ ಹುಟ್ಟು ಹಾಕಿದ್ದು ವಾಕ್ ಮನ್ ಎಂಬ ಚಿನ್ನ (ಚಿಕ್ಕ) ಅಂಗೈ ಅಗಲದ ಸಣ್ಣ ಉಪಕರಣ. ಇದರಲ್ಲಿ ನಮಗಿಷ್ಟವಾದ ಕ್ಯಾಸೆಟ್ ಗಳನ್ನು ತೂರಿಸಿ ನಡಿಗೆಯ ಆನಂದವನ್ನು ಅನುಭವಿಸುವ ಸುಖ ನೀಡಿದ್ದರು. ಅದರ ವಿಸ್ತೃತ ಬಾಗವಾಗಿ ಬಂದದ್ದು ವಾಕಿ ಟಾಕಿ. ಹೆಸರೇ ಹೇಳುವಂತೆ ವಾಕು (ನಡಿಗೆ) ಟಾಕು (ಮಾತು). ಇದು ಈಗೆಲ್ಲ ಅತಿಶಯ ವ್ಯಕ್ತಿಗಳನ್ನು ಕಾಯಲು ನೇಮಕ ಗೊಂಡಿರುವ ರಕ್ಷಣಾ ಅಧಿಕಾರಿಗಳ ಕೈಯಲ್ಲಿ ಇರುತ್ತದೆ. ಅವರುಗಳು ನಡೆದಾಡುತ್ತಾ ಬಾಲ್ ಬೈ ಬಾಲ್ ಕಾಮೆಂಟರಿ ಯನ್ನು ಆಲಿಸುತ್ತ ಇರುತ್ತಾರೆ. ಇದು ಅವರುಗಳು ಕಾಯುತ್ತಿರುವ ಮಹನೀಯರುಗಳ ಚಲನವಲನಕ್ಕೆ ಧಕ್ಕೆ ಬಾರದೇ ಇರಲು ನೋಡಿಕೊಳ್ಳುವುದಾಗಿರುತ್ತದೆ.

ಈಗಂತೂ ನಡಿಗೆ ಬಾರದ ಮಕ್ಕಳಲ್ಲೂ ಮೊಬೈಲ್ ಎಂಬ ವಾಕ್ ಮನ್ ಕಡ್ಡಾಯವಾಗಿದೆ.

ಇಷ್ಟೆಲ್ಲ ಹೇಳಿದ ಮೇಲೆ ಇನ್ನೊಂದು ಈ ರೀತಿಯ ನಡಿಗೆ ತಿಲಕರ ಬಗ್ಗೆ ಹೇಳದಿದ್ದರೆ ನಮ್ಮ ಈ ವಾಕ್ ಸ್ವಾತಂತ್ರಕ್ಕೆ ತೂಕವೇ ಇರುವುದಿಲ್ಲ. ಅದೇ ಚಾರಣಿಗರು. ನನ್ನೊಬ್ಬ ಸ್ನೇಹಿತ, ಶ್ರೀವತ್ಸ ಇದರಲ್ಲಿ ಅನುಪಮ ಶೂರ, ಧೀರ. ಅವರಿಗೆ ಹಿಮಾಲಯದ ತಪ್ಪಲೇ ತಾಯಿಯ ಮಡಿಲು. ಇವರು ಅನೇಕ ಯುವ ಚಾರಣಿಗರಿಗೂ ಮಾರ್ಗದರ್ಶಕರಾಗಿದ್ದಾರೆ. ನಮಗಳಿಗೆ ಪಕ್ಕದ ನಂದಿ ಬೆಟ್ಟದಿಂದ ಮೊದಲಾಗಿ ಆಚೆನ ಶಿವಗಂಗೆ, ದೇವರಾಯನ ದುರ್ಗ, ಚಾಮುಂಡಿ ಬೆಟ್ಟಗಳನ್ನು ಹಲವೊಮ್ಮೆ ಕಾಲ್ನಡಿಗೆಯಲ್ಲೇ ಏರಿದ ಅನುಭವ ಇದೆ. ಇದರ ಜೊತೆಯಲ್ಲಿ, ಇತ್ತೀಚೆಗೆ ಸಕಲೇಶಪುರದ ಮಂಜಿರಾಬಾದ್ ಕೋಟೆಗೆ ಸುಮಾರು 200 ಮೆಟ್ಟಿಲುಗಳನ್ನು ಹತ್ತಿ ಲಗ್ಗೆ ಇಟ್ಟ ಪರಸಂಗ ಮಾಡಿದ್ದೇನೆ. ಇದೂ ಸಹ ಲೀಲಾಜಾಲವಾದ ನಡಿಗೆಯೇ, ಮೊನ್ನೆ ಚಂದನ ಚಾನೆಲ್ ನಲ್ಲಿನ ರಸ ಪ್ರಶ್ನೆ ಕಾರ್ಯಕ್ರಮಕ್ಕೆ ಬಂದಿದ್ದ ಒಬ್ಬಾತನ ನಡಿಗೆಯ ಸಾಹಸಗಾಥೆ ಹೀಗಿದೆ. ಆತ ಸುಮಾರು ಮೂವತ್ತಕ್ಕೂ ಹೆಚ್ಚು ಬಾರಿ ಬೆಂಗಳೂರಿನಿಂದ ತಿರುಪತಿಗೆ ಕಾಲ್ನಡಿಗೆಯ ಸಾಹಸ ಮಾಡಿದ್ದಾರೆ. ಇನ್ನಷ್ಟು ಮಾಡುವ ಇರಾದೆ ಇದೆಯಂತೆ. ಇಂತಹವರನ್ನಲ್ಲವೇ ಮಗಧೀರ ಎನ್ನ ಬೇಕು.

ಕಡೆಯದಾಗಿ ಹೇಳಲೇ ಬೇಕಾದ ಒಂದು ವಿಷಯವೆಂದರೆ ಇಷ್ಟೆಲ್ಲ ಸ್ವತಂತ್ರ ವಾಕ್ ಮಾಡಿಸುವ ನಮ್ಮ ಪಾದಗಳಿಗೆ ರಕ್ಷೆ ಬೇಡವೇ. ಪುರಾಣೇತಿಹಾಸವನ್ನು ಹಿಂದಿರುಗಿ ಇಣುಕಿದಾಗ ಅಷ್ಟೊಂದು ವಿವರ ಸಿಗುವುದಿಲ್ಲ. ಬಹುಪಾಲು ಬರಿಗಾಲ ಬಂಟರೇ. ಆದರೂ ಕೆಲವು ವಿಶೇಷ ವ್ಯಕ್ತಿಗಳಿಗೆ ಥಡಾವು, ಹಾವುಗೆ ಇತ್ಯಾದಿ ಇರುತ್ತಿದ್ದವು. ಈಗಲೂ ನಮ್ಮಲ್ಲಿ ಕಾವಿ ಧಾರಿಗಳ ಒಂದು ಮೆಚ್ಚಿನ ತೊಡುಗೆ ಹಾವುಗೆ ಆಗಿರುತ್ತದೆ. ನಮಗೆಲ್ಲ ಬಿಡಿ, ಒಂದು ಜೊತೆ ಚರ್ಮದ ಚಪ್ಪಲಿ. ಅದು ಸವೆಯುವವರೆಗೂ ನಮ್ಮ ಸೇವೆ. ಉಂಗುಷ್ಟವೋ, ಪಕ್ಕದ ಪಟ್ಟಿಯೋ ಕಿತ್ತರೆ ಅದನ್ನು ತಂದುರಸ್ತಿ ಮಾಡುವ ಕುಶಲ ಕರ್ಮಿಗಳಿರುತ್ತಿದ್ದರು. ಕೆಲವು ವಿಶೇಷ ಸಂಗತಿಗಳಲ್ಲಿ ಕ್ಯಾನ್ವಾಸ್/ಚರ್ಮದ ಷೂಗಳೂ ನಮಗಳ ಕಾಲುಗಳನ್ನು ಅಪ್ಪಿಕೊಂಡಿದೆ. ಈಗ ಬಿಡಿ ಆಟಕ್ಕೇ ಒಂದಾದರೆ ಓಟಕ್ಕೆ ಮತ್ತೊಂದು,. ನಡಿಗೆಗೆ ಇನ್ನೊಂದು . ಬಾಟ, ಕರೋನಗಳೆಲ್ಲಾ ಟಾಟಾ ಮಾಡಿ ವಾಕರೂ, ವಾಕ್ ಮೇಟ್, ಕ್ರೂಕ್ಸ್ , ಖಾದಿಮ್ಸ್ ಹೀಗೆ ಇವೆಲ್ಲ ನಮಗಳಿಗೆ ಪಾದ ರಕ್ಷಣೆ ಕೊಡುತ್ತಿವೆ. ಇವುಗಳ ಜೊತೆಯಲ್ಲಿ ಇದ್ದ ' ನಮ್ಮ' ಮೇಕ್ ಇನ್ ಇಂಡಿಯಾ' 'ಲಿಡ್ ಕರ್' ಲಿಡ್ ತೆಗೆದು ತಳ ಕರ ಕಲಾದ ಪಾತ್ರೆಯಂತೆ ಆಗಿದೆ. ನಾವು ನಡೆಯುತ್ತೇವೆಯೋ ಇಲ್ಲವೋ ಅದರ ಪರಿವೆ ಅವುಗಳಿಗೆ ಬೇಕಾಗಿಲ್ಲ. ಹೊರ ಹೊರಟರೆ ನಿನ್ನ ಕಾಲಿಗೆ ನಾನೇ ಶೃಂಗಾರ ಎನ್ನುವಂತೆ ಹಲ ಬಗೆಯ ಅಲಂಕಾರದಲ್ಲಿ ತನದೇ ಧಿಮಾಕಿನಲ್ಲಿ ನಮಗಳ ಕಾಲ್ಕೆಳಗೇ ಮೆರೆಯುತ್ತವೆ.

■


ಯಾಕೋ ಹೊಟ್ಟೆ ಜಾಸ್ತಿ ಹಸಿವಾಗುತ್ತಿದ್ದರಿಂದ ಪರಮೇಶಿ, ಪಮ್ಮಿಗೆ – ಇವತ್ತೇನು ತಿಂಡಿ ಎಂದು ಕುತೂಹಲದಿಂದ ಕೇಳಿದಾಗ, ಪಮ್ಮಿ – ಇವತ್ತು "ರವೆ ಬಿರಿಯಾನಿ" ಕಣ್ರೀ ಎಂದಳು. ಏನೇ ಅದು ಹೊಸದಾಗಿ ಇದೆಯಲ್ಲ ? ಎಂದು ಸಂತೋಷ ಪಟ್ಟಾಗ, ಹೌದ್ರೀ ನಂಗೂ ಎಷ್ಟು ದಿನ ಅದೇ ಐಟಂನನ್ನು ಉಪ್ಪಿಟ್ಟು, ಉಪ್ಪಿಟ್ಟು ಅಂತ ಕರೆದು, ಕರೆದು ಬೋರಾಗಿತ್ತಿ, ಅದಕ್ಕೆ ಅದನ್ನೇ ಹೊಸದಾಗಿ ನಾಮಕರಣ ಮಾಡ್ದೆ ಎಂದಾಗ, ಪರಮೇಶಿಯ ತಲೆ ಗಿರ್ ಅಂತ ತಿರುಗಿ, ಮತ್ತೆ ತಹಬದಿಗೆ ಬಂತಂತೆ...

–ವಿ.ವಿ. ರಾವ್

# *ಟಿ ವಿ ಆಂಟೆನಾ ಮತ್ತು ಡಿಶ್ : ಒಂದು ಹರಟೆ*

**ರಾಂಕಿ ಬೆಳ್ಳೂರ್**

*ರಾಂಕಿ ಬೆಳ್ಳೂರ್* ಊಹೆಗೆ ಸಿಲುಕಿದ್ದು ಮನೆಯೋರೆಲ್ಲಾ ಸ್ವರ್ಗ ಸೇರಿದ್ರೂ ಮನೆ ಮೇಲಿರೋ ಹಳೇ ಟಿ ವಿ ಆಂಟೆನಾ ಇನ್ನೂ ನೇತಾಡ್ತಿತ್ತು  ಅದರ ಪಕ್ಕದಲ್ಲಿ ಒಂದು 'ಡಿಶ್', ಆಕಾಶಾನೇ ದಿಟ್ಟಿಸಿ ನೋಡ್ತಿತ್ತು. ಆಗ ನಡೆದ ಸಂಭಾಷಣೆಯ ತುಣುಕು:



ಆಂಟೆನಾ: ಯೇನ್ ಸದಾಕಾಲ ಮಳೆ ಬರತ್ತಾ ಅಂತ ರೈತರು ಆಕಾಶ ನೋಡೋ ಹಾಗೇ, ನೀನೂ ಮೇಲೆ ನೋಡ್ತಿರ್ತ್ಯಲ್ಲೋ ಈ ಕಡೆ ತಿರುಗಿ ಮಾತಾಡಿದ್ರೆ ಸಿಗ್ನಲ್ ಬಿದ್ ಹೋಗತ್ತಾ?

ಡಿಶ್: ಅದು ಹಾಗಲ್ಲ ಆಂಟ್ ಅಣ್ಣ ಅಲ್ಲ ಆಂಟೆನಾ ನಮಗೆ ಹುಟ್ಟಿನಿಂದ 'ಲುಕ್ ಅಪ್ ಟು ಅಧರ್ಸ್' ಅಂತ ಹೇಳಿಕೊಟ್ಟಿದ್ದಾರೆ ಅದಕ್ಕೆ ಹಾಗೆ

ಆಂಟೆನಾ: ಮಣ್ಣಾನ್ಗಟ್ಟಿ ಹುಟ್ಟಿನಿಂದ 'ಲುಕ್ ಅಪ್'..ಅಲ್ಲ..ನೀನು ಹುಟ್ಟಿನಿಂದ ಬಾಂಡ್ಲಿ ಕಣೋ ನನಗೇನಾದ್ರೂ ಅಡುಗೆ ಮಾಡಕ್ ಬಂದಿದ್ರೆ, ವಾಂಗೀಭಾತ್ ಕಲಿಸಿಬಿಡ್ತಿದ್ದೆ ನಿನ್ನ ಒಳಗೆ  ಒಂದ್ ಕಾಗೇನೋ ಪಾರಿವಾಳನೋ ಕೊರಕ್ಕೊ ಆಗಲ್ಲ ನಿನ್ ಮೇಲೆ ನನ್ ಮೇಲೆ ಎಷ್ಟೋತ್ತು ಕೂತು ಆಲೋಚನೆಗಳು ಮಾಡತಾವೆ ಗೊತ್ತಾ ಅವು  ವರ್ಷಗಳ ಅನುಭವದಿಂದ ಐ ಕ್ಯಾನ್ ಕ್ಯಾಚ್ ದಿ ಬರ್ಡ್ಸ್ ಮೈಂಡ್ ಸಿಗ್ನಲ್ಸ್ ಟೂ ! ಯಾವ ರೋಡಲ್ಲಿ ಇಲಿ ಸತ್ ಬಿದ್ದಿದೆ, ಎಲ್ಲಿಗೆ ಎಷ್ಟೊತ್ತಿಗೆ ಹೋದರೆ ಪ್ರಸಾದ ಹಂಚ್ತಾ ಇರ್ತಾರೆ, ಯಾವ ಮನೆ ಮೇಲೆ ಅನ್ನ ಇಟ್ಟಿದ್ದಾರೆ, ಅಂತಾ ಯೋಚಿಸೋ ಕಾಗೆಗಳ ಮನೋ ಲಹರಿ ಓದಬಲ್ಲೆ ನಾನು !

ಡಿಶ್ : ಇಷ್ಟೆಲ್ಲಾ ಗೊತ್ತಿರೋ ನಿನಗೆ, ಮನುಷ್ಯ ಯಾವ ಕಾರ್ಯಕ್ರಮ ಸೀರಿಯಸ್ ಆಗಿ ನೋಡ್ತಿದಾರೆ ಅನ್ನೋ ಬೇಸಿಕ್ ಅಂಡಸ್ಟ್ಯಾಂಡಿಂಗ್ ಕೂಡ ಬೆಳಿಸಿಕೊಳ್ಳಲಿಲ್ವಲ್ಲ ನೀನು ?

ಆಂಟೆನಾ : ಅದು ಹೆಂಗೆ ಈ ರೀತಿಯಾದ ಅಲೀಗೇಷನ್ ಮಾಡ್ತ್ಯ ನೀನು?

ಡಿಶ್: ಇನ್ನೇನ್ ಮತ್ತೆ !? ನಿನ್ ಕಾಲದಲ್ಲಿ ಒಳ್ಳೆ ರಾಮಾಯಣ–ಮಹಾಭಾರತ ಬರೋವಾಗಲೋ, ಇಂಡಿಯಾ ಪಾಕಿಸ್ತಾನ ಮ್ಯಾಚ್ ನಡೆಯೋ ಟೈಮ್–ಗೋ ಸಿಗ್ನಲ್

ಕ್ಯಾಚ್ ಮಾಡದೇ ಜನರನ್ನ ಗೋಳು ಹುಯ್ಕೋತಿದ್ಯಂತೆ ?! ಎಂಥ ಸ್ಯಾಡಿಸ್ಟ್ ನೀನು !

ಆಂಟೆನಾ: ಇನ್ನೇನ್ ಮತ್ತೆ ಜನರು ನನ್ ಮೇಲೆ ಕಾಚ ಬನೀನ್ ಎಲ್ಲ ಹರವಾಕ್ ಬಿಡೋರು ನಾ ಬಿಡ್ತೀನಾ?! ಸಾಲದ್ದಕ್ಕೆ, ನನ್ ವಯಸ್ಸೇನೂ ಅದಕ್ಕೆ ಬೆಲೆ ಕೊಡದೆ..ಯಾವ್ದೋ ಚಿಳ್ಪಾರೀನ್ ಹತ್ತಿಸಿ ನನ್ನ ತಲೇನ ಎತ್ತೆತ್ಲಾಗೋ ತಿರಿಗ್ಸಿ 'ಬಂತಾ ಬಂತಾ ' ಅಂತಾ ಕೂಗೋದ್ ಬೇರೆ !

ಡಿಶ್ : ಅಯ್ಯೋ ಮನುಷ್ಯರು ಮನುಷ್ಯರಿಗೇ ಬೆಲೆ ಕೊಡಲ್ಲ... ಇನ್ನು ನಾನು ನೀನು ಎಲ್ಲ, ಜಡ.. ನಮಗ್ ಬೆಲೆ ಕೊಡ್ತಾರೆ ಅಂತ ಎಕ್ಸ್‌ಪೆಟ್ ಮಾಡಬೇಡ !

ಆಂಟೆನಾ : ಮನೆಯೊರ್ಗೆಲ್ಲಾ ನಾವ್ ಬೇಕು.. ಆದರೂ ಮನೆ ಒಳಗೆ ಸೇರಿಸಲಿಲ್ಲ ನಮ್ಮನ್ನ !

ಡಿಶ್: ಏನೇ ಹೇಳು ನಮ್ಮನ್ನ ಮನೆಯೋರಹಾಗೆ ಜನ ಯಾವತ್ತೂ ಸ್ವೀಕರಿಸಲಿಲ್ಲ ಹೊರಗಿನೊರ್ ಹಾಗೆ ಮನೆ ಹೊರಗೆ ಇಟ್ ಬಿಟ್ರು ಅದೇ ಆ ಸೆಟ್ ಟಾಪ್ ಬಾಕ್ಸು ಈಚೆಗೆ ಬಂದಿರೋ ಮಳ್ಳಿ ಮನೆ ಒಳಗೇ ಸೇರ್ಕೊಂಡಿತು

ಆಂಟೆನಾ: ಮನೆ ಒಳಗೇನು ರೂಮ್ ಒಳಗೂ ನ್ಯುಗ್ಬಿಡ್ತು

ಡಿಶ್ : ಅಯ್ಯೋ..ಅದರ ಕಾಲಾನೂ ಮುಗೀತು.. ಅದನ್ನೂ ಹೊರ್ಗೆ ಹಾಕಿದ್ ನೋಡಿದೀನಿ ಈಗೇನೋ ಫೈರ್ ಸ್ಟಿಕ್ ಅಂತ ಹೊಸಬಳು ಬಂದಿದ್ದಾಳಂತೆ ಅವಳ ರಾಜ್ಯಭಾರ ಶುರು ಆಗಿದೆ ಗೊತ್ತಾ ?

ಆಂಟೆನಾ: ಹೊಸ ಹೊಸ ಆವಿಷ್ಕಾರಗಳಿಗಂತೂ ಕೊನೆ ಅನ್ನೋದೇ ಇಲ್ಲ... ಒಂದರ ಹಿಂದೆ ಒಂದು ಇಂಪ್ರೂವ್ಡ್ ವರ್ಷನ್-ಗಳು ಬರ್ತಾನೇ ಇವೆ...

ಡಿಶ್ : ಆಂಟೆನಾ, ಕೇಬಲ್, ಡಿಶ್, ಸೆಟ್ ಟಾಪ್ ಬಾಕ್ಸ್, ಫೈರ್ ಸ್ಟಿಕ್ , ಕನೆಕ್ಟೆಡ್ ಟಿವಿ..

ಆಂಟೆನಾ: ಅಯ್ಯೋ ಬಿಡು ನಮ್ದು ಮುಗಿದ್ ಹೋದ್ ಕಾಲ ಮನೆ ಹೋಗು ಅಂತಿದೆ ಗುಜರಿ ಅಂಗಡಿ ಬಾ ಅಂತಿದೆ.. ಮನುಷ್ಯಂಗೆ ಇನ್ನೆಷ್ಟು ಮುಂದ್ ವರೆಯೋ ಆಸೇನೋ ಏನೋ ಫೈರ್ ಸ್ಟಿಕ್ ಇರ್ಲಿ ಮ್ಯಾಚ್ ಸ್ಟಿಕ್ ಕೊಡು ಒಂದ್ ಸ್ಮಾಲ್ ಎಳೀತೀನಿ.....

■



# ಗೊರಕೆ ಪುರಾಣ

ಸಿಂಧು ಹರಿಥಸ್

ಒಮ್ಮೆ ದೇವಲೋಕದಲ್ಲಿ ದೇವತೆಗಳು, ಋಷಿಗಳು, ಗಂಧರ್ವರು, ಯಕ್ಷ-ಕಿನ್ನರರು ಎಲ್ಲರಿಗೂ ಒಂದು ಸ್ನೇಹ ಕೂಟವನ್ನು ಏರ್ಪಡಿಸಲಾಗಿತ್ತು. ಎಲ್ಲರೂ ಸಂತೋಷದಿಂದ ಕಾಲ ಕಳೆಯುತ್ತಿದ್ದರು. ಒಬ್ಬ ಯಕ್ಷನು ಮಾತ್ರ, ಬಿಟ್ಟ ಬಾಯಿ ಬಿಟ್ಟ ಹಾಗೆ ಏನನ್ನೋ ನೋಡುತ್ತ ನಿಂತಿದ್ದನು. ಯಕ್ಷನು ದಿಟ್ಟಿಸಿ ನೋಡುತ್ತಿರುವುದನ್ನು ಗಮನಿಸಿದ ನಾರದರು,

"ಎಲೈ ಯಕ್ಷನೇ, ಏನು ಹಾಗೇ ನೋಡುತ್ತಿರುವೆ?" ಎಂದು ಪ್ರಶ್ನಿಸಿದರು.

"ಮುನಿವರ್ಯರೆ, ದೇವಲೋಕಕ್ಕೆ ಇದು ನನ್ನ ಮೊದಲ ಭೇಟಿ. ದೇವತೆಗಳ ಮುಖ ಚಹರೆ, ಚಿಹ್ನೆ, ವಾಹನ ಇತ್ಯಾದಿಗಳನ್ನು ನೋಡಿ ಅವರನ್ನು ಗುರುತಿಸಿದೆ. ಆದರೆ, ಅದೋ ನೋಡಿ ಅಲ್ಲಿ ಕುಳಿತಿರುವಳಲ್ಲ, ಆ ದೇವಿ ಯಾರು? ಅವಳನ್ನು ನೋಡುತ್ತಲೇ ಮನಸ್ಸಿಗೆ ಶಾಂತಿ ದೊರೆಯುತ್ತಿದೆ. ಆಯಾಸವೆಲ್ಲಾ ಕಳೆಯುವ ಭಾವನೆ. ಆಕೆಯ ಬಳಿ ಇರುವ ಆ ಪುಟ್ಟ ಹುಡುಗ ಯಾರು? ಒಮ್ಮೊಮ್ಮೆ ಆಕೆಯನ್ನು ಹಿಂಬಾಲಿಸುತ್ತಿದ್ದಾನೆ, ಮತ್ತೆ ನೋಡಿದರೆ ಅವನು ಮಾಯ! ಅವರಿಬ್ಬರ ಬಗ್ಗೆ ತಿಳಿಯುವ ಕುತೂಹಲ. ಅವರ ಬಗ್ಗೆ ತಿಳಿಸುವಿರಾ?" ಎಂದು ಕೇಳಿಕೊಂಡನು.

ಯಕ್ಷನು ವರ್ಣಿಸಿದ ದೇವಿ ಮತ್ತೆ ಹುಡುಗನನ್ನು ನೋಡಿ, ನಾರದರು ನಗುತ್ತಾ ಹೇಳಿದರು.

"ಯಕ್ಷನೇ, ಕೇಳು. ಆ ದೇವಿಯೇ ಸಕಲ ಜೀವರಾಶಿಗಳಿಗೆ ಶಾಂತಿ ನೀಡಿ, ಪುನರುತ್ಸಾಹ ಕರುಣಿಸುವ ನಿದ್ರಾದೇವಿ! ಅವಳ ಬಳಿ ಓಡಾಡುತ್ತಿರುವ ಹುಡುಗ ಅವಳ ಪುತ್ರ ಗೊರಕೆ. ನಿನಗೆ ಗೊರಕೆ ಪುರಾಣವನ್ನು ಹೇಳುತ್ತೇನೆ ಕೇಳು!"

"ಭೂಲೋಕದಲ್ಲಿ ಶೇಖರ ಎಂಬ ಒಬ್ಬ ಹುಡುಗನಿದ್ದ. ಅವನ ಮೇಲೆ ನಿದ್ರಾದೇವಿಯ ಕೃಪೆ ಯಥೇಚ್ಛವಾಗಿತ್ತು. ನಿದ್ರಾದೇವಿಯನ್ನು ಗೊರಕೆಯು ಸಾಮಾನ್ಯವಾಗಿ ಹಿಂಬಾಲಿಸುತ್ತಿದ್ದನು. ಹಾಗಾಗಿ ಶೇಖರ ನಿದ್ರೆ ಮಾಡಿದಾಗಲೆಲ್ಲಾ ಗೊರಕೆ ಅವನನ್ನು ಬಿಡುತ್ತಿರಲಿಲ್ಲ. ಶೇಖರನ ಸುತ್ತಲಿನ ಜನರಿಗೆ ಅವನ ಗೊರಕೆಯಿಂದ ಸಮಸ್ಯೆ ಉಂಟಾಗುತ್ತಿತ್ತು!"

ಮದುವೆ ವಯಸ್ಸಿಗೆ ಬಂದ ಶೇಖರನನ್ನು ಅವನ ತಾಯಿ ಸರೋಜಮ್ಮನವರು, ಪಕ್ಕದ ಊರಿಗೆ ಹುಡುಗಿ ನೋಡಲು ಕರೆದು ಕೊಂಡು ಹೋಗುತ್ತಿದ್ದರು. ರೈಲಿನಲ್ಲಿ ಹೋಗುವಾಗ ಶೇಖರನಿಗೆ ನಿದ್ರೆಯ ಮಂಪರು ಹತ್ತಿತು. ಗೊರಕೆಯೂ ಶುರುವಾಯಿತು. ಸಹ ಪ್ರಯಾಣಿಕರೊಬ್ಬರು,

"ಕಿವಿ ತೂತಾಗ್ತಿದೆ. ನಿಮ್ ಹುಡ್ಗಂಗೆ ಗೊರ್ಕೆ ನಿಲ್ಸಕ್ಹೇಳಿ" ಎಂದು ಸಿಡುಕಿದರು. ಮಗನ ಗೊರಕೆ ಅವನ ಹಿಡಿತದಲ್ಲಿಲ್ಲ ಎಂದು ತಿಳಿದಿದ್ದ ಸರೋಜಮ್ಮ, ಮೇಲಿದ್ದ ಸೂಚನೆಯತ್ತ ಬೆರಳು ಮಾಡಿ,

"ಅಲ್ನೋಡಿ, ರೈಲಿನ ಪ್ರಯಾಣದಲ್ಲಿ ಧೂಮ್ರಪಾನ, ಮದ್ಯಪಾನ ನಿಷೇಧಿಸಿದೆ ಅಂತ ಬರೆದಿದೆ. ಗೊರಕೆ ನಿಷೇಧಿಸಿದೆ ಅಂತ ಬರ್ದಿಲ್ಲ. ಅಡ್ಜಸ್ಟ್ ಮಾಡ್ಕೊಳ್ಳಿ" ಅಂತ ದಬಾಯಿಸಿ ಬಿಟ್ಟರು.

ಶೇಖರ ಊರು ತಲುಪಿ, ಲತಾಳನ್ನು ಭೇಟಿ ಮಾಡಿ, ಪರಸ್ಪರ ಒಪ್ಪಿ, ಮದುವೆಯೂ

ಆದರು. ಗಂಡ ಹೆಂಡತಿ ಮೊದಲ ಬಾರಿ ಮನೆದೇವರ ದರ್ಶನಕ್ಕೆ ಬಸ್ಸಿನಲ್ಲಿ ಹೋಗುತ್ತಿದ್ದರು. ಆಲ್ಲೂ ಶೇಖರನ ಗೊರಕೆ ಶುರು! ಅವನ ಪಕ್ಕದಲ್ಲಿ ಕುಳಿತಿದ್ದ ಮುದುಕಿಯೊಬ್ಬರು,

"ಅಯ್ಯೋ ಪಾಪ. ಬಸ್ಸಲ್ಲಿ ಬಂದು ಮಲಗಿದ್ದಾನೆ. ಮನೇಲಿ ಹೆಂಡ್ತಿ ಕಾಟ, ನಿದ್ದೆ ಮಾಡಕ್ಕಾಗಲ್ಲ ಅನ್ಸತ್ತೆ" ಎಂದು ಲತಾಳ ಬಳಿಯೇ ಅನುಕಂಪ ವ್ಯಕ್ತ ಪಡಿಸಿದರು. ಲತಾಳಿಗೆ ಗಂಡನ ಗೊರಕೆ ಮೇಲಿನ ಬೇಸರ ಒಂದೆಡೆಯಾದರೆ, ಮುದುಕಿಯ ಮಾತಿನಿಂದ ಕೋಪ ಇನ್ನೊಂದೆಡೆ.

ಇದೇ ರೀತಿ ಎಷ್ಟೋ ಸನ್ನಿವೇಶಗಳಲ್ಲಿ ಗೊರಕೆಯಿಂದಾಗಿ ಹಲವು ಮಾತುಗಳು, ನಿಂದನೆಗಳು ಬಂದ ಕಾರಣ ಇದಕ್ಕೆ ಪರಿಹಾರ ಹುಡುಕಲು ಶೇಖರ ನಾಟಿ ವೈದ್ಯರ ಬಳಿ ಹೋದ.




"ಇದೇನಿಲ್ಲ ಬುಡಿ. ಇನ್ನೂ ಎಂಥೆಂತದ್ದೋ ರೋಗ ವಾಸಿ ಮಾಡಿಲ್ಲ ನಾನು. ಒಂದ್ ತಿಂಗ್ಳು ಕೊಡಿ ಸಾಕು. ಗೊರ್ಕೆ ಓಡೊಂಟೋಯ್ತದೆ" ಎಂದು ಹೇಳಿ ಯಾವುದೋ ಬೇರಿನ ರಸ ಕೊಟ್ಟರು. ಔಷಧಿ ಕುಡಿದ ನಂತರ ಹೋಗಿದ್ದು ಶೇಖರನ ಗೊರಕೆ ಅಲ್ಲ, ಊಟದ ಮೇಲಿನ ಆಸಕ್ತಿ! ಔಷಧಿ ಹೊಂದದೆ ಅದನ್ನು ನಿಲ್ಲಿಸಿದ.

ನಂತರ ಒಬ್ಬ ಫಕೀರನ ಬಳಿ ಉಪಾಯ ಹುಡುಕಲು ಹೊರಟ, "ಸಾಬ್, ಇದು ಶೈತಾನ್ದು ಕೆಲ್ಸ." ಅಂತ ಹೇಳಿ ನವಿಲಿನ ಗರೀಲಿ ಹೊಡೆದು, ಬೂದಿ ಎರಚಿದ ಫಕೀರ, "ಇನ್ಮೇಲ್ ನೋಡಿ ಅವಾಜ್ ಇಲ್ದೆ ನಿದ್ದೆ ಮಾಡ್ತೀರಿ" ಎಂದ. ಗೊರಕೆ ಹೋಗೋ ಬದಲು, ನಿದ್ದೆಯಲ್ಲಿ ಬೆಚ್ಚಿ ಬೀಳಲು ಆರಂಭಿಸಿದ ಶೇಖರ.

ಕಡೆಗೆ ಇದ್ಯಾವ ವಿಧಾನವೂ ಸರಿ ಹೋಗದೆ, ಅಲೋಪಥಿ ವೈದ್ಯರ ಮೊರೆ ಹೋದ ಶೇಖರ. "ನಿಮ್ಮ ಮೂಗಲ್ಲಿ ದುರ್ಮಾಂಸ ಬೆಳ್ದಿದೆ. ಕತ್ತರ್ಸಿದ್ರೆ ಸಾಕು ಗೊರ್ಕೆ ಮಾಯ ಆಗತ್ತೆ" ಅಂತ ಸಲಹೆ ಕೊಟ್ಟರು. ಅದೇ ರೀತಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ.

ಅರಿವಳಿಕೆಯ ಮಂಪರಿನಲ್ಲಿದ್ದ ಶೇಖರನ ಕನಸಿನಲ್ಲಿ ಸಾಕ್ಷಾತ್ ನಿದ್ರಾದೇವಿ ಬಂದಳು. ಕೆಂಗಣ್ಣಿನಿಂದ, "ಶೇಖರ, ನಿನಗೆ ನಾನು ವಿಶೇಷವಾಗಿ ಕೃಪೆಯನ್ನು ನೀಡಿದ್ದೆ. ಆಗಾಗ ಬರುತ್ತಿದ್ದ ನನ್ನ ಮಗನನ್ನು ತೊಲಗಿಸಲು ಇಷ್ಟು ಪ್ರಯತ್ನ ಪಡುತ್ತಿರುವಿಯಲ್ಲ. ಇನ್ನು ನಿನಗೆ ನನ್ನ ಅನುಗ್ರಹ ಸಿಗದು. ನಿದ್ರೆಯಿಲ್ಲದೆ ಹುಚ್ಚನಾಗುವೆ" ಎಂದು ಶಪಿಸಿದಳು.

ದೇವಿಯ ವಕ್ರದೃಷ್ಟಿಗೆ ಹೆದರಿದ ಶೇಖರನು ತನ್ನನ್ನು ಕ್ಷಮಿಸಿ, ಉದ್ಧರಿಸಲು

ಪರಿಪರಿಯಾಗಿ ಬೇಡಿಕೊಂಡನು. ಪರಮ ದಯಾಳುವಾದ ದೇವಿಯು, "ಕೊಟ್ಟ ಶಾಪ ಹಿಂಪಡೆಯುವ ಹಾಗಿಲ್ಲ. ಆದರೆ ನೀನು ಬೇಡಿಕೊಳುತ್ತಿರುವುದರಿಂದ ಶರತ್ತಿನೊಂದಿಗೆ ನಿನಗೆ ನಿದ್ರೆಯನ್ನು ಕರುಣಿಸುವೆ. ನೀನು ಹಾಗು ನಿನ್ನ ಮುಂದಿನ ಪೀಳಿಗೆಯವರೆಲ್ಲರೂ ನನ್ನನ್ನು ಕರೆದಾಗಲೆಲ್ಲಾ ನನ್ನ ಮಗನೂ ಜೊತೆಗೆ ಬರುತ್ತಾನೆ" ಎಂದು ಹೇಳಿ ಅಂತರ್ಧಾನಳಾದಳು.

ಮುಂದೆ ಶೇಖರ, ಅವನ ಮಕ್ಕಳು, ಮೊಮ್ಮಕ್ಕಳು ಹೀಗೆ ಎಲ್ಲರೂ 'ಗೊರಕೆ ವಂಶದವರು' ಎಂದು ಪ್ರಸಿದ್ಧರಾದರು." ಇಷ್ಟು ಹೇಳಿ ನಾರದರು ಶ್ರೀಮನ್ ನಾರಾಯಣನ ಬಳಿ ಹೊರಟು ಹೋದರು.

ಈ ಕಥೆಯನ್ನು ಹೇಳಿದವರಿಗೂ, ಕೇಳಿದವರಿಗೂ ನಿದ್ರಾದೇವಿಯ ಕೃಪಾಕಟಾಕ್ಷವು ಸದಾ ಇರುವುದು ಹಾಗು ಒಮ್ಮೊಮ್ಮೆ ಬರುವ ಅವಳ ಮಗನನ್ನು ಪ್ರೀತಿ ಆದರಗಳಿಂದ ಸ್ವಾಗತಿಸಬೇಕು ಎಂದು ಹೇಳುವಲ್ಲಿಗೆ ಗೊರಕೆ ಪುರಾಣವು ಸಂಪೂರ್ಣವಾಯಿತು! ■

### ನೆನಪಾದ ಹೇರಳೇಕಾಯಿ ಉಪ್ಪಿನಕಾಯಿ ಪ್ರಸಂಗ

**ಪ್ರೊ. ಜಿ. ಅಶ್ವತ್ಥ್‌ನಾರಾಯಣ–ಹಿರಿಯ ವಿದ್ವಾಂಸರು**

ನಾನು ಕೊಳ್ಳೇಗಾಲದ ಮಹದೇಶ್ವರ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದಾಗ ಹೋಟೆಲ್ ಊಟವೇ ಗತಿ. ಆಗ ನನ್ನ ಸಹೋದ್ಯೋಗಿ ಮಿತ್ರರು ಕಾರ್ಯಕ್ರಮಗಳಿಗೆ ಕೊಳ್ಳೇಗಾಲಕ್ಕೆ ಬರುತ್ತಿದ್ದ ಅತಿಥಿಗಳಿಗೆ ಅವರ ಮನೆಯಲ್ಲಿ ಊಟದ ವ್ಯವಸ್ಥೆ ಮಾಡುತ್ತಿದ್ದರು. ಕಂಪನಿ ಕೊಡಲು ನನ್ನನ್ನೂ ಕರೆಯುತ್ತಿದ್ದರು. ಇವತ್ತು ನಿಮ್ಮ ಭವಿಷ್ಯದಲ್ಲಿ ಫುಲ್‌ಮೀಲ್ಸ್ ಯೋಗವಿದೆ ಎನ್ನುತ್ತಿದ್ದರು. ಮೊದಲನೇ ಸಲ ಹೋದಾಗ ಅವರ ಮನೆಯಲ್ಲಿ ಊಟಕ್ಕೆ ಬೆಳ್ಳುಳ್ಳಿ ಬಳಸಿದ್ದರು. ನನಗೆ ಬೆಳ್ಳುಳ್ಳಿ ಹಿಡಿಸುತ್ತಿರಲಿಲ್ಲವಾದ್ದರಿಂದ ಬರೀ ಮೊಸರನ್ನ ಮತ್ತು ಹೇರಳೇಕಾಯಿ ಉಪ್ಪಿನಕಾಯಿಯಲ್ಲಿ ಊಟ ಮುಗಿಸಿದ್ದೆ. ಮುಂದೆ ನನಗಾಗಿ ಆಕೆ ಬೆಳ್ಳುಳ್ಳಿರಹಿತ ಅಡುಗೆ ಮಾಡಿ ಜೊತೆಯಲ್ಲಿ ಧಾರಾಳವಾಗಿ ಹೇರಳೇಕಾಯಿ ಉಪ್ಪಿನಕಾಯಿ ಬಡಿಸುತ್ತಿದ್ದರು. ನಂತರ ನಾನು ಬೆಂಗಳೂರಿಗೆ ಬಂದೆ. ಬಹಳ ದಿನಗಳ ನಂತರ ಕಾರ್ಯಕ್ರಮದ ಪ್ರಯುಕ್ತ ಕೊಳ್ಳೇಗಾಲಕ್ಕೆ ಹೋದೆ. ಯಥಾಪ್ರಕಾರ ಅವರ ಮನೆಯಲ್ಲೇ ಊಟ. ಆ ಅನ್ನಪೂರ್ಣೆ ಬಹಳ ರುಚಿಯಾಗಿ ಬೆಳ್ಳುಳ್ಳಿರಹಿತ ಅಡುಗೆ ಮಾಡಿ ಮತ್ತೆ ಹೇರಳೇಕಾಯಿ ಉಪ್ಪಿನಕಾಯಿ ಬಡಿಸಿದರು. ಈ ಸಾರಿ ಉಪ್ಪಿನಕಾಯಿ ರುಚಿ ಬದಲಾಗಿತ್ತು. ಊಟವಾದ ಮೇಲೆ ನನ್ನ ಮಿತ್ರರು ನನ್ನೊಡನೆ ತಮಾಷೆಯಾಗಿ ಮಾತಾಡುತ್ತಾ ನೀವು ಉಂಡಮನೆಗೆ ಎರಡು ಬಗೆದರಲ್ಲಾ ಅಂದರು. ನನಗೆ ಗಾಬರಿಯಾಯಿತು. ಮತ್ತೆ ಅವರೇ ಹೇಳಿದರು. ನನ್ನಾಕೆ ಜೀವಮಾನದಲ್ಲೇ ಇನ್ನೊಬ್ಬರ ಮನೆಗೆ ಏನನ್ನೂ ಕೇಳಲು ಹೋಗಿರಲಿಲ್ಲ. ನಿಮ್ಮಿಂದ ಅವಳ ವ್ರತಭಂಗವಾಯಿತು ಮತ್ತು ನನ್ನ ಮಾನ ಕುಗ್ಗಿತು ಅಂದರು. ಯಾಕೆ ನನ್ನಿಂದ ಏನು ತಪ್ಪಾಯಿತು ಅಂತ ಕೇಳಿದೆ. ಅದಕ್ಕೆ ಅವರು ನಮ್ಮ ಮನೆಯಲ್ಲಿ ಹೇರಳೇಕಾಯಿ ಉಪ್ಪಿನಕಾಯಿ ಆಗಿಹೋಗಿತ್ತು. ಅತಿಥಿ ದೇವೋ ಭವ ಅಂತ ನೀವು ಬರ್ತೀರ ನಿಮಗೆ ಹೇರಳೇಕಾಯಿ ಉಪ್ಪಿನಕಾಯಿ ಬಹಳ ಇಷ್ಟ ಅಂತ ನಿಮಗಾಗಿ ಪಕ್ಕದ ಮನೆಗೆ ಹೋಗಿ ಅವರ ಮನೆಯಿಂದ ಹೇರಳೇಕಾಯಿ ಉಪ್ಪಿನಕಾಯಿ ತಂದು ನಿಮಗೆ ಬಡಿಸಿದಳು ಅಂದು ನಕ್ಕರು. ನನ್ನ ಹೇರಳೇಕಾಯಿ ಉಪ್ಪಿನಕಾಯಿ ಪ್ರೀತಿ ಅವರನ್ನು ಕುಬ್ಜರನ್ನಾಗಿ ಮಾಡಿತೇ ಎನ್ನುವ ಪ್ರಶ್ನೆ ಮಾತ್ರ ನನ್ನನ್ನು ಕಾಡಿತು.